# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ನವೆಂಬರ್, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೧೦

ಚಂದಾ ರೂ. ೨೦೦/- (೨೦೧೯ರ ಅಕ್ಟೋ.ನಿಂದ ಸೆಪ್ಟಂ. ೨೦೨೦ರವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-



ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಈ ಟಿಪ್ಪಣಿಗಳನ್ನು ಬರೆಯುತ್ತಿರುವ ಹೊತ್ತಿನಲ್ಲೇ ಮಹಾರಾಷ್ಟ್ರ ಮತ್ತು ಹರ್ಯಾಣಾ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಪ್ರಕಟವಾಗುತ್ತಿವೆ. ಕಳೆದ ಲೋಕಸಭಾ ಚುನಾವಣಾ ಫಲಿತಾಂಶಗಳನ್ನು ನೋಡಿ, ನಂತರ ಇತ್ತೀಚಿನ ಮೋದಿ-ಶಾ ಜೋಡಿಯ ಆಕ್ರಮಣಕಾರಿ ರಾಜಕಾರಣವನ್ನು ನೋಡಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಭವಿಷ್ಯದ ಬಗ್ಗೆ ಗಾಬರಿಗೊಂಡಿದ್ದ ಜನರು ಈ ಫಲಿತಾಂಶಗಳನ್ನು ಕಂಡು ಕೊಂಚ ನಿರಾಳವಾಗಿ ಉಸಿರಾಡುವಂತೆ ಆಗಿದೆ. ಲೋಕಸಭಾ ಚುನಾವಣೆಗಳ ನಂತರ ಬಿಜೆಪಿಯ ಆಟಾಟೋಪದ ರಾಜಕೀಯ ವರಸೆಗಳನ್ನು ನೋಡುತ್ತಿದ್ದವರು ಈ ಪಕ್ಷದ ನಾಗಾಲೋಟವನ್ನು ಸದ್ಯಕ್ಕೆ ತಡೆಯಲಾಗದೇನೋ ಎಂದು ಭಾವಿಸಿದ್ದವರು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ತನ್ನ ಮಿತ್ರ ಪಕ್ಷದೊಂದಿಗೆ ಸೋತು ಗೆದ್ದಿರುವ ಮತ್ತು ಹರ್ಯಾಣಾದಲ್ಲಿ ಅಧಿಕಾರದ ಹೊಸ್ತಿಲಿಗೇ ಬಂದಿರುವ ರೀತಿ ಶಾ ಅವರ 'ಕಾಂಗ್ರೆಸ್ ಮುಕ್ತ ಭಾರತ'ದ ಘಾತುಕ ಕರೆಯನ್ನು ಜನ ತಿರಸ್ಕರಿಸಿದ್ದಾರೆ ಎಂಬುದನ್ನು ಸೂಚಿಸುತ್ತಾ ರಾಷ್ಟ್ರದ ಉದಾರವಾದಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟ ಜನರಿಗೆ ಕೊಂಚವಾದರೂ ಸಮಾಧಾನ ತಂದಿದೆ. ಮಹಾರಾಷ್ಟ್ರದಲ್ಲಿ ಸತ್ತುಬಿದ್ದಂತಿದ್ದ ಕಾಂಗ್ರೆಸ್, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ ವೃದ್ಧ ನಾಯಕ ಶರದ್ ಪವಾರ್‌ರನ್ನು ನೋಡಿಯಾದರೂ, ಒಂದಿಷ್ಟು ಆತ್ಮವಿಶ್ವಾಸದಿಂದ ಪ್ರಚಾರ ನಡೆಸಿದ್ದರೆ ಈ ಮಿತ್ರಕೂಟ ಬಿಜೆಪಿ-ಶಿವಸೇನಾ ಮಿತ್ರ ಕೂಟವನ್ನು ಅಧಿಕಾರದಿಂದ ಹೊರಗಿಡುವ ಮಟ್ಟಕ್ಕೂ ಫಲಿತಾಂಶಗಳನ್ನು ಮುಟ್ಟಿಸಬಹುದಿತ್ತು ಎಂದು ಅಲ್ಲಿನ ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ.

ಆದರೆ ಇಂದಿನ ನಮ್ಮ ರಾಷ್ಟ್ರ ರಾಜಕಾರಣದ ಸಮಸ್ಯೆ ಕಾಂಗ್ರೆಸ್ ಪಕ್ಷವೇ ಆಗಿದೆ. ಅದರ ರಾಷ್ಟ್ರೀಯ ನಾಯಕತ್ವ ಪೂರ್ಣ ವೈಚಾರಿಕ ದಿವಾಳಿತನಕ್ಕೆ ಒಳಗಾಗಿ ಪಕ್ಷಕ್ಕೆ ಹೊಸ ಚೈತನ್ಯ-ಮಾರ್ಗದರ್ಶನ ನೀಡಲು ಅಸಮರ್ಥವಾಗಿ ಹೋಗಿದೆ. ಪಿ. ಚಿದಂಬರಂ-ಡಿಕೆಶಿಯವರಂತಹ ಹಿರಿ ಕಿರಿಯ ನಾಯಕರು ನ್ಯಾಯಾಲಯ-ಸೆರೆಮನೆಗಳಿಗೆ ಅಲೆದಾಡುತ್ತಾ ಪಕ್ಷವನ್ನು ಸೆರೆಮನೆವಾಸದ ಭೀತಿಗೆ ಸಿಕ್ಕಿಸಿದಂತೆ ತೋರುತ್ತದೆ. ಹಾಗಾಗಿಯೇ ಈ ಎರಡೂ ರಾಜ್ಯಗಳಲ್ಲಿನ ಈ ಚುನಾವಣೆಗಳ ಪ್ರಕ್ರಿಯೆಯಲ್ಲಿ ಈ ಪಕ್ಷದ ರಾಷ್ಟ್ರೀಯ ನಾಯಕತ್ವದ ಗೈರು ಹಾಜರಿ ಎದ್ದು ಕಾಣುವಂತಿತ್ತು. ಇನ್ನೊಂದು ರೀತಿಯಲ್ಲಿ ನೋಡಿದರೆ ಈ ಪಕ್ಷದ ಸದ್ಯದ ಗಮನಾರ್ಹ ಯಶಸ್ಸಿಗೂ ಇದೇ ಕಾರಣವಿರಲೂಬಹುದು! ಹಾಗೇ ಶರದ್ ಪವಾರ್ ಮತ್ತು ಅವರ ಪಕ್ಷದ ಹಿರಿಯ ನಾಯಕ ಪ್ರಫುಲ್ ಪಟೇಲ್ ಜಾರಿ ನಿರ್ದೇಶನಾಲಯ ಇತ್ಯಾದಿ ತನಿಖಾ ಸಂಸ್ಥೆಗಳಿಂದ ಹಲವು ಗಂಭೀರ ಮೊಕದ್ದಮೆಗಳನ್ನು ಎದುರಿಸುತ್ತಿದ್ದರೂ, ಅವರ ಪಕ್ಷದ ಸಾಧನೆ ನೋಡಿದರೆ ರಾಜ್ಯದಲ್ಲಿನ ಬಿಜೆಪಿ-ಶಿವಸೇನಾ ಸರ್ಕಾರ ಜನರ ಸಾಕಷ್ಟು ವಿಶ್ವಾಸ ಕಳೆದುಕೊಂಡಿರುವುದು ಸ್ಪಷ್ಟವಾಗುತ್ತದೆ.

ಈ ರಾಜ್ಯಗಳಲ್ಲದೆ ಬಿಜೆಪಿ ನೇತೃತ್ವದ ಎನ್‌ಡಿಎ ಇಡೀ ರಾಷ್ಟ್ರದಲ್ಲಿ ಜನರ ವಿಶ್ವಾಸ ಕಳೆದುಕೊಳ್ಳುತ್ತಿದ್ದಲ್ಲಿ ಆಶ್ಚರ್ಯವೇನಿಲ್ಲ. ಮೋದಿಯವರೂ ಸೇರಿದಂತೆ ಬರೀ ಚತುರ ಮತ್ತು ಆಕ್ರಮಣಕಾರಿ ಮಾತುಗಾರರಿಂದ ತುಂಬಿರುವ ಈ ಪಕ್ಷ ಸಮರ್ಥ ಆಡಳಿತಕ್ಕೆ ಬೇಕಾದ ಪ್ರತಿಭೆಯ ಕೊರತೆಯಿಂದ ನರಳುತ್ತಿದೆ ಎಂಬುದಕ್ಕೆ ರಾಷ್ಟ್ರದ ಆರ್ಥಿಕತೆಯ ಅದರ ಅಸಮರ್ಥ ನಿರ್ವಹಣೆ ಒಂದು ಉದಾಹರಣೆ. ರಾಷ್ಟ್ರದ ಮತ್ತು ಜಾಗತಿಕ ಮಟ್ಟದ, ನೊಬೆಲ್ ಪುರಸ್ಕೃತ ಆರ್ಥಿಕ ತಜ್ಞರೆಲ್ಲರೂ ದೇಶದ ಆರ್ಥಿಕತೆ ಆತಂಕಕಾರಿ ಹಂತವನ್ನು ಮುಟ್ಟಿದೆ ಎಂದು ಎಚ್ಚರಿಕೆ ನೀಡುತ್ತಿದ್ದರೂ, ಒಂದಲ್ಲ ಒಂದು ಕಾರಣ ಹುಡುಕಿ ಅವರ ತಲೆಗಳ ಮೇಲೆ (ಉದಾ: ನೊಬೆಲ್ ಪುರಸ್ಕೃತರಾದ ಅಮರ್ತ್ಯ ಸೇನ್ ಮತ್ತು ಅಭಿಜಿತ್ ಬ್ಯಾನರ್ಜಿ ವಿದೇಶೀಯರನ್ನು ಮದುವೆಯಾಗಿ ದೇಶಾಭಿಮಾನಹೀನರಾಗಿದ್ದಾರೆಂಬ!) ಗೂಬೆ ಕೂರಿಸುತ್ತಾ, ಜೊತೆಗೇ ತನ್ನದೇ ಹೊಸ ಅಂಕಿ ಅಂಶಗಳನ್ನು ಹೊಸೆಯುತ್ತಾ ಪ್ರದರ್ಶಿಸುತ್ತಿರುವ ಅತಿ ಬುದ್ಧಿವಂತಿಕೆಯನ್ನು ಜನ ನಿಧಾನವಾಗಿಯಾದರೂ ಅರ್ಥ ಮಾಡಿಕೊಳ್ಳತೊಡಗುತ್ತಾರೆ ಎಂಬುದಕ್ಕೆ ಈ ಫಲಿತಾಂಶಗಳು ಸಾಕ್ಷಿಯಾಗಿವೆ. ಹಾಗೆಯೇ ಇತ್ತೀಚೆಗೆ ಬಿಡುಗಡೆಯಾದ ಜಾಗತಿಕ ಹಸಿವಿನ ಸೂಚ್ಯಂಕಗಳ ಪಟ್ಟಿ ನೋಡಿದಾಗ ಈ ಸರ್ಕಾರದ ಜನ ಕಲ್ಯಾಣ ಕಾರ್ಯಕ್ರಮಗಳ ಪ್ರಚಾರ ವಾಸ್ತವಕ್ಕಿಂತ ಹೆಚ್ಚು ಅಬ್ಬರದ್ದೇ ಏನೋ ಎಂಬ ಅನುಮಾನ ಉಂಟಾಗುವಂತಿದೆ. ಕುಡಿವ ನೀರು, ಪುಷ್ಟಿಕರ ಆಹಾರ, ಹೆರಿಗೆ ಸೌಲಭ್ಯ, ಶಿಶುಪಾಲನಾ ವ್ಯವಸ್ಥೆ ಇತ್ಯಾದಿಗಳ ಸ್ಥಿತಿಗತಿಗಳನ್ನು ಸೂಚಿಸುವ ಈ ಸೂಚ್ಯಂಕದ ವಿಷಯದಲ್ಲಿ ಭಾರತ ನೆರೆಯ ನೇಪಾಳ, ಬಂಗ್ಲಾದೇಶ ಮತ್ತು ಪಾಕಿಸ್ತಾನಗಳಿಗಿಂತ ಹಿಂದೆ ಬಿದ್ದಿದೆ ಎಂಬ ಸಂಗತಿ ಈ ಸರ್ಕಾರಕ್ಕೆ ಯಾವ ರೀತಿಯಲ್ಲೂ ಮಾನ ತರುವಂತಹುದಲ್ಲ. ಅದೂ ಅದಕ್ಷ ಮತ್ತು ಭ್ರಷ್ಟ ಕಾಂಗ್ರೆಸ್‌ನ ವಿರುದ್ಧ ಜನಜಾಗೃತಿ ಮೂಡಿಸಿ ಗೆದ್ದು ಬಂದಿರುವುದಾಗಿ ಹೇಳಿಕೊಳ್ಳುತ್ತಿರುವ ಈ ಸರ್ಕಾರಕ್ಕೆ.

ಬಹುಶಃ ಈ ವೈಫಲ್ಯಗಳನ್ನು ಮರೆ ಮಾಚಲೆಂದೇ ಅದು ಜಮ್ಮು ಮತ್ತು ಕಾಶ್ಮೀರದ ವಿಷಯವನ್ನೆತ್ತಿಕೊಂಡು ಅಮಾಯಕ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಯತ್ನ ಮಾಡಿತು. ಆದರೀಗ ರಾಜ್ಯದಲ್ಲಿನ ಮಾನವ ಹಕ್ಕುಗಳ ಪರಿಸ್ಥಿತಿಗೆ ಸಂಬಂಧಿಸಿದಂತೆ ಹೆಚ್ಚುತ್ತಿರುವ ದೇಶದೊಳಗಿನ ಮತ್ತು ಹೊರಗಿನ ಒತ್ತಡಗಳ ನಡುವೆ ಈ ರಾಜ್ಯದ ರಾಜಕೀಯ ನಿರ್ವಹಣೆಯನ್ನು ಅದು ಮೂರು ತಿಂಗಳ ನಂತರವೂ ಉಗುಳಲೂ ಆಗದ ನುಂಗಲೂ ಆಗದ ಸ್ಥಿತಿಗೆ ಒಯ್ದು ಅಂತಾರಾಷ್ಟ್ರೀಯ ಮುಜುಗರಕ್ಕೆ ಸಿಕ್ಕಿದೆ.

ಹಾಗೇ ಮಹಾರಾಷ್ಟ್ರ ಚುನಾವಣೆಗಳ ಕೊನೆಯ ದಿನಗಳಲ್ಲಿ ಅಪಾಯದ ಸೂಚನೆ ಸಿಕ್ಕಿಯೋ ಏನೋ ಸ್ವತಃ ಮೋದಿಯವರೇ, ಮಹಾರಾಷ್ಟ್ರದವರೇ ಆದ ಸಾವರ್ಕರ್ ಅವರಿಗೆ ಭಾರತ ರತ್ನ ನೀಡುವ ಪರೋಕ್ಷ ಸೂಚನೆ ನೀಡಿ ಸರ್ಕಾರದ ನಿಜ ಸಾಧನೆಗಳು ಚರ್ಚೆಗೆ ಬಾರದಂತೆ ನೋಡಿಕೊಳ್ಳುವ ಪ್ರಯತ್ನ ಮಾಡಿದರು. ಈಗಾಗಲೇ ಕಾಂಗ್ರೆಸ್ ತನಗೆ ಬೇಕಾದವರಿಗೆಲ್ಲ ಈ ಪ್ರಶಸ್ತಿ ಕೊಟ್ಟು ಅದರ ಗೌರವವನ್ನು ಸಾಕಷ್ಟು ಕುಂದಿಸಿರುವುದರಿಂದ ಬಿಜೆಪಿ ತನ್ನ ರಾಜಕಾರಣದ ಸ್ಫೂರ್ತಿ ಬಿಂದುಗಳ್ಲೊಬ್ಬರಾದ ಸಾವರ್ಕರ್‌ಗೆ ಆ ಪ್ರಶಸ್ತಿಯನ್ನು ನೀಡಿದರೆ ಯಾರೂ ನೋಯಲಾರರು. ಆದರೆ ನಿಜವಾದ ನೋವೆಂದರೆ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವವನ್ನು ನೆಪ ಮಾಡಿಕೊಂಡು ಇವರು ಪಟೇಲ್, ಮಾಳವೀಯ, ಅಂಬೇಡ್ಕರ್‌ರಂತೆಯೇ ಗಾಂಧಿಯವರನ್ನೂ ತಮ್ಮ ಚರಿತ್ರೆಯ ಭಾಗವನ್ನಾಗಿ ಮಾಡಿಕೊಳ್ಳುವ ಪೂರ್ವ ನಿಯೋಜಿತ ಕಾರ್ಯಾಚರಣೆಯ ಭಾಗವಾಗಿ ಅವರ ಗುಣಗಾನ ಮಾಡುತ್ತಿರುವ ಬಾಯಿಯಲ್ಲೇ ಸಾವರ್ಕರ್ ಅವರ ಗುಣಗಾನ ಮಾಡುತ್ತಿರುವುದು. ಏಕೆಂದರೆ ಅಹಿಂಸೆಯ, ಧಾರ್ಮಿಕ ಸಾಮರಸ್ಯ ಮತ್ತು ಸಮಾನತೆಯ, ಸ್ವದೇಶಿಯ ರಾಜಕಾರಣ ಮಾಡಿದ ಗಾಂಧಿಯವರಿಗೂ, ಹತ್ಯಾ ರಾಜಕಾರಣವನ್ನು ತಮ್ಮ ಭೂಗತ ರಾಜಕಾರಣದ ಮಾರ್ಗವನ್ನಾಗಿ ಮಾಡಿಕೊಂಡ ಮತ್ತು ಅದಕ್ಕಾಗಿ ವಿಧಿಸಲಾದ ಶಿಕ್ಷೆಯಿಂದ ಪಾರಾಗಲು ಬ್ರಿಟಿಷ್ ಪ್ರಭುತ್ವದೊಂದಿಗೆ ಸಹಕರಿಸುವ ಕ್ಷಮಾಪಣಾ ಪತ್ರ ಬರೆದುಕೊಟ್ಟು ನಂತರ ಸ್ವಾತಂತ್ರ್ಯ ಚಳುವಳಿಯನ್ನು ವಿರೋಧಿಸಿದ ಸಾವರ್ಕರ್‌ಗೂ ಏನು ಸಂಬಂಧ? ಸಂಘ ಪರಿವಾರ ತನ್ನ ರಾಜಕೀಯ ಉದ್ದೇಶಕ್ಕಾಗಿ ಚರಿತ್ರೆಯನ್ನು ಗಬ್ಬೆಬ್ಬಿಸುವ ಮುನ್ನ ಜನ ನಿಜ ಚರಿತ್ರೆಯನ್ನು ಓದಿ ನಿರ್ಧರಿಸಬೇಕು.

ಇನ್ನು ಕರ್ನಾಟಕದ ರಾಜಕಾರಣ ಬೌದ್ಧಿಕವಾಗಿ ಅಧೋಗತಿಯನ್ನು ತಲುಪಿದಂತಿದೆ. ಎಲ್ಲರೂ ನೆರೆ ಪರಿಹಾರದ ಚರ್ಚೆ ಮಾಡುತ್ತಾ ರಾಜಕೀಯ ಲಾಭ ಮಾಡಿಕೊಳ್ಳಲೆಳಸಿದ್ದಾರೆಯೇ ಹೊರತು ಯಾರಲ್ಲೂ ರಾಜ್ಯ ಹಿಂದೆಂದೂ ಇಲ್ಲದ ಇಂತಹ ಜಲಪ್ರಳಯಕ್ಕೇಕೆ ತುತ್ತಾಗಿದೆ ಎಂಬ ಯೋಚನೆಯ ಸುಳಿವೇ ಕಾಣದಾಗಿದೆ. ಜನರಲ್ಲೂ ಸಹ. ರಾಜ್ಯದ ಸರ್ವರೂ ಸ್ವಯಂ ನಾಶಕ್ಕೆ ಸಿದ್ಧರಾಗುತ್ತಿರುವಂತಿದೆ.

–ಸಂಪಾದಕ

# ನಮ್ಮ ಪ್ರೀತಿಯ ಕೆ.ಬಿ. ಸಿದ್ಧಯ್ಯ ಇನ್ನಿಲ್ಲ : ಒಂದು ಶ್ರದ್ಧಾಂಜಲಿ

**ಹೋ**ರಾಟಗಾರ, ಕವಿ, ಆತ್ಮೀಯ ಗೆಳೆಯ ಕೆ.ಬಿ. ಸಿದ್ದಯ್ಯ ಇನ್ನಿಲ್ಲವೆಂದರೆ ನಂಬುದು ಕಷ್ಟ. ಏಕೆಂದರೆ ಅವರು ನಮ್ಮ ಜೀವನದಲ್ಲಿ ಅಷ್ಟು ಹಾಸು ಹೊಕ್ಕಾಗಿ ಬೆರೆತು ಹೋಗಿದ್ದರು ಮತ್ತು ೬೫ ವರ್ಷ ಎಂದರೆ ಈಗ ಸಾಯುವ ವಯಸ್ಸೇನಲ್ಲ. ರಾಷ್ಟ್ರದಲ್ಲಿ ಅವರು ನಂಬಿದ್ದ ಮೌಲ್ಯಗಳ ಮೇಲೆ ಗಂಭೀರ ದಾಳಿ ನಡೆದಿದ್ದಾಗ ಅವರು ಕಣ್ಮರೆಯಾದದ್ದು ನನಗೆ ತುಂಬ ದೊಡ್ಡ ನಷ್ಟವಾಗಿಯೇ ಕಾಣುತ್ತಿದೆ.

ಸಿದ್ದಯ್ಯನವರನ್ನು ಸಾಮಾನ್ಯವಾಗಿ ದಲಿತ ಹೋರಾಟಗಾರ ಮತ್ತು ಚಿಂತಕ ಎಂದು ಕರೆಯಲಾಗುತ್ತದೆ. ಆದರೆ ನಾನು ಬಲ್ಲಂತೆ ಅವರು ದಲಿತತ್ವದ ಸೀಮೆಯನ್ನು ಎಂದೋ ದಾಟಿಹೋದ ವ್ಯಕ್ತಿಯಾಗಿದ್ದರು. ಅದಕ್ಕೆ ಮುಖ್ಯ ಕಾರಣ ಅವರ ವ್ಯಕ್ತಿತ್ವಕ್ಕೆ ಸೀಮೆಗಳೆಂಬುವೇ ಇರಲಿಲ್ಲ ಎಂಬುದು. ತಾವು ನಂಬಿದ ಸ್ವಾತಂತ್ರ್ಯ, ಸಮಾನತೆ ಮತ್ತು ಅಹಿಂಸೆಗಳಲ್ಲಿ ನಂಬಿಕೆ ಇಟ್ಟಿದ್ದ ಎಲ್ಲರನ್ನೂ ಅವರು ತಮ್ಮವರೆಂದೇ ಭಾವಿಸಿದ್ದರು. ಆ ಭಾವನೆಯಲ್ಲಿ ನಿಷ್ಕಲ್ಮಶ ಪ್ರೀತಿ ಹೆಪ್ಪುಗಟ್ಟಿರುತ್ತಿತ್ತು. ಈ ಪ್ರೀತಿಯೇ ಅವರನ್ನು ದಲಿತ ಕಾವ್ಯದ ವಿಶಿಷ್ಟ ಕವಿಯನ್ನಾಗಿಯೂ ಮಾಡಿದ್ದದು. ತನ್ನ ಸಾಮಾಜಿಕ–ಸಾಂಸ್ಕೃತಿಕ ಹಿನ್ನೆಲೆಯ ಕಥಾನಕಗಳನ್ನು ಎಲ್ಲರ ಸಾಮಾಜಿಕ–ಸಾಂಸ್ಕೃತಿಕ ಕಥಾನಕಗಳನ್ನಾಗಿ ಮಾಡಬಲ್ಲ ರೂಪಕ ಮತ್ತು ನುಡಿಗಟ್ಟುಗಳ ಸೃಜನ ಶಕ್ತಿ ಅವರಲ್ಲಿತ್ತು. ಇದರ ಹಿಂದೆ ಬುದ್ಧನ 'ಕರುಣಾ' ಅಂತರ್ಗಂಗೆಯಾಗಿ ಹರಿಯುತ್ತಿತ್ತು. ದಲಿತ ಚಳುವಳಿಯ ಆರಂಭದ ವರ್ಷಗಳಲ್ಲಿ ಅದರ ಎಲ್ಲ ಸಭೆಗಳಲ್ಲಿ ಮಾರ್ದನಿಸುತ್ತಿದ್ದ ಅವರ ಜನಪ್ರಿಯ ರಚನೆ 'ಈ ನಾಡ ಮಣ್ಣಿನಲ್ಲಿ' ಇದಕ್ಕೊಂದು ಉದಾಹರಣೆ.

ಗಾಂಧಿ ಮತ್ತು ಲೋಹಿಯಾ ಮೂಲಕ ಅಂಬೇಡ್ಕರ್ ಅವರನ್ನು ತಲುಪಿದ್ದ ಸಿದ್ದಯ್ಯ ಆ ಕಾರಣದಿಂದಾಗಿಯೇ ಮೂರನೆಯವರಷ್ಟೇ ಮೊದಲಿಬ್ಬರನ್ನೂ ಗೌರವಿಸುತ್ತಿದ್ದರು. ಅವರ ಅಂಬೇಡ್ಕರ್ ಚಿಂತನೆ ಗಾಂಧಿ ಮತ್ತು ಲೋಹಿಯಾ ಚಿಂತನೆಯ ವಿಸ್ತರಣೆಯೇ ಆಗಿತ್ತು. ಅದರಲ್ಲಿ ಒಗರಿತ್ತು; ಆದರೆ ಕಹಿ ಎಂಬುದು ಲವಲೇಶವೂ ಇದ್ದಿರಲಿಲ್ಲ. ಇದೇ ಅವರನ್ನು ದೇವನೂರ ಮಹಾದೇವರಂತೆಯೇ ದಲಿತ ಚಳುವಳಿಯಲ್ಲಿ ವಿಶಿಷ್ಟರನ್ನಾಗಿಸಿದ್ದುದು. ಮಹಾದೇವ ಅವರಂತೆಯೇ ಇವರು ಬಹುತೇಕ ದಲಿತ ಚಳುವಳಿಕಾರರ ನಿಲುವಿನಿಂದ ವಿಚಲಿತರಾಗದೆ, ರೈತ ಚಳುವಳಿ ಮತ್ತು ಕನ್ನಡ ಮಾಧ್ಯಮ ಚಳುವಳಿಗಳ ವಕ್ತಾರಿಕೆಯನ್ನೂ ವಹಿಸಿದ್ದರು. ಅವರು ಯಾವಾಗಲೂ ಹೇಳುತ್ತಿದ್ದಂತೆ ಅಹಿಂಸೆ ಅವರು ನಂಬಿದ ಪರಮ ಮೌಲ್ಯವಾಗಿತ್ತು. ಮಿಕ್ಕೆಲ್ಲ ಮೌಲ್ಯಗಳೂ ಅದರ ಮೂಲಕ ಹಾದುಹೋಗಬೇಕಿತ್ತು. ಅಹಿಂಸೆಯ ಲೌಕಿಕ ಅರ್ಥವನ್ನೂ ಬಲ್ಲವರಾಗಿದ್ದ ಸಿದ್ದಯ್ಯ ಎದುರಾದ ಎಲ್ಲರಿಗೂ ಕೇಳುತ್ತಿದ್ದ ಮೊದಲ ಪ್ರಶ್ನೆ ಎಂದರೆ, 'ಊಟ ಆಗಿದೆಯೇನೋ?'. ಅವರ ಕಾರ್ಯಕ್ಷೇತ್ರವಾಗಿದ್ದ ತುಮಕೂರು ಸೀಮೆಯ ಅವರ ಗೆಳೆಯರು ಮತ್ತು ಅನುಯಾಯಿಗಳು ಅವರ ಈ ವಿಶಿಷ್ಟತೆಯನ್ನು ಗೌರವಿಸಿ ಅವರ ಮಾನವೀಯ ಗುಣಕ್ಕೆ ಮಾರು ಹೋಗಿದ್ದರು.



ದಲಿತ ಚಳುವಳಿ ತನ್ನ ಭಾರಕ್ಕೆ ತಾನೇ ಮಣಿದು ಕುಸಿದ ನಂತರ ಸಿದ್ದಯ್ಯ ಅವರು ರಾಜಕಾರಣದತ್ತ ಹೆಚ್ಚು ವಾಲಿದ್ದರು. ಇದರಿಂದಾಗಿ ಅವರ ವ್ಯಕ್ತಿತ್ವದ ಸ್ಫುಟ ಗೆರೆಗಳು ಮಾಸತೊಡಗಿದ್ದವು. ಸ್ಥಳೀಯ ರಾಜಕಾರಣದ ರಾಗ ದ್ವೇಷಗಳೊಂದಿಗೆ ರಾಜ್ಯಮಟ್ಟದ ಅಧಿಕಾರ ರಾಜಕಾರಣದಲ್ಲಿ ಜಾಗ ಕಂಡುಕೊಳ್ಳಲು ಪ್ರಯತ್ನಿಸಿದ್ದರು. ಅದರಲ್ಲಿ ಯಶ ಕಾಣದ ಹತಾಶೆ ಇತ್ತೀಚಿನ ದಿನಗಳಲ್ಲಿ ಅವರಲ್ಲಿ ಕಾಣಿಸಿಕೊಂಡಿತ್ತು. ನನ್ನ ಕುಟುಂಬದ ಅವಿಭಾಜ್ಯ ಅಂಗವೇ ಆಗಿಹೋಗಿದ್ದ ಅವರಿಗೆ ಮತ್ತು ಅವರ ಹೆಂಡತಿ ಮಕ್ಕಳಿಗೆ ನಾನು, ಅವರು ಬುದ್ಧನನ್ನು ಮರೆತು ತೃಷ್ಣೆಗೆ ಬಲಿ ಬಿದ್ದಿದ್ದಾರೆ ಎಂದು ಹಲವು ಬಾರಿ ಎಚ್ಚರಿಸಿದ್ದೆ. ತೃಷ್ಣೆಯೇ (ದಾಹ) ಹಾಗೆ. ಅದು ಒಮ್ಮೆ ಆರಂಭವಾದರೆ ಅದು ತೀರುವವರೆಗೂ ಮನುಷ್ಯನನ್ನು ದಿಕ್ಕೆಡಿಸಿ, ಅಲೆದಾಡಿಸಿ ಅವನ ಮೈಮರೆವನ್ನು ಪೂರ್ಣಗೊಳಿಸಿ ಅವನನ್ನೇ ಬಲಿ ತೆಗೆದುಕೊಳ್ಳುತ್ತದೆ. ಬೌದ್ಧ ಪರಿಭಾಷೆಯಲ್ಲಿ ಇದನ್ನು ಮಾರನ ಬಾಣ ಎಂದೂ ಕರೆಯಲಾಗುತ್ತದೆ. ಸಿದ್ದಯ್ಯನವರ ಬದುಕು ಇದಕ್ಕೊಂದು ಇತ್ತೀಚಿನ ಉದಾಹರಣೆಯಷ್ಟೆ. ಅವರು ಸಾವನ್ನು ಆಹ್ವಾನಿಸಿದ ರಸ್ತೆ ಅಪಘಾತದ ಸನ್ನಿವೇಶ ಇದಕ್ಕೊಂದು ಸಾಕ್ಷಿಯಂತಿದೆ. ನನ್ನ ಪ್ರಕಾರ ಇದು ಗಾಂಧಿ ಚಳುವಳಿಯಿಂದ ಹಿಡಿದು ನಮ್ಮ ಎಲ್ಲ ಜನಪರ ಚಳುವಳಿಗಳ ಆತ್ಮದ್ರೋಹದ ಹಾದಿಯ ಬಲೆಯೂ ಆಗಿದೆ.

ಸಿದ್ದಯ್ಯ ಅವರ ಇತ್ತೀಚಿನ ಕಾವ್ಯ ಕೂಡ ಈ ಮೇಲಿನ ಮಾತಿಗೆ ಹೊರತಾದುದಲ್ಲ. ಬುದ್ಧನ ಅನಾತ್ಮವಾದ ('ಅನಾತ್ಮ' ಎಂಬುದು ಸಿದ್ದಯ್ಯವರ ಈಚಿನ ವರ್ಷಗಳ ಕವನ ಸಂಕಲನವೊಂದರ ಶೀರ್ಷಿಕೆಯೂ ಹೌದು) ಸಾಮಾಜಿಕ ಉದ್ದೇಶಕ್ಕೆ ಬಳಸಲ್ಪಟ್ಟು ಶೋಷಿತ ಜನರ ಮೇಲೆ ಆರೋಪಿತವಾದ ಪರಿಕಲ್ಪನೆಯಾದಾಗ ಅದು ಎಷ್ಟು ಸ್ಥೂಲಗೊಂಡು ಅಪಾರ್ಥಗಳನ್ನು ಕಲ್ಪಿಸಬಹುದು ಎಂಬುದಕ್ಕೆ ನಿದರ್ಶನದಂತಿದೆ.

ಕೇಬಿಯವರ ಆತ್ಮಕ್ಕೆ ಶಾಂತಿ ಸಿಗಲಿ!

**–ಡಿಎಸ್ಸೆನ್**

---

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ'ದ ಅಕ್ಟೋಬರ್ ಸಂಚಿಕೆಯಲ್ಲಿ ಎರಡು ಸಂಗತಿಗಳು ಮರೆಯಾಗದೆ ಮನಸ್ಸಿಲ್ಲಿ ತಳವೂರಿ ಅಲೆಗಳನ್ನು ಎಬ್ಬಿಸುತ್ತಿದೆ. ಒಂದನೆಯದು ಹ್ಯೂಸ್ಟನ್‌ನಲ್ಲಿ ನಡೆದ ಹೌಡಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನರೇಂದ್ರ ಮೋದಿ ಅವರು, ಅಗಲಿ ಬಾರ್ ಟ್ರಂಪ್ ಸರಕಾರ್ ಎಂದು ಉಗ್ಗಡಿಸಿದ್ದು. ಈ ಹೇಳಿಕೆಯ ಹಿಂದಿನ ರಾಜತಾಂತ್ರಿಕ ಮತ್ತು ನೈತಿಕ ಶಿಥಿಲತೆಯನ್ನು ಡಿಎಸ್‌ಎನ್ ಅವರು ತಮ್ಮ ಸಂಪಾದಕರ ಟಿಪ್ಪಣಿಗಳಲ್ಲಿ ಬಗೆದು ತೋರಿಸಿದ್ದಾರೆ. ಈ ಬರಹದ ನಿಶಿತತೆ ಗಾಢವಾಗಿ ತಟ್ಟುತ್ತದೆ. ಕನ್ನಡ ಸೇರಿದಂತೆ ಮುಖ್ಯವಾಹಿನಿ ಮಾಧ್ಯಮಗಳಲ್ಲಿ ಮೋದಿ ಅವರು ಟ್ರಂಪ್ ಅವರಿಗೆ ಸರಿಮಿಗಿಲಾಗಿ ಮಿಂಚಿದರು ಎನ್ನುವುದಕ್ಕಷ್ಟೇ ಪ್ರಾಮುಖ್ಯತೆ ಸಿಕ್ಕಿತು. ಮೋದಿ ಅವರಷ್ಟೇ ತೀವ್ರಗಾಮಿ ಧೋರಣೆ ಇರುವ ಟ್ರಂಪ್ ಕೂಡ, ಭಾರತದಲ್ಲಿ ಗಾಂಧಿ ಪರಂಪರೆಯ ಕಿಂಚಿತ್ತೂ ಅರಿವಿಲ್ಲದೆ ಮೋದಿ 'ಭಾರತದ ತಂದೆ' ಎಂದುಬಿಟ್ಟರು. ಗಾಂಧಿ ಅವರ ಬಿಟ್ಟು ಕೊಡುವ ಶಕ್ತಿ, ನೈತಿಕ ಪ್ರಯೋಗಗಳ ಧೀಮಂತಿಕೆ, ಪರಾನುಕೂಲ ಮಿಡಿತ, ತತ್ತ್ವಬದ್ಧ ಜೀವನಕ್ಕೆ ಯಾವುದರಲ್ಲೂ ಸಾಟಿ ಇಲ್ಲದ ಒಬ್ಬ ವೃತ್ತಿಪರ ರಾಜಕಾರಣಿಯನ್ನು 'ತಂದೆ' ಎಂದು ಬಣ್ಣಿಸುವುದು ಟ್ರಂಪ್ ಅವರ ಬೌದ್ಧಿಕ ದಿವಾಳಿಕೋರತನಕ್ಕೆ ಸಾಕ್ಷಿ.

ಇನ್ನು ಡಿಎಸ್‌ಎನ್ ರವರು ಗಾಂಧಿ ಸ್ಮರಣೆಯಲ್ಲಿ ನಿರೂಪಿಸಿರುವ ಗಾಂಧಿಗೆ ಆದಿವಾಸಿಯೊಬ್ಬನ ವಿಚಿತ್ರ ಗೌರವ ಪ್ರಸಂಗ. ಬಾಯಲ್ಲಿ ಹುಲ್ಲುಕಡ್ಡಿ ಇಟ್ಟುಕೊಂಡು ಆತ ಗಾಂಧಿಗೆ ನಮಸ್ಕರಿಸುತ್ತಾನೆ. ತಾನು ಎತ್ತುಗಳಿಗೆ ಸಮಾನ ಎಂಬುದು ಇದರ ತಿರುಳು. ದಲಿತರು ಮತ್ತು ಆದಿವಾಸಿಗಳ ಭೌತಿಕ ಸ್ಥಿತಿ ಗತಿ ಅಷ್ಟೋ ಇಷ್ಟೋ ಸುಧಾರಿಸಿರಬಹುದು. ಆದರೆ ಈ ಎತ್ತಿನ ಮತ್ತು ವಿನೀತ ಭಾವದ ಅಪೇಕ್ಷೆ ಮೇಲ್ಜಾತಿಗಳಲ್ಲಿ ಕಡಿಮೆಯಾಗಿಲ್ಲ.

**–ಕೆ. ವೆಂಕಟೇಶ್**, ದೊಡ್ಡಬಳ್ಳಾಪುರ

ನಮ್ಮ ಇವೊತ್ತಿನ ರಾಜಕೀಯ ದುರಿತ ಕಾಲದಲ್ಲಿ ನಿಮ್ಮ ಸಂಪಾದಕರ ಟಿಪ್ಪಣಿಗಳು ಲೋಹಿಯಾ ಹೇಳುವ 'ನಿರಾಶೆಯ ಕಾಲದ ಕರ್ತವ್ಯ'ಗಳನ್ನು ನೆನಪಿಸುವಂತಹವು. ರಾಜಕೀಯವನ್ನು ಸೂಕ್ಷ್ಮವಾಗಿ ನೋಡುವಷ್ಟೇ ಸಾಹಿತ್ಯ, ಸಂಸ್ಕೃತಿ, ಚಳುವಳಿ, ಸಾಮಾಜಿಕ ಅನ್ಯಾಯಗಳನ್ನೆಲ್ಲಾ ವ್ಯಂಗ್ಯೋಕ್ತಿಯ ಭಾಷೆಯಲ್ಲಿ ಹೇಳುತ್ತಲೇ ಹೊಸ ದೃಷ್ಟಿಕೋನವೊಂದನ್ನು ಪ್ರಕಟಿಸುವ ಈ ಟಿಪ್ಪಣಿಗಳು ಬುದ್ಧಿಜೀವಿಯೊಬ್ಬನ ಏಕಲೆನ್ಸಿಗೆ ಮಾತ್ರ ಸೀಮಿತವಾಗದೆ ಸಮಷ್ಟಿಯಾಗಿ ಜೀವಪರ ವೈಚಾರಿಕತೆಯ ಮೂಲಕ ಹೊಸ ಮನುಷ್ಯರಿಂದ ಕೂಡಿದ ಸಮಾಜದ ಅಪೇಕ್ಷೆಯ ಕಾಳಜಿಯನ್ನು ಪ್ರತಿ ತಿಂಗಳೂ ಓದುವ ಓದುಗ ವರ್ಗ ಮೊಂಡಾಗಲು ಸಾಧ್ಯವೇ ಇಲ್ಲ. ಪತ್ರಿಕೆ ಸಮಾಜವಾದಿ ಲೋಕದೃಷ್ಟಿಯ ವಿಸ್ತರಣೆಯಾಗಿ ಮೂಡಿಬರುತ್ತಿರುವುದು ಈ ಕಾಲದ ಅಗತ್ಯವೂ ಆಗಿದೆ.

ಸಮಾಜವಾದಿ ಚಿಂತನೆಗಳನ್ನು ವರ್ತಮಾನದ ಆಲೋಚನಾ ಕ್ರಮವಾಗಿಸುವ ಕೆಲಸವನ್ನು ಮಾಡುತ್ತಾ ಸಂಶೋಧನಾ ಅಧ್ಯಯನಗಳನ್ನು ಕೈಗೊಂಡವರ ಅಧ್ಯಯನಗಳ ಲೋಕದೃಷ್ಟಿಯನ್ನು ನೇರ್ಪುಗೊಳಿಸುವಷ್ಟರ ಮಟ್ಟಿಗೆ ಪತ್ರಕೆಯು ಗಂಭೀರವಾಗಿದೆ. ಹೊಸ ಮನುಷ್ಯ ಗಾಂಧಿಯನ್ನು ತುಸು ಹೆಚ್ಚೇ ಅನುಸಂಧಾನಕ್ಕೆ ಒಳಪಡಿಸುತ್ತಿದೆಯೇನೋ ಎನಿಸುತ್ತಿದ್ದು, ಅಂಬೇಡ್ಕರ್ ಇವತ್ತು ಸಮಾಜವಾದಿ ವೈಚಾರಿಕತೆಯನ್ನು ರೂಪಿಸಲು ತುಂಬಾ ಮುಖ್ಯವೆಂಬ ತಿಳುವಳಿಕೆಯನ್ನೂ ಪತ್ರಿಕೆ ಒಳಗೊಳ್ಳುವಂತಾಗಲಿ.

**–ಡಿ.ಆರ್. ದೇವರಾಜ್**, ಅರಳಾಳುಸಂದ್ರ

**(ಇನ್ನೆರಡು ಪತ್ರಗಳು ೧೧ನೇ ಪುಟದಲ್ಲಿ)**

**ಪ್ರಚಲಿತ-೧**

**ಯುವ ಲಹರಿ**

# ನಿಮಗೆಷ್ಟು ಧೈರ್ಯ? : ಗ್ರೇಟಾ ಥುನ್ಬರ್ಗ್‌ಳ ಗುಡುಗು!

**ಸೆಪ್ಟೆಂಬರ್ ೨೩ರಂದು ಗ್ರೇಟಾ ಥುನ್‌ಬರ್ಗ್ ಎಂಬ ಸ್ವೀಡನ್‌ನ ಹದಿನಾರು ವರ್ಷ ಎಳೆವಯಸ್ಸಿನ ಪರಿಸರ ಹೋರಾಟಗಾರ್ತಿ ವಿಶ್ವಸಂಸ್ಥೆಯ ಹವಾಮಾನ ಕ್ರಿಯಾ ಶೃಂಗಸಭೆಯ(climate action summit) ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಹವಾಮಾನ ಸಂಕಷ್ಟದ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಲು ವಿಫಲರಾದ ವಿಶ್ವ ನಾಯಕರನ್ನು ತರಾಟೆಗೆ ತೆಗೆದುಕೊಂಡ ಈ ದಿಟ್ಟ ಮಾತುಗಳು ಸಾಮಾನ್ಯ ಜನರನ್ನು ಕೂಡ ಎದ್ದು ಕೂಡುವಂತೆ ಮಾಡಿವೆ** -ಸಂ.



ಇದೆಲ್ಲ ತಪ್ಪು. ನಾನು ಇಲ್ಲಿ ಬರಬಾರದಿತ್ತು. ಕಡಲ ಆಚೆ ಬದಿಯಲ್ಲಿ ನಾನೀಗ ಶಾಲೆಯಲ್ಲಿ ಇರಬೇಕಿತ್ತು. ಅದರೂ ನೀವೆಲ್ಲ ಭರವಸೆಯನ್ನು ಅರಸಿ ಯುವ ಜನರಾದ ನಮ್ಮ ಬಳಿ ಬಂದಿರುವಿರಿ, ನಿಮಗೆಷ್ಟು ಧೈರ್ಯ?

ನಿಮ್ಮ ಪೊಳ್ಳು ಮಾತುಗಳಿಂದ ನೀವು ನನ್ನ ಕನಸುಗಳನ್ನು, ನನ್ನ ಬಾಲ್ಯವನ್ನು ಕಸಿದುಕೊಂಡಿದ್ದೀರಿ. ಆದರೂ ನಾನು ಅದೃಷ್ಟಶಾಲಿಗಳಲ್ಲಿ ಒಬ್ಬಳು. ಜನ ಸಂಕಷ್ಟದಲ್ಲಿ ಸಿಲುಕಿದ್ದಾರೆ.. ಜನ ಸಾಯುತ್ತಿದ್ದಾರೆ. ಇಡೀ ಜೀವಾವಾರ ವ್ಯವಸ್ಥೆಯೇ ಕುಸಿಯುತ್ತಿದೆ. ಒಂದು ಸಾಮೂಹಿಕ ವಿನಾಶದ ಪ್ರಾರಂಭದ ಹಂತದಲ್ಲಿ ನಾವು ಇದ್ದೇವೆ. ಆದರೆ ನೀವು ಮಾತನಾಡಲು ಸಾಧ್ಯವಿರುವುದು ಹಣ ಮತ್ತು ನಿರಂತರ ಆರ್ಥಿಕ ಬೆಳವಣಿಗೆಯ ಕಟ್ಟು ಕಥೆಯ ಬಗ್ಗೆ. ನಿಮಗೆಷ್ಟು ಧೈರ್ಯ?

೩೦ ವರ್ಷಕ್ಕೂ ಹೆಚ್ಚು ಕಾಲದಿಂದ ವಿಜ್ಞಾನವು ಸ್ಪಷ್ಟವಾಗಿ ಎಚ್ಚರಿಸುತ್ತಲೇ ಇದೆ. ಆದರೂ ನೀವು ಅತ್ತಲಿಂದ ಮುಖ ತಿರುಗಿಸಿ ಇಲ್ಲಿಗೆ ಬಂದು, ಅಗತ್ಯ ರಾಜಕಾರಣ ಮತ್ತು ಪರಿಹಾರಗಳ ಯಾವ ಸುಳಿವೂ ಇಲ್ಲದಿರುವಾಗ, ನಾವು ಸಾಕಷ್ಟು ಮಾಡುತ್ತಿದ್ದೇವೆ ಎಂದು ಹೇಳಲು ನಿಮಗೆಷ್ಟು ಧೈರ್ಯ?

ಇಂದಿನ ತುರ್ತು ಏನು ಎಂಬುದನ್ನು ಅರ್ಥಮಾಡಿಕೊಂಡಿದ್ದೇವೆ, ನೀವು ಹೇಳುವುದನ್ನು ಕೇಳಿಸಿಕೊಳ್ಳುತ್ತಿದ್ದೇವೆ ಎಂದು ಹೇಳುತ್ತೀರಿ. ನನಗೆಷ್ಟು ಕೋಪಬಂದಿದೆ, ನನಗೆಷ್ಟು ದುಃಖವಾಗಿದೆ ಎಂದರೆ ನೀವು ಹೇಳುವುದನ್ನು ನಾನು ನಂಬಲಾರೆ. ಇಂದಿನ ಪರಿಸ್ಥಿತಿಯನ್ನು ನೀವು ಪೂರ್ಣವಾಗಿ ಅರ್ಥ ಮಾಡಿಕೊಂಡಿದ್ದೂ ಸೋಲುತ್ತಿರುವಿರಿ ಎಂದರೆ ನೀವು ದುಷ್ಟರೇ ಸರಿ.. ನಿಮ್ಮನ್ನು ನಂಬಲು ನಾನು ಸಿದ್ಧಳಿಲ್ಲ. ಸದ್ಯದ ನಂಬಿಕೆಯಂತೆ ೧೦ ವರ್ಷಗಳಲ್ಲಿ ಇಂಗಾಲದ ಹೊರಸೂಸುವಿಕೆಯನ್ನು ಈಗಿನ ಮಟ್ಟದ ಅರ್ಧಕ್ಕೆ ಇಳಿಸಿದರೂ ಕೂಡ ತಾಪಮಾನ ಹೆಚ್ಚಳ ೧.೫ ಡಿಗ್ರಿ ಸೆಂ.ಗಿಂತ ಕೆಳಗೆ ಉಳಿಯುವ ಸಾಧ್ಯತೆ ಮತ್ತು ಮನುಷ್ಯನ ನಿಯಂತ್ರಣವನ್ನು ಮೀರಿಹೋಗುವ ಸರಣಿ ಪ್ರಕ್ರಿಯೆ ಚಾಲನೆಗೊಳ್ಳುವ ಸಾಧ್ಯತೆಯನ್ನು ತಪ್ಪಿಸುವ ಅವಕಾಶ ಬರೀ ಶೇ.೫೦% ಮಾತ್ರ.

೫೦% ಎಂಬುದು ನಿಮಗೆ ಸ್ವೀಕೃತವಾಗಬಹುದು ಆದರೆ, ಆ ನಿರ್ಣಾಯಕ ಸಂಖ್ಯೆ ಅತಿ ಮುಖ್ಯ ನಿರ್ಧಾರಕ ಹಂತಗಳನ್ನು, ಉದಾ: ವಾಯು ಮಾಲಿನ್ಯದಿಂದ 'ಉಂಟಾಗುವ ಹೆಚ್ಚುವರಿ ತಾಪಮಾನದ ವಿವರಗಳನ್ನು, ನ್ಯಾಯ ಮತ್ತು ಸಮಾನತೆಯ ಆಯಾಮಗಳನ್ನು ಒಳಗೊಂಡಿರುವುದಿಲ್ಲ. ನಿಜಕ್ಕೂ ಇಲ್ಲದಿರುವ ತಂತ್ರಜ್ಞಾನದ ಮೂಲಕ ವಾತಾವರಣದಿಂದ ನೂರಾರು ಬಿಲಿಯನ್ ಟನ್‌ಗಳಷ್ಟು ಇಂಗಾಲದ ಡೈ ಆಕ್ಸೈಡ್ ಅನ್ನು ನಿರ್ವಹಿಸುವ ಜವಾಬ್ದಾರಿಯನ್ನು ನನ್ನ ತಲೆಮಾರಿಗೆ ವಹಿಸುತ್ತಿದ್ದೀರಿ. ಇದರ ಪರಿಣಾಮಗಳನ್ನು ಎದುರಿಸಬೇಕಾಗಿರುವ ನಮಗೆ ನಿಮ್ಮ ೫೦% ಅಪಾಯ ಸಂಭಾವ್ಯತೆಯ ಕಟ್ಟುಕತೆ ಬೇಕಾಗಿಲ್ಲ. ಏಕೆಂದರೆ, ಜಾಗತಿಕ ತಾಪಮಾನ ಹೆಚ್ಚಳವು ೧.೫ ಡಿಗ್ರಿ ಸೆಂ.ಗಿಂತ ಕೆಳಗೆ ಉಳಿಯುವ ಸಾಧ್ಯತೆ ೬೭% ಇರಬೇಕು ಎಂದಾದರೆ- ಇದು, ವಾತಾವರಣ ಬದಲಾವಣೆ ಸಂಬಂಧ ಅಂತರ್‌ಸರ್ಕಾರೀ (intergovernmental) ಸಮಿತಿಯು ನೀಡಿರುವ ಅತ್ಯುತ್ತಮ ಸಂಭಾವ್ಯತೆ- ೨೦೧೮ರ ಜನವರಿ ೧ರಂದು ಪ್ರಾರಂಭವಾಗಿ ಮುಂದಿನ ದಿನಗಳಲ್ಲಿ ಜಾಗತಿಕವಾಗಿ ವಾತಾವರಣಕ್ಕೆ ಬಿಡಬಹುದಾದ ಒಟ್ಟು ಇಂಗಾಲದ ಡೈ ಆಕ್ಸೈಡ್‌ನ ಪ್ರಮಾಣ ೪೨೦ ಗಿಗಾ ಟನ್ ಆಗಿದ್ದುದು ಈಗ ೩೫೦ ಗಿಗಾ ಟನ್ ಆಗಿದೆ ಎಂಬುದನ್ನು ಗಮನಿಸಬೇಕು.

ಇದನ್ನು ಮಾಮೂಲಿ ವ್ಯವಹಾರದ ರೀತಿಯಲ್ಲಿ, ಕೆಲವು ತಾಂತ್ರಿಕ ಪರಿಹಾರಗಳೊಂದಿಗೆ ಪರಿಹರಿಸಿಬಿಡಬಹುದೆಂದು ನಟಿಸಲು ನಿಮಗೆಷ್ಟು ಧೈರ್ಯ? ಇಂದಿನ ಹೊರಸೂಸುವಿಕೆಯ ಮಟ್ಟದಲ್ಲಿ ಮಿಕ್ಕಿರುವ ಇಂಗಾಲದ ಉಳಿತಾಯ ಸಂಗ್ರಹ ಇನ್ನೂ ೮.೫ ವರ್ಷಗಳಿಗಿಂತ ಮೊದಲು ಮುಗಿದು ಹೋಗುತ್ತದೆ.

ಈ ಅಂಕಿ ಅಂಶಗಳಿಗೆ ಅನ್ವಯಿಸುವಂತೆ ಇಂದು ಯಾವುದೇ ಪರಿಹಾರವನ್ನೂ ಸೂಚಿಸಿಲ್ಲ. ಏಕೆಂದರೆ ಈ ಅಂಕಿ ಸಂಖ್ಯೆಗಳು ಬಹಳ ಇರುಸು ಮುರಸು ಉಂಟುಮಾಡುವಂತಹವು. ಇದ್ದುದನ್ನು ಇದ್ದಂತೆಯೇ ಹೇಳುವಷ್ಟು ನೀವಿನ್ನೂ ಪ್ರಬುದ್ಧರಾಗಿಲ್ಲ.

ನೀವು ನಮಗೆ ನಿರಾಶೆ ಉಂಟು ಮಾಡುತ್ತಿದ್ದೀರಿ. ಅದರೆ ಯುವಜನತೆ ನಿಮ್ಮ ವಂಚನೆಯನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ. ಮುಂದಿನ ಜನಾಂಗದ ಎಲ್ಲ ಕಣ್ಣುಗಳು ನಿಮ್ಮ ಮೇಲಿವೆ. ನೀವು ನಮಗೆ ನಿರಾಶೆ ಉಂಟುಮಾಡಲು ನಿರ್ಧರಿಸಿದರೆ ನಿಮ್ಮನ್ನು ನಾವೆಂದೂ ಕ್ಷಮಿಸುವುದಿಲ್ಲ.

ಇದರೊಂದಿಗೆ ನೀವು ತಪ್ಪಿಸಿಕೊಳ್ಳಲು ನಾವು ಬಿಡುವುದಿಲ್ಲ. ಈಗ ಇಲ್ಲಿ ನಾವು ಗೆರೆ ಎಳೆಯುತ್ತೇವೆ. ಜಗತ್ತು ಎಚ್ಚೆತ್ತುಕೊಳ್ಳುತ್ತಿದೆ, ನಿಮಗೆ ಬೇಕಿರಲಿ ಬೇಡವಾಗಿರಲಿ ಬದಲಾವಣೆಯಂತೂ ಬರುತ್ತಿದೆ. ಧನ್ಯವಾದಗಳು.

(ಕನ್ನಡಕ್ಕೆ: **ಎಂ. ರಾಜು**)

---

**ನವಿಲುಗರಿ**

**ಬೆಳಕಿನ ಹೊಳೆ**

ಥಳ ಥಳ ಫಳ ಫಳ
ಹೊಳೆ –ಹೊಳೆ–ಹೊಳೆ
ಇದು ಬೆಳಕಿನಾ ಹೊಳೆ.!!

ನೊರೆ ನೊರೆ ಇಳಿತಾಳೆ
ಶರಾವತಿ ಜಲಧಾರೆ.
ಕರೀ ಶಿಲೆಯಲ್ಲಿ ಬಿಳಿ ಹೊಗೆ ಹಾರಿ
–ನೀರಾಗಿ ಮುಖ ಮಾರಿ
ಕಣಿ ಹೇಳಿ ಕುಣಿತಾಳೆ
–ಜೋಗದ ವಯ್ಯಾರಿ
ಕನ್ನಡ ನಾಡಿನ ಕಣ್ಣಾಲಿ,
ಈ ಆವತಿ, ಶರಾವತಿ !!

ಸಿಟ್ಟು–ಸಿಡುಕು, ಭೋರ್ಗರೆದು ಬೀರಿ
–ಕ್ಷಣದಂತೆ ಎಲ್ಲ ಜಾರಿ
ಬೆತ್ತಲೆ ಬರುತಾಳೆ ಬಳಿ ಸಾರಿ.



ಚಿತ್ರ: ವಿಜಯಶ್ರೀ ಹಾಲಾಡಿ

ನಗುವ ಚೆಲ್ಲುತ ಸುಂದರಿ–ಸುಕುಮಾರಿ.
ತಳಕು ಬೆಳಕಿನ ರಾಣಿ !!

ಮೈ ಸವರಿ ತೇವಮಾಡಿ,
ಮೆದುವಾಗಿ ಮುದವಾಗಿ,
ಮುತ್ತಿಟ್ಟು ಉರಿಮಾಡಿ, ಸರಿಮಾಡಿ
ಮೈಯೆಲ್ಲ ಹುಡುಕಿದರು, ಮತ್ತೆಲ್ಲೊ ಇಣುಕಿ
ಇಳೀತಾಳೆ ಜಲರಾಣಿ. ಬೆಳಕಿನಾ ಮಹಾರಾಣಿ
ಪಾತಾಳ ಹಣಕಿ, ಪರ್ವತ ತಡಕಿ,
ಸೀಮೆಯ ದಾಟಿ, ಸ್ವರ್ಗವ ಮೀಟಿ,
ಬಿಳಿನೊರೆಯ, ಬೆಳ್ಳಿ ತೊರೆಯ,
–ಮಂಪರು ಕವಿಸಿ,
ಬಿಳುಪನು ಹೀರಿ, ಬೆಳಕನು ಬೀರಿ
ನಟಿಸುವಳೀ ವರಸುಂದರಿ, ಶರಾವತಿ–
ಥಳ ಥಳ, ಫಳ ಫಳ ಹೊಳೆ–ಹೊಳೆ
ಇದು ಬೆಳಕಿನಾ ಹೊಳೆ !!



**–ಕೋಣಂದೂರು ಲಿಂಗಪ್ಪ**

ಪ್ರಚಲಿತ-೨

# ಇಂದಿಗೆ ಬೇಕಾದ ಗಾಂಧಿ

-ಗಣೇಶ್ ಎನ್. ದೇವಿ

**ಕಳೆದ ತಿಂಗಳ ೨೯ರಂದು ಎಂ. ಚಂದ್ರಶೇಖರ ಪ್ರತಿಷ್ಠಾನ ಮತ್ತು ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನಗಳು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವ ಆಚರಣೆಗಾಗಿ ಏರ್ಪಡಿಸಿದ್ದ 'ಗಾಂಧಿ ಉತ್ಸವ'ದ ಭಾಗವಾಗಿ ನಡೆದ 'ಇಂದಿಗೆ ಬೇಕಾದ ಗಾಂಧಿ' ವಿಷಯ ಕುರಿತ ಗೋಷ್ಠಿಯಲ್ಲಿ ಆಡಿದ ಮಾತುಗಳ ಕನ್ನಡ ರೂಪವಿದು-ಸಂ.**



ಎಲ್ಲರಿಗೂ ನಮಸ್ಕಾರ. ಈಗ ತಾನೆ ಮುಗಿದ ಕಾರ್ಯಕ್ರಮದ ಮೊದಲ ಭಾಗದಲ್ಲಿ ಗಾಂಧಿಯವರನ್ನು ಸ್ಮರಿಸಿಕೊಳ್ಳುವ ಈ ಸಂದರ್ಭದಲ್ಲಿ ಕರ್ನಾಟಕದ ಮೇರು ವ್ಯಕ್ತಿಗಳನ್ನು ನೋಡಿ ನನಗೆ ಬಹಳಾ ಸಂತಸವಾಗಿದೆ. ಮೊಟ್ಟಮೊದಲಿಗೆ ಗಾಂಧಿ ಸ್ಮರಣೆಯ ಈ ಅರ್ಥಪೂರ್ಣವಾದ ಮತ್ತು ಅದ್ಭುತ ಕಾರ್ಯಕ್ರಮವನ್ನು ಆಯೋಜಿಸಿ ಶಿಖರಪ್ರಾಯವೆನಿಸುವಂಥ ಮತ್ತು ಕರ್ನಾಟಕವೇ ಹೆಮ್ಮೆಪಡುವಂಥ 'ಗಾಂಧಿ ಕಥನ' ಪುಸ್ತಕ ರಚಿಸಿ ಅದರ ಬಿಡುಗಡೆಗೆ ಕಾರಣರಾದಂತಹ ಡಿ.ಎಸ್. ನಾಗಭೂಷಣ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಎಂದಿಗಿಂತಲೂ ಇಂದು ಕರ್ನಾಟಕಕ್ಕೆ ಇಂತಹ ಕೃತಿಯ ಅಗತ್ಯವಿದೆ ಎಂದು ನನ್ನ ಅನ್ನಿಸಿಕೆ. 'ಇಂದಿಗೆ ಬೇಕಾದ ಗಾಂಧಿ' ಎಂಬ ವಿಷಯವಾಗಿ ನನ್ನ ಅನ್ನಿಸಿಕೆಗಳನ್ನು ಹಂಚಿಕೊಳ್ಳಬೇಕೆಂದು ನನಗೆ ಕೇಳಿಕೊಳ್ಳಲಾಗಿದೆ. ಜಗತ್ತಿನಾದ್ಯಂತ ಸರ್ವಾಧಿಕಾರತ್ವದ ಮತ್ತು ಜನಾಂಗೀಯ ದ್ವೇಷ, ಹತ್ಯೆಗಳ ಹುಚ್ಚು ನರ್ತನ ಪ್ರಜಾಪ್ರಭುತ್ವದ ಮುಖವಾಡದಲ್ಲಿ ನಡೆಯುತ್ತಿರುವ ಇಂದಿನ ವಿಷಮಕಾಲದಲ್ಲಿ ಗಾಂಧಿಯ ಪ್ರಸ್ತುತತೆಯ ಬಗ್ಗೆ ಹೇಳಲು ಸಾಕಷ್ಟು ವಿಷಯಗಳು ಇದೆ. ಆದರೆ ನಾನು ಇದೆಲ್ಲವನ್ನೂ ವಿಸ್ತೃತವಾಗಿ ಹೇಳಲು ಹೋಗದೆ ಸಂಕ್ಷಿಪ್ತವಾಗಿ ಮಾತಾಡಲು ಬಯಸುತ್ತೇನೆ.

### ಗಾಂಧಿಗೆ ಹೆಗಲೆಣೆಯಾಗಿ ನಿಂತ ಕಸ್ತೂರಬಾ

ನಾವು ಗಾಂಧಿಯನ್ನು ಒಬ್ಬ ಅಪ್ಪಟ ಸತ್ಯಾಗ್ರಹಿ ಎಂದು ಗುರುತಿಸುವಾಗ ಅವರ ಜೀವನದ ಸತ್ಯಾಗ್ರಹದ ಚಳುವಳಿಯಲ್ಲಿ ಕಸ್ತೂರಬಾ ಅವರ ಪಾತ್ರವನ್ನು ಮರೆಯಬಾರದು. ಮಹಿಳೆಯಾದ ಕಸ್ತೂರಬಾ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಚಳುವಳಿಯಲ್ಲಿ ಪಾಲ್ಗೊಳ್ಳುವವರೆಗೂ ದಕ್ಷಿಣ ಆಫ್ರಿಕಾದಲ್ಲಿನ ಗಾಂಧಿಯವರ ಸತ್ಯಾಗ್ರಹದ ಹೋರಾಟ ಹೆಚ್ಚೂ ಕಮ್ಮಿ ವಿಫಲವಾಗುವ ಹಂತದಲ್ಲಿತ್ತು. ಕಸ್ತೂರಬಾ ಅವರೊಡನೆ ಇನ್ನೂ ಅನೇಕ ಮಹಿಳೆಯರು ನಾಗರಿಕ ಹಕ್ಕುಗಳ ವಿಷಯವಾಗಿ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿದ್ದ ಹೋರಾಟದಲ್ಲಿ ತೊಡಗಿಸಿಕೊಳ್ಳುವವರೆಗೂ ಆ ಚಳುವಳಿಯ ಅಂತಹ ಪರಿಣಾಮಕಾರಿಯಾಗಿರಲಿಲ್ಲ. ಮತ್ತು ಭಾರತದಲ್ಲಿ ಅಗಾಖಾನ್ ಪ್ಯಾಲೇಸ್‌ನಲ್ಲಿ ಕಸ್ತೂರಬಾ ಅವರ ಮರಣದ ನಂತರ ಗಾಂಧೀಜಿಯು ಯಾವುದೇ ಪ್ರಮುಖ ಸತ್ಯಾಗ್ರಹದ ಚಳುವಳಿ ನಡೆಸಲಿಲ್ಲ ಎಂಬುದೂ ನಮಗೆ ಚರಿತ್ರೆಯಿಂದ ತಿಳಿದು ಬರುತ್ತದೆ. ಸತ್ಯಾಗ್ರಹ ಎಂಬುದು ನಿಜಕ್ಕೂ ಗಾಂಧೀಜಿಯು ಕಸ್ತೂರಬಾ ಅವರಿಗೆ ಅರ್ಪಿಸಿದ ಒಂದು ಸುದೀರ್ಘ ಶ್ರದ್ಧಾಂಜಲಿ ಎಂದೇ ನನಗೆ ಅನಿಸುತ್ತದೆ. ಕಸ್ತೂರಬಾ ಅವರ ಕಾರಣದಿಂದಲೇ ಗಾಂಧಿ ಮಹಾತ್ಮ ಎಂದೆನಿಸಿಕೊಂಡರು ಎಂದು ನಾನು ಹೇಳಲು ಬಯಸುತ್ತೇನೆ. ಗಾಂಧಿಯ ಜೀವನದಲ್ಲಿ ಕಸ್ತೂರಬಾ ಅವರ ಕೊಡುಗೆ ಮಹತ್ವದ್ದಾಗಿದೆ. ಈ ಸಂಬಂಧ ಎರಡು ಮುಖ್ಯ ಅಂಶಗಳನ್ನು ಉಲ್ಲೇಖಿಸ ಬಯಸುತ್ತೇನೆ. ಮೊದಲಿಗೆ, ಗಾಂಧಿಯವರಿಗೆ ತಮ್ಮ ಬಾಲ್ಯ ಮತ್ತು ಯೌವನಾವಸ್ಥೆಯಲ್ಲಿ ಕತ್ತಲು ಮತ್ತು ಇನ್ನೂ ಕೆಲವು ವಿಷಯಗಳಲ್ಲಿ ತುಂಬಾ ಭಯವಿತ್ತು. ಕಸ್ತೂರಬಾ ಅವರು ಇಂತಹ ವಿಷಯಗಳಲ್ಲಿ ಗಾಂಧಿಗೆ ಸಾಕಷ್ಟು ಧೈರ್ಯ ತುಂಬಿ ಅವರ ಭಯಗಳನ್ನು ನಿವಾರಿಸಲು ಕಾರಣರಾಗಿದ್ದರು. ಮುಂದೆ ಗಾಂಧೀಜಿಯ ಜೀವನದ ಮುಖ್ಯ ಸಾರ ಎನಿಸಿದ 'ನಿರ್ಭೀತಿಯ ನಡುವಳಿಕೆ' ಕಸ್ತೂರಬಾ ಅವರಿಂದಲೇ ಮುಂಚಲನೆ ಪಡೆದಿತ್ತು.

ಎರಡನೆಯದು, ಗಾಂಧಿಯ ದಕ್ಷಿಣ ಆಫ್ರಿಕಾದಲ್ಲಿನ ಸತ್ಯಾಗ್ರಹದ ವಿಷಯ. ಅವರ ಚಳುವಳಿಯು ನಾಗರಿಕ ಹಕ್ಕುಗಳ ಸಂಬಂಧದ್ದಾಗಿತ್ತು. ಜ. ಸ್ಮಟ್ಸ್ ಅವರ ಅಲ್ಲಿನ ಸರ್ಕಾರ ಆ ದೇಶಕ್ಕೆ ವಲಸೆ ಬಂದ ನಾಗರಿಕರು ತಾವು ಮದುವೆ ಆಗಿದ್ದರ ಬಗ್ಗೆ ಅಧಿಕೃತ ದಾಖಲೆಯನ್ನು ಒದಗಿಸಲು ಒತ್ತಾಯಿಸುತ್ತಿತ್ತು ಮತ್ತು ಈ ದಾಖಲೆಯು ಭಾರತ ಮತ್ತು ಇತರೆ ದೇಶಗಳಿಂದ ಉದ್ಯೋಗಕ್ಕಾಗಿ ವಲಸೆ ಬಂದ ಜನರು ತಮ್ಮ ಸಾಂಪ್ರದಾಯಿಕ ರೀತಿನೀತಿಯಲ್ಲಿ ಮದುವೆಯಾದದ್ದನ್ನು ದಾಖಲೆ ಎಂದು ಮಾನ್ಯ ಮಾಡದೆ ಸರ್ಕಾರದ ನಿಯಮಗಳಿಗೆ ಅನುಸಾರವಾಗಿ ನೊಂದಾಯಿತವಾಗಿರಬೇಕೆಂದು ಕಾನೂನು ಮಾಡಿತ್ತು. ಇದನ್ನು ವಿರೋಧಿಸಿ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದರು. ಇದರ ಬಗ್ಗೆ ವರ್ತಮಾನದಲ್ಲಿ ನಿಂತು ನೋಡಿದರೆ ನಾವು ಅಸ್ಸಾಮ್‌ನಲ್ಲಿ ಮತ್ತು ಭಾರತದ ಇತರೆ ಸ್ಥಳಗಳಲ್ಲಿ 'ನಾಗರಿಕರ ರಾಷ್ಟ್ರೀಯ ನೊಂದಣಿ' ಎಂಬ ಶಾಸನದ ಹೆಸರಿನಲ್ಲಿ ಏನಾಗುತ್ತಿದೆ ಎಂದು ಯೋಚಿಸಬೇಕು. ಇಂದು ನಮ್ಮದೇ ಸರ್ಕಾರವು ನಮ್ಮನ್ನು ಈ ದೇಶದ ನಾಗರಿಕರು ಎಂದು ಸಾಬೀತುಪಡಿಸಲು ಒತ್ತಾಯಿಸುತ್ತಿದೆ, ನಾನು 'ನಮ್ಮನ್ನು' ಎಂದು ಹೇಳುವಾಗ ನಮ್ಮ ಇಂದಿನ ಸರ್ಕಾರವು ದೇಶದ ಜನತೆಯನ್ನು 'ನಾವು' ಮತ್ತು 'ಅವರು' ಎಂದು ವಿಭಜಿಸುವ ಘೋರವಾದ ನಡುವಳಿಕೆಯನ್ನು ಮನದಲ್ಲಿಟ್ಟುಕೊಂಡು ಹೇಳುತ್ತಿದ್ದೇನೆ.

### ಗಾಂಧಿ ಸ್ಮರಣೆ ಅವರ ಅಪಹಾಸ್ಯದ ಕಾರ್ಯಕ್ರಮವಾದೀತು...

ನಿಮಗೆ ತಿಳಿದಿರುವ ಹಾಗೆ ಅಸ್ಸಾಮಿನಲ್ಲಿ ವಲಸೆ ಬಂದಿರುವ ಬಾಂಗ್ಲಾದೇಶಿಗರಲ್ಲಿ ಹಿಂದೂ ಜನರಿಗೆ ಸ್ಥಳಾವಕಾಶ ಮತ್ತು ನಾಗರಿಕ ಹಕ್ಕುಗಳನ್ನು ಕಲ್ಪಿಸಿ ಮುಸ್ಲಿಮರಾದವರನ್ನು ಹೊರದಬ್ಬಲಾಗುವುದು ಇಲ್ಲವೇ ಸೆರೆಯಲ್ಲಿರಿಸಲಾಗುವುದು ಎಂದು ಸರ್ಕಾರವು ಹೇಳುತ್ತಿದೆ. ಇದು ನಮಗೆ ಗೊತ್ತಿದೆ. ಗೊತ್ತಿಲ್ಲದೇ ಇರುವುದೇನೆಂದರೆ ಕರ್ನಾಟಕದಲ್ಲೂ ಇಂತಹ ಬಂಧನ ಶಿಬಿರಗಳನ್ನು ಸ್ಥಾಪಿಸಲು ಎಲ್ಲಾ ತಯಾರಿಗಳು ನಡೆಯುತ್ತಿವೆ. ನಮ್ಮಲ್ಲೇ ಒಂದಿಷ್ಟು ಜನರನ್ನು ಬಂಧಿಸಲು ತಯ್ಯಾರಿ ನಡೆಯುತ್ತಿದೆ. ಹೊಸ ಜೈಲುಗಳನ್ನು ಮತ್ತು ಸೆರೆಮನೆಗಳನ್ನು ನಿರ್ಮಿಸಲು ಟೆಂಡರ್ ಕರೆಯಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ನನ್ನ ಪ್ರಕಾರ 'ಇಂದಿಗೆ ಬೇಕಾದ ಗಾಂಧಿ' ಎಂದರೆ ನಾವೆಲ್ಲರೂ ಒಗ್ಗೂಡಿ 'ರಾಷ್ಟ್ರೀಯ ನಾಗರಿಕ ನೊಂದಣಿ' ಎಂಬ ಕರಾಳ ಶಾಸನದ ಜಾರಿಗೆ ಕರ್ನಾಟಕದಲ್ಲಿ ತಡೆ ಒಡ್ಡುವುದು. ಹಾಗೆ ಮಾಡದಿದ್ದ ಪಕ್ಷದಲ್ಲಿ ಇಂತಹ ಕಾರ್ಯಕ್ರಮಗಳು ತಮ್ಮ ಅರ್ಥಪೂರ್ಣತೆಯನ್ನು ಕಳೆದುಕೊಳ್ಳುತ್ತವೆ ಮತ್ತು ಅದು ಕೇವಲ ಕಾಟಾಚಾರದ ಆಚರಣೆಗಳಾಗುತ್ತವೆ ಎಂದು ನನ್ನ ಅನಿಸಿಕೆ. ಕನ್ನಡಿಗರೆಲ್ಲ ಒಗ್ಗಟ್ಟಾಗಿ ಖಡಾಖಂಡಿತವಾಗಿ ಈ ಶಾಸನವನ್ನು ವಿರೋಧಿಸದೆ ಇದ್ದರೆ ಗಾಂಧಿಯವರ ೧೫೦ನೆಯ ಜನ್ಮ ವರ್ಷಾಚರಣೆಗೆ ಶ್ರದ್ಧಾಂಜಲಿ ಅರ್ಪಿಸುವುದು ಗಾಂಧಿಯವರನ್ನು ಅಪಹಾಸ್ಯ ಮಾಡುವ ಕಾರ್ಯಕ್ರಮವೇ ಆದೀತು.

ಗಾಂಧಿ ಏನಾದರೂ ಈಗ ನಮ್ಮ ನಡುವೆ ಇದ್ದಿದ್ದರೆ ಅವರು ಇಂತಹ ಶಾಸನವನ್ನು ಮಾಡಿದಂತಹ ಸರ್ಕಾರವನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸುತ್ತಿದ್ದರು. 'ಇಲ್ಲಿನ ಜನತೆ ಈ ರಾಷ್ಟ್ರ ಎಂಬುದನ್ನು ಕಟ್ಟಿದ್ದಾರೆ. ದೇಶವಾಸಿಗಳಾದ ನಾವು ಈ ಸರ್ಕಾರವನ್ನು ನೇಮಿಸಿದ್ದೇವೆ. ಪ್ರಭುತ್ವಕ್ಕಿಂತಲೂ ಜನತೆ ಮುಖ್ಯ. ನಮ್ಮನ್ನು ದೇಶದ ನಿವಾಸಿಗಳೆಂದು ಸಾಬೀತುಪಡಿಸಲು ಕೇಳುವುದು ಅನ್ಯಾಯ. ನಮ್ಮ ವಿರುದ್ಧವೇ ಎನ್‌ಆರ್‌ಸಿಯಂತಹ ಶಾಸನವನ್ನು ಜಾರಿ ಮಾಡಲು ಎಷ್ಟು ಧೈರ್ಯ?' ಎಂದು ಸರ್ಕಾರವನ್ನು ಪ್ರಶ್ನಿಸಿ ಚಳುವಳಿ ಹೂಡುತ್ತಿದ್ದರು. ಈ ಮಾತುಗಳನ್ನೇ ಗಾಂಧಿ ಅವರು ತಮ್ಮದಲ್ಲದ ದಕ್ಷಿಣ ಆಫ್ರಿಕಾ ದೇಶ ಮತ್ತು ಸರ್ಕಾರಕ್ಕೆ ೧೧೦ ವರ್ಷಗಳ ಹಿಂದೆಯೇ ಹೇಳಿದ್ದರು. ಇಂದು ನಮ್ಮದೇ ದೇಶ ಮತ್ತು ಸರ್ಕಾರವನ್ನು ಈ ಶಾಸನದ ಬಗ್ಗೆ ನಿರ್ಭೀತಿಯಿಂದ ಪ್ರಶ್ನಿಸದಿದ್ದಲ್ಲಿ ಗಾಂಧೀಜಿಯ ಪ್ರತಿಮೆಯನ್ನು ಮಾಡಿ

**ಈಗ ಗಾಂಧಿಯನ್ನು ಮತ್ತೆ ಸ್ಮರಿಸಿಕೊಳ್ಳುವುದೆಂದರೆ, ಗಾಂಧಿಯನ್ನು ನಾವು ಮತ್ತೆ ಪೂರ್ತ ಕಳೆದುಕೊಳ್ಳದಿರುವುದೆಂದರೆ ಕೇವಲ ಗಾಂಧಿಯ ಗುಣಗಾನ ಮಾಡುವುದು ಅಲ್ಲ. ಇಂದು ಅತ್ಯಾವಶ್ಯಕವಾಗಿರುವುದೆಂದರೆ ಮತ್ತು ಗಾಂಧಿಯೊಡನೆ ರಾಜಿಯಿಲ್ಲದ ಸಂಬಂಧ ಇಟ್ಟುಕೊಳ್ಳುವುದೆಂದರೆ ಇಂದು ಜಗತ್ತನ್ನೇ ಪ್ರಬಲವಾಗಿ ಆವರಿಸಿರುವ ಮತ್ತು ಆಳುತ್ತಿರುವ ಆರ್ಥಿಕ ನೀತಿಯನ್ನು ಪ್ರಶ್ನಿಸುವುದು ಮತ್ತು ವಿರೋಧಿಸುವುದು. ನನಗೆ ಗಾಂಧಿ ಎಂದರೆ ಅದು, ಇಂದು ವಿನಾಕಾರಣ ಬಲಿಪಶುಗಳಾಗುತ್ತಿರುವ ಮುಗ್ಧ ಜನರ ಪರವಾಗಿ ನಿಲ್ಲುವುದು ಎಂದರ್ಥ. ಗಾಂಧಿ ಎಂದರೆ ನನಗೆ ನಿರ್ಭೀತನಾಗಿ ಗುಂಪು ಹತ್ಯೆಗೊಳಗಾಗುತ್ತಿರುವ ಮುಗ್ಧ ಜನರ ಪರವಾಗಿ ನಿಂತು ಪ್ರಭುತ್ವವನ್ನು ಮತ್ತು ಇಂತಹ ಕೃತ್ಯಗಳನ್ನು ಎಸಗುತ್ತಿರುವ ಗುಂಪುಗಳನ್ನು ಪ್ರಶ್ನಿಸುವುದು ಎಂದರ್ಥ.**

ಗೌರವವನ್ನು ಅರ್ಪಿಸುವುದರಲ್ಲಿ ಯಾವುದೇ ಅರ್ಥ ನನಗೆ ಕಾಣಿಸುವುದಿಲ್ಲ. ಬದಲಾಗಿ ಅವರನ್ನು ಅವಮಾನಿಸಿದಂತಾಗುತ್ತದೆ. ಕರ್ನಾಟಕದ ಪ್ರತಿಯೊಂದು ಹಳ್ಳಿಯೂ 'ತನ್ನ ಪ್ರಜೆ ಯಾರೆಂದು ತನಗೆ ಗೊತ್ತಿದೆ. ಸರ್ಕಾರವು ಅದನ್ನು ಸಾಬೀತುಪಡಿಸುವಂತೆ ಕೇಳುವ ಅಗತ್ಯವಿಲ್ಲ. ಹಾಗಾಗಿ ಇಂತಹ ಶಾಸನವನ್ನು ಒಪ್ಪುವುದಿಲ್ಲ' ಎಂದು ಹೇಳುವಂತಾಗಬೇಕು. ತುರ್ತಾಗಿ ಈ ಕೆಲಸವನ್ನು ನಾವು ಮಾಡಬೇಕೆಂದೆನಿಸುತ್ತದೆ.

## ಗಾಂಧಿ-ಸಾವರ್ಕರ್-ಅಂಬೇಡ್ಕರ್

ಇನ್ನೊಂದು ವಿಷಯವನ್ನು ನಿಮ್ಮ ಮುಂದಿಡಬಯಸುತ್ತೇನೆ. ನನ್ನ ಜೀವನದ ೩೦ ವರ್ಷಗಳನ್ನು ನಾನು ಮಹಾರಾಷ್ಟ್ರದಲ್ಲಿ ಕಳೆದಿದ್ದೇನೆ. ಈ ರಾಜ್ಯವು ಅಂಬೇಡ್ಕರ್ ಅವರಂಥ ಧೀಮಂತರನ್ನು ದೇಶಕ್ಕೆ ಕೊಟ್ಟಿದೆ. ಹಾಗೆಯೇ ಈ ರಾಜ್ಯವು ಸಾವರ್ಕರ್, ನಾಥೂರಾಮ್ ಗೋಡ್ಸೆ, ಹೆಡಗೆವಾರ್, ಗೋಳವಾಲ್ಕರ್ ಅಂಥವರನ್ನೂ ಕೊಟ್ಟಿದೆ. ಅಂಬೇಡ್ಕರ್ ಅಂಥವರು ಜನರನ್ನು ವಿಮೋಚನೆಗೊಳಿಸಲು, ಸಮಾಜವನ್ನು ಮಾನವೀಯಗೊಳಿಸಲು ಶ್ರಮಿಸಿದರು. ಆದರೆ ಅದೇ ರಾಜ್ಯವು ಇನ್ನೊಂದೇ ರೀತಿಯ ಇದಕ್ಕೆ ವಿರುದ್ಧವಾದಂತಹ ಆಲೋಚನೆ, ಸಿದ್ಧಾಂತವನ್ನು ಇಟ್ಟುಕೊಂಡ ಜನರನ್ನು ಕೊಟ್ಟಿತು. ನನ್ನ ಜೀವನದ ಇನ್ನೊಂದು ೩೦ ವರ್ಷಗಳನ್ನು ಗುಜರಾತ್ ರಾಜ್ಯದಲ್ಲಿ ಕಳೆದಿದ್ದೇನೆ. ವಿಪರ್ಯಾಸವೆಂದರೆ, ಇಡೀ ಮನುಕುಲವನ್ನು ಮಾನವೀಯಗೊಳಿಸಲು ಶ್ರಮಿಸಿದ ಗಾಂಧಿ ಅವರಂಥ ಮಹಾತ್ಮರನ್ನು ಕೊಟ್ಟ ರಾಜ್ಯವೇ ಇಂದು ಮೋದಿ ಮತ್ತು ಅಮಿತ್ ಶಾ ಅವರಂಥ ನಾಯಕರನ್ನೂ ಕೊಟ್ಟಿದೆ. ಇಂತಹ ವೈರುಧ್ಯಗಳ ಮತ್ತು ವಿಪರ್ಯಾಸಗಳ ಬಗ್ಗೆ ನಾನು ಆಗಾಗ ಆಲೋಚಿಸುತ್ತಿರುತ್ತೇನೆ. ಆದರೆ ನನಗೆ ಯಾವುದೇ ನಿರ್ದಿಷ್ಟ ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಒಂದು ವಿಷಯ ನನಗೆ ಹಾಗು ನಿಮಗೂ ಗೊತ್ತಿದೆ. ಸಾವರ್ಕರ್ ಪರಂಪರೆಯವರು ಯಾವಾಗ ಸಮಾಜವನ್ನು ವಿಚ್ಛಿದ್ರಕಾರಿಯಾಗಿ ವಿಂಗಡಿಸುವ ಕೆಲಸದಲ್ಲಿ ಜನ ಬೆಂಬಲ ಗಳಿಸುತ್ತಾರೂ ಆಗಲೇ ರಾಷ್ಟ್ರದ ವಿನಾಶ ಆರಂಭವಾದಂತೆ..

## ಇಂದಿಗೆ ಬೇಕಾದ ಗಾಂಧಿ ಎಂದರೆ...

ಆದರೆ ನಾವು ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಇಂದಿಗೂ ಜೊತೆಗೂಡಿಸಲು ಸಾಧ್ಯವಾಗಿಲ್ಲ. ನಮ್ಮಲ್ಲಿ ಅನೇಕರು, ಅದರಲ್ಲೂ ಬುದ್ಧಿಜೀವಿಗಳೆನಿಸಿಕೊಂಡವರು ಅನಗತ್ಯವಾಗಿ ಗಾಂಧಿ ಮತ್ತು ಅಂಬೇಡ್ಕರ್ ಅವರ ನಡುವೆ ಒಂದು ರೀತಿಯ ಮೇಲ್ಪದರದ ದ್ವಂದ್ವಾತ್ಮಕವಾದ ಅಭಿಪ್ರಾಯಗಳನ್ನು ಮುಂದಿಡುತ್ತಿದ್ದಾರೆ/ಸೃಷ್ಟಿಸುತ್ತಿದ್ದಾರೆ. ಆದರೆ 'ಇಂದಿಗೆ ಬೇಕಾದ ಗಾಂಧಿ' ಎಂದರೆ ಅಂಬೇಡ್ಕರ್ ಮತ್ತು ಗಾಂಧಿ ಅವರುಗಳನ್ನು ಇಂದು ಜೊತೆಗೂಡಿಸುವುದು ಎಂದೆನಿಸುತ್ತದೆ. ಅಂದರೆ ಯಾವುದು ಈಗ ಇದರ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆಯೋ, ಅಂದರೆ ಸಾವರ್ಕರ್ ಮತ್ತು ಮೋದಿ ಅವರಂತಹವರು ಜೊತೆಗೂಡಿ ದೇಶವಾಸಿಗಳನ್ನು ಅವರ ಕೊರಳಪಟ್ಟಿ ಹಿಡಿದು ಏನು ಮಾಡಬೇಕು, ಮಾಡಬಾರದು, ಯಾವ ದಿರಿಸು ಹಾಕಬೇಕು, ಯಾವ ಆಹಾರವನ್ನು ತಿನ್ನಬೇಕು, ತಿನ್ನಬಾರದು, ಯಾವ ಧರ್ಮವನ್ನು ಹೇಗೆ ಪಾಲಿಸಬೇಕು, ಪಾಲಿಸಬಾರದು ಎಂದು ನಿರ್ದೇಶಿಸುತ್ತಾ ಈ ದೇಶದ ಪ್ರಜ್ಞಾವಂತ ನಾಗರಿಕ ಜನರ ಘನತೆಗೆ, ಪ್ರಜಾಪ್ರಭುತ್ವಕ್ಕೆ ಮತ್ತು ಮಾನವೀಯತೆಗೆ ಮಾಡುತ್ತಿರುವ ಆಘಾತಗಳನ್ನು ಸಹಿಸದಿರುವುದು ಮತ್ತು ಪ್ರಬಲವಾಗಿ ವಿರೋಧಿಸುವುದು ಎಂದರ್ಥ. ಹಾಗಾಗಿಯೇ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಜೊತೆಗೂಡಿಸಿಕೊಳ್ಳುವ ಮೂಲಕವೇ, ಜನತೆಯ ದಿಕ್ಕು ತಪ್ಪಿಸುತ್ತಿರುವ ಶಕ್ತಿಯ ವಿರುದ್ಧ ನಮ್ಮ ಚಳುವಳಿಗಳನ್ನು ಕಟ್ಟುವ ಅವಶ್ಯಕತೆ ಇದೆ ಎಂದೆನಿಸುತ್ತದೆ. ದಯವಿಟ್ಟು ಇದರ ಬಗ್ಗೆ ಯೋಚಿಸಿ.

## ಸತ್ಯೋತ್ತರ ಕಾಲದ ಸವಾಲುಗಳು

ಅಂತಿಮವಾಗಿ, ಜಗತ್ತಿನಾದ್ಯಂತ ಎಡಪಂಥೀಯ ಚಿಂತನೆಗಳು ಪತನಗೊಳ್ಳುತ್ತಿವೆ. ಮತ್ತು ಉಗ್ರ ಬಲಪಂಥೀಯತೆಯು ಎಲ್ಲಕಡೆಯೂ ಹಬ್ಬುತ್ತಿದೆ. ಈಗ ಮತ್ತೆ ಇಟಲಿಯಲ್ಲಿ ಮುಸ್ಸೊಲಿನಿಯನ್ನು, ಜರ್ಮನಿಯಲ್ಲಿ ಹಿಟ್ಲರನನ್ನು ಕೊಂಡಾಡಲಾಗುತ್ತಿದೆ ಮತ್ತು ಜಗತ್ತಿನಾದ್ಯಂತ ಪ್ರಜಾಪ್ರಭುತ್ವವೆಂಬ ಮುಖವಾಡವನ್ನು ಧರಿಸಿದ 'ಬಹುಸಂಖ್ಯಾತವಾದಿ ಸರ್ವಾಧಿಕಾರತ್ವದ ರಾಜಕೀಯ ಧೋರಣೆಗಳು ಮತ್ತು ಶಕ್ತಿಗಳು' ಹರಡುತ್ತಿವೆ. ಇಂಥ ಸಂದರ್ಭದಲ್ಲಿ ಹಿಂಸೆಯನ್ನು ಆ ಶಕ್ತಿಗಳು ಕಾನೂನುಬದ್ಧಗೊಳಿಸುತ್ತಿದೆ ಮತ್ತು ಸತ್ಯೋತ್ತರ ಸನ್ನಿವೇಶವನ್ನು ಅಂಗೀಕರಿಸಿಬಿಟ್ಟಿವೆ. ಜಗತ್ತಿನ ಆರ್ಥಿಕತೆಯಲ್ಲಿ ಅಥವಾ ಆರ್ಥಿಕ ಜ್ಞಾನದಲ್ಲಿ ಒಂದು ದೊಡ್ಡ ಪಲ್ಲಟವಾದ ಚರಿತ್ರೆಯ ಪ್ರತಿ ಸಂದರ್ಭದಲ್ಲೂ ಸತ್ಯದ ಹೊಸ ವ್ಯಾಖ್ಯಾನಗಳು ಹುಟ್ಟಿಕೊಳ್ಳುತ್ತವೆ. ಹೊಸ ರೀತಿಯ ನುಡಿಗಟ್ಟುಗಳು ಹುಟ್ಟಿಕೊಳ್ಳುತ್ತವೆ. ಇದು ಆಡಂ ಸ್ಮಿತ್ ಅವರ ಅರ್ಥಿಕತೆಯ ಹೊಸ ವ್ಯಾಖ್ಯಾನಗಳು ಸೃಷ್ಟಿಯಾದಾಗಲೂ, ಮುದ್ರಣ ತಂತ್ರಜ್ಞಾನ ಹುಟ್ಟಿಕೊಂಡಾಗಲೂ ಆಗಿತ್ತು. ಮುದ್ರಣಗೊಂಡಿದ್ದ ಮಾಹಿತಿಗಳೆಲ್ಲಾ ಸತ್ಯ, ಮೌಖಿಕವಾದದ್ದೆಲ್ಲ ಸುಳ್ಳು ಎಂಬ ಭಾವನೆ ಬೇರುಬಿಟ್ಟಿತ್ತು ಜನರ ಮನಸ್ಸಿನಲ್ಲಿ. ಇಂದು ನಾವು ಒಂದು ರೀತಿಯ ಹುಸಿ ಅಥವಾ ಅಮೂರ್ತವಾದಂಥ, ಉದ್ಯೋಗ ಮತ್ತು ಉತ್ಪಾದಕತೆಯ ನಡುವೆ ಇರುವ ಸಂಬಂಧವು ಅಸಂಗತ ನೆಲೆಗೆ ಪಲ್ಲಟಗೊಂಡಿರುವಂತಹ ಆರ್ಥಿಕತೆಯ ಸನ್ನಿವೇಶದಲ್ಲಿದ್ದೇವೆ. ಈ ಸಮಯದಲ್ಲಿ ಹೊಸ ಭಾಷೆ ಮತ್ತು ಸತ್ಯದ ಹೊಸ ವ್ಯಾಖ್ಯಾನಗಳು ಹುಟ್ಟಿಕೊಂಡಿವೆ. ಇದನ್ನೇ ನಾವು ಈಗ ಸತ್ಯೋತ್ತರ ಸಂದರ್ಭ ಎಂದು ಹೇಳುವುದು. ಸಹಜವಾಗೇ ಇಂಥ ಸಮಯದಲ್ಲಿ ಗಾಂಧಿಯು ಮೊದಲ ಬಲಿಪಶುವಾಗಿದ್ದಾರೆ. ಯಾಕೆಂದರೆ ಅವರು ನಿತ್ಯ ಸತ್ಯದ ಮಹಾ ಪ್ರತಿಪಾದಕರಾಗಿದ್ದರು. ನಾವು ಈಗ ಕೇವಲ ವಿವಿಧ ಮಾಧ್ಯಮಗಳ ಮೂಲಕ ನಮ್ಮ ಮನಸ್ಸಿನ ದೃಶ್ಯ ಮತ್ತು ಮೌಖಿಕ ವಲಯವನ್ನು ಮುತ್ತಿಕೊಳ್ಳುತ್ತಿರುವ ವೈವಿಧ್ಯಮಯ ಸುಳ್ಳು ಸುದ್ದಿ ಮತ್ತು ವ್ಯಾಖ್ಯಾನಗಳನ್ನು ಮಾತ್ರ ಎದುರಿಸಿ ವಿರೋಧಿಸಿದರೆ ಸಾಲದು. ಅದಕ್ಕೂ ಹೆಚ್ಚಾಗಿ ಈ ಸುಳ್ಳುಗಳನ್ನು ಸೃಷ್ಟಿಸಲು ಉತ್ತೇಜಕವಾಗಿರುವಂಥ ಆರ್ಥಿಕ ನೀತಿಗಳನ್ನೂ ವಿರೋಧಿಸಬೇಕಾಗಿದೆ.

ಈಗ ಗಾಂಧಿಯನ್ನು ಮತ್ತೆ ಸ್ಮರಿಸಿಕೊಳ್ಳುವುದೆಂದರೆ, ಗಾಂಧಿಯನ್ನು ನಾವು ಮತ್ತೆ ಪೂರ್ತ ಕಳೆದುಕೊಳ್ಳದಿರುವುದೆಂದರೆ ಗಾಂಧಿಯೊಡನೆ ರಾಜಿಯಿಲ್ಲದ ಸಂಬಂಧ ಇಟ್ಟುಕೊಳ್ಳುವುದೆಂದರೆ ಇಂದು ಜಗತ್ತನ್ನೇ ಪ್ರಬಲವಾಗಿ ಆವರಿಸಿರುವ ಮತ್ತು ಆಳುತ್ತಿರುವ ಆರ್ಥಿಕ ನೀತಿಯನ್ನು ಪ್ರಶ್ನಿಸುವುದು ಮತ್ತು ವಿರೋಧಿಸುವುದು. ನನಗೆ ಗಾಂಧಿ ಎಂದರೆ ಅದು, ಇಂದು ವಿನಾಕಾರಣ ಬಲಿಪಶುಗಳಾಗುತ್ತಿರುವ ಮುಗ್ಧ ಜನರ ಪರವಾಗಿ ನಿಲ್ಲುವುದು ಎಂದರ್ಥ. ಗಾಂಧಿ ಎಂದರೆ ನನಗೆ ನಿರ್ಭೀತನಾಗಿ ಗುಂಪು ಹತ್ಯೆಗೊಳಗಾಗುತ್ತಿರುವ ಮುಗ್ಧ ಜನರ ಪರವಾಗಿ ನಿಂತು ಪ್ರಭುತ್ವವನ್ನು ಮತ್ತು ಇಂತಹ ಕೃತ್ಯಗಳನ್ನು ಎಸಗುತ್ತಿರುವ ಗುಂಪುಗಳನ್ನು ಪ್ರಶ್ನಿಸುವುದು ಎಂದರ್ಥ. ಕೇವಲ ೧೬ ವರ್ಷದ ಗ್ರೇಟಾ ಥನ್ಬರ್ಗ್ ಹೇಗೆ 'ನಿಮಗೆಷ್ಟು ಧೈರ್ಯ?' ಎಂದು ಜಗತ್ತಿನ ನಾಯಕರನ್ನು ಪ್ರಶ್ನಿಸುತ್ತಿದ್ದಾಳೋ ಹಾಗೇ ಜನರನ್ನು ಪ್ರಾಣಿಗಳಂತೆ ಕಾಣುತ್ತಿರುವ ಪ್ರಭುತ್ವ ಮತ್ತು ವ್ಯವಸ್ಥೆಯನ್ನು ಪ್ರಶ್ನಿಸುವುದು ಮಾನವತೆಯ ಉಳಿವಿಗಾಗಿ ಅಗತ್ಯವಾಗಿದೆ.

ಗಾಂಧಿ ಏನಾದರೂ ಈ ಸಂದರ್ಭದಲ್ಲಿ ಇದ್ದಿದ್ದರೆ ಅವರು ಇಂತಹ ಪರಿಸ್ಥಿತಿಯನ್ನು ಸಹಿಸಿಕೊಂಡಿರುತ್ತಿರಲಿಲ್ಲ. ಒಂದಿಷ್ಟು ಜನರು ಇಂಥ ಘಟನೆಗಳಿಂದ ನಿಜಕ್ಕೂ ತಲ್ಲಣಗೊಳ್ಳುತ್ತಿದ್ದಾರೆ ಎಂಬುದೇನೊ ನಿಜ. ಆದರೆ ಭಾರತದಲ್ಲಿ ಹೆಚ್ಚಿನ ಜನರಿಗೆ ಇದಾವುದರ ಬಿಸಿಯೂ ತಟ್ಟುತ್ತಿಲ್ಲ ಇಲ್ಲವೇ ಪೂರ್ಣ ಹತಾಶರಾಗಿದ್ದಾರೆ. ನಾವು ಈ ಸಂದರ್ಭಗಳಿಗೆ ನಿರ್ಲಿಪ್ತವಾಗಿದ್ದುಬಿಟ್ಟರೆ ಉತ್ತರಪ್ರದೇಶದ ಪೊಲೀಸಿನಂಥವರು ಘಟನೆಯ ಉಸ್ತುವಾರಿ ವಹಿಸಿಕೊಳ್ಳುತ್ತಾರೆ. ಹಿಂದೆಂದಿಗಿಂತಲೂ ಗಾಂಧಿ ಇಂದಿನ ಸಂದರ್ಭದಲ್ಲಿ ಅಗತ್ಯವೆನಿಸಿದ್ದಾರೆ. ನಾವು ನಿರ್ಭೀತಿಯಿಂದ ನಡೆದುಕೊಳ್ಳಲು, ನಮ್ಮ ನಾಗರಿಕ ಹಕ್ಕುಗಳನ್ನು ರಕ್ಷಿಸಿಕೊಳ್ಳಲು, ನಮ್ಮ ಮುಗ್ಧ ಜನರಿಗೆ ಅನ್ಯಾಯವಾಗುವುದನ್ನು ತಡೆಯಲು, ಪ್ರಭುತ್ವವು ಜಾರಿಗೊಳಿಸುತ್ತಿರುವ ಆರ್ಥಿಕ ನೀತಿಯನ್ನು ಧ್ವನಿ ಎತ್ತರಿಸಿ ಪ್ರಶ್ನಿಸಲು ಗಾಂಧಿ ಎಂದಿಗಿಂತಲೂ ಇಂದು ಅಗತ್ಯವಾಗಿದ್ದಾರೆ. ಇದನ್ನು ಈಗ ನಾವು ಮಾಡಲಾಗದಿದ್ದರೆ ಇನ್ನೆಂದಿಗೂ ನಾವು ಗಾಂಧಿಯ ಹೆಸರನ್ನು ಹೇಳಲು ಯೋಗ್ಯರೆನಿಸಿಕೊಳ್ಳುವುದಿಲ್ಲ. ಧನ್ಯವಾದಗಳು.



**(ಈಗ ಧಾರವಾಡದಲ್ಲಿ ನೆಲೆಸಿರುವ ಗಣೇಶ್ ದೇವಿಯವರು ಭಾರತದ ಬುಡಕಟ್ಟು ಭಾಷೆಗಳ ಶಾಸ್ತ್ರೀಯ ಸಮೀಕ್ಷೆ ಮಾಡಿ ದೇಶದ ಭಾಷಾ ತಜ್ಞತೆಯ ಲೋಕಕ್ಕೆ ಅನುಪಮ ಸೇವೆ ಸಲ್ಲಿಸಿರುವ ಹಿರಿಯ ವಿದ್ವಾಂಸರು)**

(ಕನ್ನಡಕ್ಕೆ: ಬಿ.ವಿ ಸುರೇಂದ್ರ)

ಪ್ರಚಲಿತ-೩

# ಭಾರತದ ಒಕ್ಕೂಟ ವ್ಯವಸ್ಥೆಯೂ, ಕಾರ್ಪೋರೇಟ್‌ಶಾಹಿ-ಹಿಂದುತ್ವದ ಜೋಡಿಯೂ



-ಪ್ರಭಾತ್ ಪಟ್ನಾಯಕ್

ವಸಾಹತುವಿರೋಧಿ ಹೋರಾಟವು ಒಂದು ರಾಷ್ಟ್ರವ್ಯಾಪಿ ರಾಷ್ಟ್ರೀಯ ಪ್ರಜ್ಞೆಯ ಹುಟ್ಟಿಗೆ ಸಾಕ್ಷಿಯಾಯಿತು. ಈಗಾಗಲೇ ಇದ್ದ, ಭಾಷಾವಾರು ಪ್ರಾಂತ್ಯಗಳನ್ನು ಆಧರಿಸಿದ್ದ ರಾಷ್ಟ್ರೀಯತೆಯ ಪ್ರಜ್ಞೆಯ ಮೇಲೆ ಈ ರಾಷ್ಟ್ರೀಯ ಪ್ರಜ್ಞೆಯನ್ನು ಹರಿಸಲಾಯಿತು. (super imposed) ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಈ ಭಾರತವ್ಯಾಪಿ ರಾಷ್ಟ್ರೀಯ ಪ್ರಜ್ಞೆಯನ್ನು ಬಂಗಾಳಿ, ಗುಜರಾತಿ, ಅಥವಾ ತಮಿಳು ಅಥವಾ ಒರಿಯಾ ಪ್ರಜ್ಞೆಯ ಮೇಲೆ ಅಳವಡಿಸಲಾಯಿತು ಮತ್ತು ವಸಾಹತು ವಿರೋಧಿ ಹೋರಾಟವು ಈ ಎರಡೂ ಬಗೆಯ ಪ್ರಜ್ಞೆಗಳ ಏಳಿಗೆಗೆ ಸಾಕ್ಷಿಯಾಯಿತು.

ಇಂದು ಪ್ರತಿಯೊಬ್ಬ ಭಾರತೀಯನ ಒಳಗೂ ಈ ಎರಡೂ ಬಗೆಯ ರಾಷ್ಟ್ರೀಯ ಪ್ರಜ್ಞೆಯು ತುಂಬಿದೆ. ಈ ಎರಡೂ ಬಗೆಯ ಪ್ರಜ್ಞೆಗಳನ್ನೂ ನಾವು ಪೊರೆಯಬೇಕಾಗಿದೆ ಮತ್ತು ಇವುಗಳ ನಡುವೆ ಒಂದು ಸೂಕ್ಷ್ಮವಾದ ಸಮತೋಲನವನ್ನು ಕಾಪಾಡಬೇಕಾಗಿದೆ. ಈ ಎರಡರಲ್ಲಿ ಒಂದು ರೀತಿಯ ರಾಷ್ಟ್ರೀಯ ಪ್ರಜ್ಞೆಯನ್ನು ನಿರ್ಬಂಧಿಸುವ ಮಟ್ಟಿಗೆ ಮತ್ತೊಂದು ಪ್ರಜ್ಞೆಗೆ ಪ್ರಾಮುಖ್ಯತೆ ನೀಡುವುದು ದೇಶವು ಛಿದ್ರವಾಗಲು ಕಾರಣವಾಗುವುದು.

ನಮ್ಮ ರಾಜ್ಯ ವ್ಯವಸ್ಥೆಯ ಒಕ್ಕೂಟದ ಮಾದರಿಯು ಈ ಎರಡೂ ಪ್ರಜ್ಞೆಗಳ ಅಭಿವ್ಯಕ್ತಿಯಾಗಿದೆ. ವಾಸ್ತವದಲ್ಲಿ ಭಾಷಿಕ – ಪ್ರಾಂತೀಯ ಪ್ರಜ್ಞೆಯ ಅಡಿಯಲ್ಲಿ ಇತರೆ ಸ್ತರಗಳ ಪ್ರಜ್ಞೆಗಳೂ ಇವೆ. ನಮ್ಮ ರಾಜ್ಯವ್ಯವಸ್ಥೆಯು ಅವಕ್ಕೂ ಕೂಡ 'ಸ್ವಾಯತ್ತ ಪರಿಷತ್ತು'(autonomous council) ಗಳಂತಹ ವಿವಿಧ ಸಾಧನಗಳನ್ನು ರೂಪಿಸಿ ಕೊಟ್ಟಿದೆ. ಇವು ಸಾಕಾಗಬಹುದು ಅಥವಾ ಸಾಕಾಗದೇ ಇರಬಹುದು. ಆದರೆ ಪರಸ್ಪರ ಹೊಂದಾಣಿಕೆಯನ್ನು (accommodation) ಕಲ್ಪಿಸಬೇಕೆಂಬುದು ಮೂಲ ಆಶಯವೇ ಹೊರತು ಇತ್ತೀಚೆಗೆ ಕಂಡುಬರುತ್ತಿರುವ ಕೇಂದ್ರೀಕರಣದ ಪ್ರವೃತ್ತಿಯಲ್ಲ.

ಇದು ನಮ್ಮ ವಸಾಹತು ವಿರೋಧಿ ರಾಷ್ಟ್ರೀಯತೆಯ ಸ್ವಭಾವದಿಂದಲೇ ಹುಟ್ಟಿದೆ. ಧಾರ್ಮಿಕ ರಾಷ್ಟ್ರೀಯತೆಯಂತಹ ಇತರೆ ಯಾವುದೇ ರಾಷ್ಟ್ರೀಯತೆಯೂ ಈ ರೀತಿಯ ಹೊಂದಾಣಿಕೆಯ ನೆಲೆಯನ್ನು ಒದಗಿಸಲಾರದು. ಆದ್ದರಿಂದ ನಮ್ಮ ರಾಜ್ಯ ವ್ಯವಸ್ಥೆಯನ್ನು ಹಿಂದುತ್ವದ ಆಧಾರದಲ್ಲಿ ಮರುರೂಪಿಸುವುದು ಖಂಡಿತ ದೇಶದ ಒಡಕಿಗೆ ಕಾರಣವಾಗುವುದು. ಹಿಂದುತ್ವವು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಸುವ ದಬ್ಬಾಳಿಕೆಯ ಸಂಬಂಧದಲ್ಲಿ ಈ ಅಂಶವು ಗುರುತಿಸಲ್ಪಡುವುದು, ಯಾವುದೇ ರೀತಿಯ ಕೇಂದ್ರೀಕರಣದ ಪ್ರಯತ್ನವು ಅನಿವಾರ್ಯವಾಗಿ ಪ್ರಚೋದಿಸುವ ಪ್ರಾಂತೀಯ ದಂಗೆಗಳನ್ನು ಒಳಗೊಂಡಂತೆ, ಹಿಂದುತ್ವವು ಪ್ರಚೋದಿಸುವ ಮತೀಯ ಒಡಕಿನ ಆಚೆಗೂ, ಇದಕ್ಕೆ ಸಾಮಾನ್ಯ ಕ್ರಮಬದ್ಧತೆ/ಮಾನ್ಯತೆ (general validity) ಇದೆ.

ಹಿಂದುತ್ವ ರಾಷ್ಟ್ರೀಯತೆಯು, ಹಿಂದು ರಾಷ್ಟ್ರವು ಈಗಾಗಲೇ ಅಸ್ತಿತ್ವದಲ್ಲಿದ್ದು ರಾಜ್ಯ ಮತ್ತು ಕೇಂದ್ರಗಳ ನಡುವೆ ಯಾವುದೇ ಹೊಂದಾಣಿಕೆ ಅಗತ್ಯ ಇಲ್ಲ ಎಂದು ಭಾವಿಸುತ್ತದೆ. ಹಾಗೇ ಈ ರೀತಿಯ ಯಾವುದೇ ಹೊಂದಾಣಿಕೆಯ (accommodation) ಬೇಡಿಕೆ ಬಂದರೆ ಅದು ತಮ್ಮ ಜೇಬನ್ನು ತುಂಬಿಕೊಳ್ಳಬಯಸುವ, ಪ್ರಾಂತೀಯ ಭ್ರಷ್ಟ ಗಣ್ಯರಿಂದ ಮಾತ್ರ ಬರಬಹುದು. ಹೊಂದಾಣಿಕೆಗಾಗಿ ಬರುವ ಬೇಡಿಕೆಯನ್ನು ಹತ್ತಿಕ್ಕುವುದರಲ್ಲಿ ರಾಷ್ಟ್ರ ಹಿತವಿದೆ ಎಂದು ಅದು ಭಾವಿಸುತ್ತದೆ. ಆದ್ದರಿಂದ ಅದು ಅಗತ್ಯವಾಗಿ ಕೇಂದ್ರೀಕರಣದ ಪ್ರಯತ್ನ ಮತ್ತು ಈ ರೀತಿಯ ಪ್ರತಿಯೊಂದು ಕೇಂದ್ರೀಕರಣದ ಪ್ರಯತ್ನವೂ ಕೊನೆಗೆ ವಿಭಜನೆಯ ಕಡೆಗೆ ಅಥವಾ ಇಂತಹ ವಿಭಜನೆಯ ಪ್ರಯತ್ನವನ್ನು ಹತ್ತಿಕ್ಕುವ ಪ್ರಯತ್ನವಾಗಿ ನಿರಂಕುಶಾಧಿಕಾರದ ಕಡೆಗೆ ಕೊಂಡೊಯ್ಯುತ್ತದೆ.

ಇಂತಹ ನಿರಂಕುಶಾಧಿಕಾರವು ನಂತರದಲ್ಲಿ ಸ್ವಸಮರ್ಥನೆಯ ಸಂಗತಿಯಾಗಿ ಪರಿವರ್ತನೆಯಾಗುತ್ತದೆ. 'ಕಾನೂನು ಸುವ್ಯವಸ್ಥೆಯ ಪರಿಸ್ಥಿತಿಯ ಕಡೆ ನೋಡಿ, ಭಯೋತ್ಪಾದಕರು ನಡೆಸಿದ ಹಿಂಸಾಕೃತ್ಯಗಳನ್ನು ನೋಡಿ. ನಾಗರಿಕ ಹಕ್ಕುಗಳ ಅಮಾನತು ಮತ್ತು ನಿರ್ಬಂಧ ಹೇರಿಕೆ ಇಂತಹ ಸ್ಥಿತಿಯಲ್ಲಿ ಸಮರ್ಥನೀಯ' ಎಂಬ ವಾದಗಳು ಹುಟ್ಟುತ್ತವೆ. (ಜಮ್ಮು ಕಾಶ್ಮೀರದ ಸಂದರ್ಭದಲ್ಲಿ ಮುಂದಿಡಲಾದ ಈ ಬಗೆಯ ವಾದವು ಸರ್ವೋಚ್ಚ ನ್ಯಾಯಾಲಯವನ್ನೂ ಪ್ರಭಾವಿಸಿಬಿಟ್ಟಿತು.)

ಈ ರೀತಿಯ ಕೇಂದ್ರೀಕರಣದ ವಿನಾಶಕಾರಿ ಪರಿಣಾಮಗಳು ಜಮ್ಮು ಕಾಶ್ಮೀರದ ಸಂದರ್ಭದಲ್ಲಿ ಸ್ಪಷ್ಟವಾಗಿದೆ. ಒಂದು ರಾಜ್ಯವು ದೇಶದೊಡನೆ ಸೇರಬಯಸಿದ ವಿಶಿಷ್ಟ ಸಂದರ್ಭವನ್ನು ಗಣನೆಗೆ ತೆಗೆದುಕೊಂಡ, ಹೊಂದಾಣಿಕೆಯ ಪ್ರಕಟ ರೂಪವೇ ಅನುಚ್ಛೇದ ೩೭೦ ಮತ್ತು ೩೫ಎ. ಇದು ಹಿಂದು ರಾಜನಿಂದ ಆಳಲ್ಪಡುತ್ತಿದ್ದ ಮುಸ್ಲಿಂ ಬಹುಸಂಖ್ಯಾತ ರಾಜ್ಯ, ತಾನು ಪಾಕಿಸ್ತಾನದೊಡನೆ ಒಂದಾಗುವುದಕ್ಕೆ ಪ್ರತಿಯಾಗಿ ಭಾರತದೊಡನೆ ಒಂದಾಗಿದ್ದಕ್ಕಾಗಿ ಕೊಡಲ್ಪಟ್ಟ ವಿಶೇಷ ಸ್ಥಾನಮಾನ. ಇದ್ದಕ್ಕಿದ್ದಂತೆ ಏಕಪಕ್ಷೀಯವಾಗಿ ಈ ವಿಶೇಷ ಸ್ಥಾನಮಾನವನ್ನು ರದ್ದುಪಡಿಸುವುದು ಹಿಂದಿನ ವಾಗ್ದಾನವನ್ನು ಮುರಿದಂತೆ. ಭಾರತದ ಇತರ ಪ್ರದೇಶಗಳಲ್ಲಿ ಹಿಂದುತ್ವವಾದಿಗಳು ಈ ಕ್ರಮವನ್ನು ಎಷ್ಟೇ ಸಂಭ್ರಮಿಸಿದರೂ ಇದು ಇಡೀ ಭಾರತ ದೇಶದ ತಳಹದಿಗೆ ಉಂಟುಮಾಡುವ ಅಪಾಯ ಎಂಬುದು ಖಚಿತ.

ಧರ್ಮವು ರಾಷ್ಟ್ರೀಯತೆಯ ತಳಹದಿಯಾಗಬಾರದು. ಏಕೆಂದರೆ ಅದು ಅನಾದಿಕಾಲದಿಂದಲೂ ಈ ರಾಷ್ಟ್ರವು ಅಸ್ತಿತ್ವದಲ್ಲಿತ್ತು ಎಂಬ ಊಹೆಯನ್ನು ಆಧರಿಸಿದ್ದು, ಇದು ದೀರ್ಘಕಾಲದ ವಸಾಹತು ವಿರೋಧಿ ಹೋರಾಟದಿಂದ ಈ ಆಧುನಿಕ ದೇಶವು ಹುಟ್ಟಿರುವುದರಿಂದ ಇಲ್ಲಿ ಹೊಂದಾಣಿಕೆಗೆ ಅವಕಾಶ ಕಲ್ಪಿಸಬೇಕು ಎಂಬ ಭಾವನೆ ಹರಡುವುದನ್ನು ತಡೆಗಟ್ಟುತ್ತದೆ. ಪಾಕಿಸ್ತಾನದ ಪೂರ್ವ ಭಾಗದಲ್ಲಿ ಭಾಷೆಯ ಆಧಾರದಲ್ಲಿ ಹೋರಾಟ ನಡೆದು ಆ ದೇಶ ವಿಭಜನೆಯಾದದ್ದು ಇದಕ್ಕೊಂದು ಸ್ಪಷ್ಟ ಉದಾಹರಣೆ. ಹಿಂದುತ್ವ ರಾಷ್ಟ್ರೀಯತೆಯು ದೇಶವನ್ನು ಇದೇ ದಿಕ್ಕಿಗೆ ತಳ್ಳುತ್ತಿದೆ; ಕಾಶ್ಮೀರಿಗಳ ಅವಮಾನವನ್ನು ಸಂಭ್ರಮಿಸುತ್ತಿರುವವರು ಒಂದು ದಿನ ಸರ್ಕಾರದ ಈ ನಿರ್ಧಾರಕ್ಕಾಗಿ ಪಶ್ಚಾತ್ತಾಪ ಪಡುವರು.

ಜಮ್ಮು ಕಾಶ್ಮೀರದಲ್ಲಿ ತಾನು ನಡೆಸಿದ ಅವಾಂತರದಿಂದ ತೃಪ್ತಿಯಿಲ್ಲದೆ ಈಗ ನರೇಂದ್ರ ಮೋದಿ ಸರ್ಕಾರವು ದೇಶದಾದ್ಯಂತ ಹಿಂದಿ ಹೇರಿಕೆ ಮಾಡಲು ಪ್ರಯತ್ನಿಸುತ್ತಿದೆ. ಇದು ಹಲವಾರು ಪ್ರಾಂತೀಯ ರಾಷ್ಟ್ರೀಯತೆಗಳ ಆಕಾಂಕ್ಷೆಗಳನ್ನು ದಮನ ಮಾಡುವ ಭಯಾನಕ ಕ್ರಮವಾಗಿದೆ. ಇದು ದೇಶವನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ದೇಶವನ್ನು ಛಿದ್ರಗೊಳಿಸುವ ಕ್ರಮವಾಗಿದೆ. ಛಿದ್ರಗೊಳಿಸುವ ಪ್ರವೃತ್ತಿಯು ಅನಿವಾರ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯ ಮಾನವ ಹಕ್ಕುಗಳ ಹಾಗೂ ನಾಗರೀಕ ಸ್ವಾತಂತ್ರ್ಯ ಹರಣದ ಕ್ರಮಗಳಿಗೆ ಕಾರಣವಾಗುವುದು.

ಪ್ರಾಂತೀಯ – ಭಾಷಿಕ ರಾಷ್ಟ್ರೀಯತೆಗಳ ಆಕಾಂಕ್ಷೆಗಳನ್ನು ದಮನ ಮಾಡುವ, ನಮ್ಮ ಒಕ್ಕೂಟ ವ್ಯವಸ್ಥೆಯ ಒಳಗೆ ಕೇಂದ್ರೀಕರಣವನ್ನು ಹೆಚ್ಚು ಮಾಡುವ ರೂಪವನ್ನು ಪಡೆದುಕೊಳ್ಳುವ ಪ್ರವೃತ್ತಿಯು, ಬರೀ ಹಿಂದುತ್ವದಿಂದ ಮಾತ್ರ ಹುಟ್ಟುವುದಿಲ್ಲ; ಅದು ತನ್ನ ಆರ್ಥಿಕ ವಿನ್ಯಾಸದಲ್ಲಿ ಕಾರ್ಪೋರೇಟ್ ಆರ್ಥಿಕ ಆಲಿಗಾರ್ಕಿ(ಕೆಲವೇ ಜನರ ಆಳ್ವಿಕೆ) ಯ ಒತ್ತಾಯಗಳಿಗೆ ಮಣಿಯುತ್ತದೆ. ಸರಕು ಮತ್ತು ಸೇವಾ ತೆರಿಗೆಯ(ಜಿಎಸ್‌ಟಿ) ಜಾರಿಯು, ತಮಗೆ ಉಚಿತವೆನ್ನಿಸುವ ಹಾಗೆ ಸರಕು ತೆರಿಗೆ ವಿಧಿಸುವ ರಾಜ್ಯಗಳ ಹಕ್ಕನ್ನು ಕಿತ್ತುಕೊಂಡು ಅದನ್ನು ಜಿಎಸ್‌ಟಿ ಮಂಡಳಿಗೆ ನೀಡುತ್ತದೆ. ಈಗ ತೆರಿಗೆ ಮಟ್ಟದಲ್ಲಿ ಏನಾದರೂ ಹೊಂದಾಣಿಕೆ ಬೇಕೆಂದರೆ ಅವು ಈ ಮಂಡಳಿಯ ಎದುರು ದೀನವಾಗಿ ನಿಲ್ಲಬೇಕಾಗುತ್ತದೆ. ಹಲವಾರು ತಪ್ಪು ನಿರೀಕ್ಷೆಗಳಿಂದ ಈ ಕೇಂದ್ರೀಕರಣದ ಕ್ರಮಕ್ಕೆ ಒಪ್ಪಿಗೆ ನೀಡಿದ ರಾಜ್ಯಗಳು ತಾವು ಮಾಡಿದ ತಪ್ಪಿನ ಗಹನತೆಯನ್ನು ಅರ್ಥಮಾಡಿಕೊಳ್ಳುತ್ತಿವೆ. 'ಒಂದು ರಾಷ್ಟ್ರ–ಒಂದು ಭಾಷೆ' ಎಂಬ ಕಲ್ಪನೆಯು ನಮ್ಮ ಒಕ್ಕೂಟ ವ್ಯವಸ್ಥೆಗೆ ಜಿ ಎಸ್ ಟಿ ಯ ಕಲ್ಪನೆಗೆ ಆಧಾರವಾದ 'ಒಂದು ರಾಷ್ಟ್ರ – ಒಂದು ತೆರಿಗೆ' ಎಂಬ ಕಲ್ಪನೆಯಷ್ಟೇ ಅಪಾಯಕಾರಿಯಾಗಿದೆ.

ತೊಂದರೆಯಾಗಿರುವುದು ಜಿಎಸ್‌ಟಿಯಿಂದಲ್ಲ, ಅದನ್ನು ಜಾರಿಗೆ ತಂದ ಅವಸರದ ಕ್ರಮದಿಂದ ಎಂಬ ಸಾಮಾನ್ಯ ಅಭಿಪ್ರಾಯವನ್ನು ಹರಡಲಾಗುತ್ತಿದೆ. ಇದು ನಿಜವಲ್ಲ. ಜಿಎಸ್‌ಟಿಯಿಂದ ಹುಟ್ಟಿರುವ ಆರ್ಥಿಕ ಹಿನ್ನಡೆಯು ಜಿಎಸ್‌ಟಿ ಯಿಂದಲೇ ಆಗಿರುವಂಥದು. ಬೃಹತ್ ಉತ್ಪಾದನಾ ವಲಯವು ತನಗೆ ಬೇಕಾದ ವಸ್ತುಗಳನ್ನು (input) ಸಣ್ಣ ಮತ್ತು ಚಿಲ್ಲರೆ ಉತ್ಪಾದಕ ವಲಯದಿಂದ ಕೊಳ್ಳುವ ವ್ಯವಸ್ಥೆ ಇದೆ. (ಸಣ್ಣ ಉತ್ಪಾದಕ ವಲಯದ ಕಡಿಮೆ ಕೂಲಿಯ ಅನುಕೂಲವನ್ನು ಉಪಯೋಗಿಸಿಕೊಳ್ಳುವುದು ಇದರ ಹಿಂದಿನ ಉದ್ದೇಶ) ಈಗ ಬೃಹತ್ ಉತ್ಪಾದಕ ವಲಯವು ತನ್ನ ತೆರಿಗೆ ವಾಪಸಾತಿ ಪಡೆಯಲು ಕಿರು ಉತ್ಪಾದಕ ವಲಯವು ಜಿಎಸ್‌ಟಿ ಪಾವತಿಸಿರುವುದನ್ನು ಖಚಿತಪಡಿಸಬೇಕಾದುದು ಅನಿವಾರ್ಯ.

ಇದು ಎರಡು ವಿಚಾರವನ್ನು ಸೂಚಿಸುತ್ತದೆ. ಮೊದಲನೆಯದಾಗಿ ಈ ಮೊದಲು ತಾನು ಭರಿಸುತ್ತಿದ್ದುದಕ್ಕಿಂತಲೂ ಹೆಚ್ಚು ಖರ್ಚನ್ನು ಸಣ್ಣ ಉತ್ಪಾದಕ ವಲಯವು ಈಗ ಭರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ವಾಸ್ತವದಲ್ಲಿ

‘ಅವಿಭಾಜ್ಯತೆ’ಯ(indivisibility) ಕಾರಣದಿಂದ ಜಿಎಸ್‌ಟಿ ಕಾರ್ಯವಿಧಾನವನ್ನು ಅನುಸರಿಸುವುದಕ್ಕಾಗಿ ಸಣ್ಣ ಉತ್ಪಾದಕ ವಲಯವು ತಾನು ಉತ್ಪಾದಿಸಿದ ಪ್ರತಿ ವಸ್ತುವಿಗೂ ಬೃಹತ್ ಉತ್ಪಾದಕ ವಲಯಕ್ಕಿಂತ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಎರಡನೆಯದಾಗಿ ಈ ಮೊದಲು ತೆರಿಗೆ ವಿನಾಯ್ತಿ ಪಡೆಯುತ್ತಿದ್ದ ಘಟಕಗಳನ್ನೂ ಈಗ ತೆರಿಗೆ ಬಲೆಯೊಳಗೆ ಸೆಳೆಯಲಾಗುತ್ತಿದೆ. ಜಿಎಸ್‌ಟಿ ಪ್ರಮಾಣವನ್ನು ಸಾಧ್ಯವಾದಷ್ಟೂ ಆದಾಯಸ್ಥಿರ(ತೆರಿಗೆ ಮಟ್ಟಗಳಲ್ಲಿ ಬದಲಾವಣೆ ಮಾಡಿದರೂ ಸರ್ಕಾರಕ್ಕೆ ಬರುವ ಮೊತ್ತ ಬದಲಾಗದೇ ಉಳಿಯುವ ಮಟ್ಟ) ಮಟ್ಟದಲ್ಲಿ ನಿಗದಿ ಮಾಡುವ ದೃಷ್ಟಿಯಿಂದ ಮತ್ತು ಒಂದೊಂದು ಸರಕಿನ ತೆರಿಗೆ ಮಟ್ಟವನ್ನೂ ದೇಶದಾದ್ಯಂತ ಒಂದೇ ಮಟ್ಟದಲ್ಲಿ ಇರಿಸುವ ಪ್ರಯತ್ನದ ಕಾರಣಕ್ಕೆ ಈ ಮೊದಲು ತೆರಿಗೆ ನೀಡದಿದ್ದ ಸಣ್ಣ ಘಟಕವೂ ಇಂದು ಭಾರಿ ತೆರಿಗೆ ನೀಡುವಂತಾಗಿದೆ.

ಜಿಎಸ್‌ಟಿ ಹೊರೆಯಿಂದ ಹಲವಾರು ಸಣ್ಣ ಘಟಕಗಳು ಮುಳುಗುತ್ತಿವೆ. ಇದು ಈಗಾಗಲೇ ನವ ಉದಾರವಾದದ ವಿರೋಧಾಭಾಸಗಳಿಂದ ಉಂಟಾಗಿರುವ ಜಾಗತಿಕ ಆರ್ಥಿಕ ಹಿನ್ನಡೆಗೆ ಸಿಲುಕಿರುವ ಭಾರತದ ಆರ್ಥಿಕತೆಗೆ ಮತ್ತಷ್ಟು ಪೆಟ್ಟು ನೀಡುತ್ತಿದೆ. ಈ ಆರ್ಥಿಕ ಹಿನ್ನಡೆಯ ಪ್ರವೃತ್ತಿಯು ಪುನಃ ಕಡಿಮೆ ಜಿಎಸ್‌ಟಿ ತೆರಿಗೆ ಸಂಗ್ರಹಕ್ಕೆ ಕಾರಣವಾಗುತ್ತದೆ. ಇದನ್ನೇ ನಾವು ಇಂದು ಕಾಣುತ್ತಿರುವುದು.

ಇದನ್ನು ಇನ್ನೊಮ್ಮೆ ಪುನರಾವರ್ತಿಸಬೇಕೆಂದರೆ, ಈಗ ಉಂಟಾಗಿರುವ ಆರ್ಥಿಕ ಸಂಕಷ್ಟವು ಜಿಎಸ್‌ಟಿಯನ್ನು ಜಾರಿಗೆ ತರುವುದರಲ್ಲಿ ತೋರಿದ ಅವಸರ ಅಥವಾ ಒಡ್ಡತನದ ಕಾರಣದಿಂದ ಎಂಬುದು ನವಉದಾರವಾದಿ ಕಟ್ಟುಕಥೆ ಮಾತ್ರ. ಇದು ಜಿಎಸ್‌ಟಿಯ ಕಾರಣದಿಂದಲೇ ಉಂಟಾಗಿರುವ ಸಮಸ್ಯೆ. ಹಲವಾರು ಸಣ್ಣ ಉತ್ಪಾದಕರಿಗೆ ವಿನಾಯಿತಿ ದೊರೆತು ಆರ್ಥಿಕತೆಯ ಒಂದು ವಲಯಕ್ಕೆ ಮಾತ್ರ ಅನ್ವಯವಾಗುತ್ತಿದ್ದ ತೆರಿಗೆಯನ್ನು ಸಣ್ಣ ಉತ್ಪಾದಕರನ್ನೂ ಒಳಗೊಂಡಂತೆ ಎಲ್ಲ ವಲಯಗಳಿಗೂ ಅನ್ವಯ ಮಾಡುವ ಕ್ರಮವೇ ಜಿಎಸ್‌ಟಿ. ಇದರಿಂದಾಗಿ ಹಿಂದೆಂದೂ ಇಲ್ಲದಿದ್ದ ರೀತಿಯಲ್ಲಿ ಸಣ್ಣ ಉತ್ಪಾದಕರು ಇಂದು ಹಿಂಡಲ್ಪಡುತ್ತಿರುವುದು ಆಶ್ಚರ್ಯವೇನಲ್ಲ.

ಅದು ಮಾರುಕಟ್ಟೆಯನ್ನು ಒಂದುಗೂಡಿಸಬಲ್ಲದು ಅಂದರೆ ಅವಿಭಾಜ್ಯಗೊಳಿಸುವದು (ಜಿಎಸ್‌ಟಿ ವ್ಯವಸ್ಥೆಯನ್ನು ಹೊಂದಿರದ ಪ್ರಪಂಚದ ಅತಿ ಬಲಿಷ್ಠ ಮಾರುಕಟ್ಟೆಯಾದ ಅಮೆರಿಕವು ಒಂದುಗೂಡಿಸಲ್ಪಟ್ಟಿಲ್ಲವೇನೋ ಎಂಬಂತೆ)ಎನ್ನುವಂತಹ ಹುಸಿ ವಾದಗಳನ್ನು ಬಳಸಿ ಜನರನ್ನು ಒಪ್ಪಿಸಬಯಸಿದ ಜಿಎಸ್‌ಟಿ ಯ ವಿಚಾರದ ನಿಜ ಸ್ವರೂಪವೇನು ಎಂಬುದು ಈಗ ಬಯಲಾಗುತ್ತಿದೆ; ಹಿಂದೆ ಬೃಹತ್ ಉತ್ಪಾದನಾ ವಲಯವು ಹೊರುತ್ತಿದ್ದ ತೆರಿಗೆ ಹೊರೆಯ ಒಂದು ಪಾಲನ್ನು ಕಿರು ಉತ್ಪಾದನಾ ವಲಯವೂ ಕೂಡ ಹೊರುವಂತೆ ಮಾಡುವುದೇ ಇದರ ಹಿಂದಿನ ಉದ್ದೇಶ.

ಅದ್ದರಿಂದ ಭಾರತದ ಒಕ್ಕೂಟ ವ್ಯವಸ್ಥೆಯ ಮೇಲೆ ನಡೆಯುವ ಪ್ರಹಾರವು ಎರಡು ಮೂಲಗಳಿಂದ ಹುಟ್ಟುತ್ತದೆ. ಒಂದು ಕಡೆ ಅದು ಹಿಂದುತ್ವ ಘಟಕಗಳಿಂದ ಬಂದರೆ, ಮತ್ತೊಂದು ಕಡೆ ಅದು ಕಾರ್ಪೊರೇಟ್ ಆಲಿಗಾರ್ಕಿಯಿಂದ ಬರುತ್ತದೆ. ಇಂದು ಈ ಎರಡು ಅಂಗಗಳು/ಗುಂಪುಗಳು ಬಹು ಮುಖ್ಯ ಪಾತ್ರ ವಹಿಸುತ್ತಿರುವ ಒಂದು ಮಿತ್ರಕೂಟದಿಂದ, ಅಂದರೆ ಕಾರ್ಪೊರೇಟ್– ಮತೀಯ ಮಿತ್ರ ಕೂಟದಿಂದ ದೇಶವು ಆಳಲ್ಪಡುತ್ತಿರುವುದರಿಂದ, ಕೇಂದ್ರೀಕರಣದ ಪ್ರವೃತ್ತಿಯು ಬಹಳ ಬಲವಾಗಿದೆ. ನಮ್ಮ ದ್ವಿವಿಧ ರಾಷ್ಟ್ರೀಯ ಪ್ರಜ್ಞೆಯ ಒಂದು ಮುಖ್ಯ ಘಟಕವಾಗಿರುವ, ಪ್ರಾಂತೀಯ ಭಾಷಿಕ ರಾಷ್ಟ್ರೀಯತೆಗಳ ಮೇಲೆ ನಡೆಯುವ ದಬ್ಬಾಳಿಕೆಯು ಮುಂದಿನ ದಿನಗಳಲ್ಲಿ ದೇಶಕ್ಕೆ ವಿಪತ್ತನ್ನು ತಂದೊಡ್ಡುವುದು.

ಹಿಂದಿನ ಸರ್ಕಾರಗಳು ೭೦ ವರ್ಷಗಳಲ್ಲಿ ಮಾಡಲಾಗದ್ದನ್ನು ತಾನು ೭೦ ದಿನಗಳಲ್ಲಿ ಮಾಡಿರುವುದಾಗಿ ಭಾರತೀಯ ಜನತಾ ಪಕ್ಷವು ಆಗಾಗ ಹೇಳಿಕೊಳ್ಳುತ್ತದೆ. ಅದು ನಿಜ. ಇಷ್ಟು ವರ್ಷಗಳಲ್ಲಿ ಸರ್ಕಾರಗಳು ಪಿಂಗಾಣಿಯ ಅಂಗಡಿಯ ಒಳಗೆ ಗೂಳಿಗಳನ್ನು ಬಿಟ್ಟುಕೊಂಡಿರಲಿಲ್ಲ; ಇಂದು ಅವು ಲಂಗುಲಗಾಮಿಲ್ಲದೆ ತಿರುಗಾಡುತ್ತಿವೆ.

**(ಪ್ರಭಾತ್ ಪಟ್ನಾಯಕ್ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ಅಧ್ಯಯನ ಕೇಂದ್ರದಲ್ಲಿ ಅರ್ಥಶಾಸ್ತ್ರವನ್ನು ಬೋಧಿಸಿದ ದೇಶದ ಹಿರಿಯ ಆರ್ಥಿಕ ತಜ್ಞರು ಮತ್ತು ರಾಜಕೀಯ ವಿಶ್ಲೇಷಕರು)**



(ಕೃಪೆ: **ಜನತಾ, ಸೆಪ್ಟೆಂ.** ೨೯, ೨೦೧೯
ಕನ್ನಡಕ್ಕೆ ಎಂ. ರಾಜು)

# ಶಿವಮೊಗ್ಗದಲ್ಲಿ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮೋತ್ಸವ ಒಂದು ವರದಿ



**ಸ**ಬರ್ಮತಿ ಆಶ್ರಮವೂ ಸೇರಿದಂತೆ ಎಲ್ಲ ಗಾಂಧಿ ಸಂಸ್ಥೆಗಳನ್ನು ಸರ್ಕಾರ ವಶಪಡಿಸಿಕೊಳ್ಳಲು ಹುನ್ನಾರ ನಡೆಸಿದೆ. ಇದು ಯಶಸ್ವಿಯಾದರೆ ಗಾಂಧಿ ಮಾರ್ಗ ದಾರಿ ತಪ್ಪಿದಂತೆಯೇ. ಹಾಗಾಗಿ ಇದರ ವಿರುದ್ಧ ಜನ ದನಿ ಎತ್ತಬೇಕಾಗಿದೆ ಎಂದು ಹಿರಿಯ ಗಾಂಧಿ ಚಿಂತಕ ಹಾಗೂ ಕಸ್ತೂರ ಬಾ ರಾಷ್ಟ್ರೀಯ ಟ್ರಸ್ಟ್‌ನ ಸದಸ್ಯರೂ ಆದ ಪ್ರೊ. ಜಿ.ಬಿ. ಶಿವರಾಜು ಕರೆ ನೀಡಿದರು. ಅವರು ಅಕ್ಟೋಬರ್ ೨ರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಶಿವಮೊಗ್ಗ ಪ್ರೆಸ್ ಟ್ರಸ್ಟ್‌ನ ಸಹಯೋಗದಲ್ಲಿ ಶಿವಮೊಗ್ಗದ ಪತ್ರಿಕಾ ಭವನದಲ್ಲಿ ಆಯೋಜಿಸಿದ್ದ ಮಹಾತ್ಮ ಗಾಂಧಿಯವರ ೧೫೦ನೇ ಜನ್ಮ ಮಹೋತ್ಸವ ಸಮಾರಂಭದ ಆಶಯ ಭಾಷಣ ಮಾಡುತ್ತಿದ್ದರು.

ಜಗತ್ತಿನ ಮಹನೀಯರೆಲ್ಲರೂ ಗಾಂಧಿಯವರ ಮಹತ್ತನ್ನು ಗುರುತಿಸುತ್ತಿರುವಾಗ ಭಾರತದ ಯುವ ಜನತೆ ಇವರ ಬಗ್ಗೆ ಉಪೇಕ್ಷೆ ತಾಳಿರುವುದು ವಿಷಾದಕರವಾಗಿದ್ದು, ಇವರಿಗೆ ಗಾಂಧಿಯವರು ಹೇಳಿದ ಸಾರ್ವತ್ರಿಕ ಸತ್ಯಗಳನ್ನು ಮುಟ್ಟಿಸಲು ಈ ಸಂದರ್ಭವನ್ನು ಬಳಸಿಕೊಳ್ಳಬೇಕಾಗಿದೆ ಎಂದರು.

ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಬೆಂಗಳೂರಿನ ಎಂ. ಚಂದ್ರಶೇಖರ್ ಪ್ರತಿಷ್ಠಾನದ ಅಧ್ಯಕ್ಷ ಎಂ.ಸಿ. ನರೇಂದ್ರ ಅವರು ಮಾತನಾಡಿ, ಗಾಂಧಿ ಜಗತ್ತಿನ ಎಲ್ಲ ಸಂಗತಿಗಳನ್ನು ಕುರಿತ ಸಾರಸಂಗ್ರಹವಾಗಿದ್ದು, ತಾಂತ್ರಿಕ ಸಾಧನ ಸಲಕರಣೆಗಳ ದುರ್ಬಳಕೆಯ ಮಧ್ಯೆ ದಾರಿ ತಪ್ಪುತ್ತಿರುವ ಇಂದಿನ ಮಕ್ಕಳಿಗೆ ಪೋಷಕರು ಗಾಂಧಿ ಮೌಲ್ಯಗಳನ್ನು ಪರಿಚಯಿಸಬೇಕಾಗಿದೆ ಎಂದರು.

ಇದಕ್ಕೆ ಮುನ್ನ ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು ಇಂದು ಕಣ್ಣಿಗೆ ರಾಚುವಂತೆ ಕಾಣುತ್ತಿರುವ ಹವಾಮಾನ ವೈಪರೀತ್ಯವೇ ಗಾಂಧಿ ಹೇಳಿದ ಮಿತಿಗಳುಳ್ಳ ಬದುಕಿನ ಸಂದೇಶದತ್ತ ನಮ್ಮ ಗಮನ ಸೆಳೆಯಬೇಕಾಗಿದೆ ಎಂದರು. ಜಗತ್ತೇ ಗಾಂಧಿಯನ್ನು ನೆನೆಯುತ್ತಿರುವಾಗ ನಮ್ಮ ಸರ್ಕಾರದ ಧುರೀಣರು ಈ ೧೫೦ನೇ ಜನ್ಮೋತ್ಸವ ಸಂದರ್ಭದಲ್ಲಿ ನೆಪ ಮಾತ್ರಕ್ಕೆ ಅವರ ನಾಮ ಸ್ಮರಣೆ ಮಾಡುತ್ತಾ, ಅವರ ಬದುಕಿನ ಮೌಲ್ಯಗಳ ವಿರುದ್ಧ, ಅವರು ನೇತೃತ್ವ ವಹಿಸಿದ್ದ ಸಾತಂತ್ರ್ಯ ಹೋರಾಟದ ವಿರುದ್ಧ ಕಾರ್ಯಾಚರಣೆ ನಡೆಸಿದ ಸಾವರ್ಕರ್ ಮತ್ತವರ ಅನುಯಾಯಿಗಳ ಸ್ಮರಣೆ ಮಾಡುತ್ತಿರುವುದು ಗಾಂಧಿಯವರಿಗೆ ಮಾಡುತ್ತಿರುವ ಅಪಚಾರವೇ ಆಗಿದೆ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಡಿ.ಎಸ್. ನಾಗಭೂಷಣ ಅವರ ‘ಗಾಂಧಿ ಕಥನ’ ಪುಸ್ತಕದ ಬಗ್ಗೆ ಏರ್ಪಡಿಸಲಾಗಿದ್ದ ಅವಲೋಕನ ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣ ಮಾಡಿದ ತುಮಕೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ನಿತ್ಯಾನಂದ ಶೆಟ್ಟಿಯವರು ಈ ಕೃತಿ ಯಾವುದೇ ಸೈದ್ಧಾಂತಿಕ ಪೂರ್ವಾಗ್ರಹಗಳಿಲ್ಲದೆ ಘಟನೆಗಳ ಮೂಲಕವೇ ಗಾಂಧಿ ಬದುಕನ್ನು ಕಟ್ಟಿಕೊಟ್ಟಿರುವ ಅಪೂರ್ವ ಕೃತಿಯಾಗಿದೆ ಎಂದರು. ಈ ಕೃತಿಯಲ್ಲಿ ಲೇಖಕರು ಕಥನ ಕ್ರಿಯೆಯಲ್ಲಿ ಜಿಜ್ಞಾಸೆಯನ್ನೂ, ಜಿಜ್ಞಾಸೆಯ ಮೂಲಕವೇ ಕಥನವನ್ನೂ ರೂಪಿಸುವ ವಿಶಿಷ್ಟ ರಚನಾ ಕ್ರಮವನ್ನು ಅನುಸರಿಸಿ ಎಲ್ಲ ಸ್ತರಗಳ ಓದುಗರೂ ಈ ಕೃತಿಯನ್ನು ಓದುವಂತೆ ಅನುವು ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ನಂತರ ಟಿ.ಎಲ್ ರೇಖಾಂಬ, ಟಿ. ಅವಿನಾಶ ಮತ್ತು ಎಂ. ಚದ್ರಶೇಖರಯ್ಯ ಗಾಂಧಿ ಕಥನ ಕೃತಿಯ ಬಗ್ಗೆ ತಮ್ಮ ಟಿಪ್ಪಣಿಗಳನ್ನು ಮಂಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಿವಮೊಗ್ಗ ಪ್ರೆಸ್ ಟ್ರಸ್ಟ್‌ನ ಅಧ್ಯಕ್ಷ ಎನ್. ಮಂಜುನಾಥ್ ಮಾತನಾಡಿ ಹೊಸ ತಲೆಮಾರಿನ ಪತ್ರಕರ್ತರಿಗೆ ಗಾಂಧೀಜಿಯ ಬಗ್ಗೆ ಅರಿವು ಇಲ್ಲದಿರುವ ಬಗ್ಗೆ ತಮ್ಮ ವಿಷಾದ ವ್ಯಕ್ತಪಡಿಸಿದರು.

ಹಿರಿಯ ಸಮಾಜವಾದಿ ಕೋಣಂದೂರು ಲಿಂಗಪ್ಪನವರ ಗಾಂಧೀಜಿ ಕುರಿತ ಒಂದು ಸ್ವರಚಿತ ಕವನ ವಾಚನದೊಂದಿಗೆ ಚಾಲನೆಗೊಂಡ ಸಮಾರಂಭದಲ್ಲಿ ಲೋಹಿಯಾ ಜನ್ಮಶತಾಬ್ದಿ ಟ್ರಸ್ಟ್‌ನ ಟ್ರಸ್ಟೀ ಹೊನ್ನಾಳಿ ಚಂದ್ರಶೇಖರ್ ಎಲ್ಲರನ್ನೂ ಸ್ವಾಗತಿಸಿದರೆ ಇನ್ನೋರ್ವ ಟ್ರಸ್ಟೀ ಎಂ. ರಾಜು ವಂದಿಸಿದರು.

(ವರದಿ: **ಸವಿತಾ ನಾಗಭೂಷಣ**)

# ಶಾಲಾ ಶಿಕ್ಷಣ ಮಾಧ್ಯಮ: ಚರ್ಚೆ ನಿಲ್ಲಿಸಕೂಡದು

ಪ್ರಚಲಿತ-೪



ಕರ್ನಾಟಕ ಸರ್ಕಾರ ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣದಲ್ಲಾದರೂ ಕನ್ನಡ ಮಾಧ್ಯಮವನ್ನು ಕಡ್ಡಾಯ ಮಾಡುವ ಆಜ್ಞೆಯನ್ನು ನಮ್ಮ ಸರ್ವೋಚ್ಚ ನ್ಯಾಯಾಲಯ ಅಸಾಂವಿಧಾನಿಕ ಎಂದು ಅನೂರ್ಜಿತಗೊಳಿಸಿದ ನಂತರ ಕನ್ನಡದ ಜನ ಮತ್ತು ಸರ್ಕಾರ ಆ ವಿಷಯವನ್ನೇ ಸಂಪೂರ್ಣವಾಗಿ ಕೈಬಿಟ್ಟಂತಿದೆ. ಒಂದು ರಾಷ್ಟ್ರದ ಜನರ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಕಾಪಾಡುವುದಕ್ಕೂ ಆ ರಾಷ್ಟ್ರದ ಸಂವಿಧಾನದಲ್ಲಿ ಅವಕಾಶವಿಲ್ಲ ಎಂದರೆ ಅದು ಆ ಸಂವಿಧಾನ ಕಟ್ಟಿಕೊಟ್ಟಿರುವ ರಾಷ್ಟ್ರದ ಕಲ್ಪನೆಯಲ್ಲೇ ಏನೋ ವಿರೋಧಾಭಾಸವಿದೆ ಎಂದೇ ಅರ್ಥವಲ್ಲವೆ? ಈ ತೀರ್ಪು ಬಂದಾಗ ಹಲವರು ಹಾಗೆ ಯೋಚಿಸಿದ್ದೂ ಉಂಟು. ಆಗ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಿದ್ಧರಾಮಯ್ಯನವರು ಆ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡುವುದಾಗಿಯೂ ಜನರಿಗೆ ವಾಗ್ದಾನ ಮಾಡಿದ್ದರು. ಆದರೆ ಅವರ ಆ ಪ್ರಯತ್ನ ಪ್ರಧಾನಮಂತ್ರಿಯವರಿಗೆ ಪತ್ರಗಳನ್ನು ಬರೆಯುವಷ್ಟಕ್ಕೇ ಮುಕ್ತಾಯವಾಯಿತು. ಆದರೆ ನಂತರ ಆದದ್ದು ಇನ್ನೂ ಅನಾಹುತಕಾರಿಯಾದದ್ದು. ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾದ ಕುಮಾರಸ್ವಾಮಿಯವರು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳನ್ನೇ ಹಂತಾನುಹಂತವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವ ಕೆಲಸ ಆರಂಭಿಸಿದರು.

ಇದು ಅಪ್ಪಟ ಅಲ್ಪಕಾಲಿಕ ಪ್ರಯೋಜನವಾದಿ ಬುದ್ಧಿಯ ವಿವೇಕಹೀನ ಕ್ರಮ ಎಂದು ಗಟ್ಟಿಯಾಗಿ ಹೇಳುವ ವಿವೇಕವನ್ನು ಬಹುತೇಕ ಜನ ಕಳೆದುಕೊಂಡಿರುವ ಬಹುಸಂಖ್ಯಾತವಾದಿ ಪ್ರಜಾಪ್ರಭುತ್ವದ ಕಾಲ. ಹಾಗಾಗಿ ಇಂಗ್ಲಿಷ್ ಮುಂದೆ ಕನ್ನಡ ಕಾಲಕಸವಾಗಿ ಬಿದ್ದಿದೆ. ಇದರ ಮಧ್ಯೆ ರಾಷ್ಟ್ರ ಎಂದರೆ ಹಿಂದಿ ಪ್ರಭುತ್ವ ಎಂದು ವಾದಿಸುವವರಿಗೂ ಬಲ ಬಂದಿದ್ದು, ಕನ್ನಡದ ಜನ ಜಾಗತಿಕ ಪ್ರಜೆತನದೊಟ್ಟಿಗೆ ರಾಷ್ಟ್ರೀಯ ಪ್ರಜೆಯೂ ಆಗುವ ಹುಮ್ಮಸ್ಸಿನಲ್ಲಿ ತಾವು ಸ್ಥಳೀಯವಾಗಿ ಬೇರೂರದೆ ಆಗುವ ಎಲ್ಲವೂ ಕೃತಕವಾದವು, ಹುಸಿಯಾದವು, ನಮ್ಮ ವ್ಯಕ್ತಿತ್ವವನ್ನು ಟೊಳ್ಳಾಗಿಸುವವು ಎಂದು ಅರಿಯಬಲ್ಲ ಮೂಲ ವಿವೇಚನಾಶಕ್ತಿಯನ್ನೇ ಕಳೆದುಕೊಂಡಿದ್ದಾರೆ. ನಮಗೆ ಅಪ್ಪಟ ವ್ಯಾಪಾರಿ ಬುದ್ಧಿ ಕಲಿಸಿದ ಇಂಗ್ಲಿಷ್‌ನ ಮೋಹ ಪಾಶವೇ ಅಂತಹುದು. ಗಾಂಧಿ ಮಾತೃಭಾಷಾ ಶಿಕ್ಷಣದ ಮಹತ್ವವನ್ನು ಪ್ರತಿಪಾದಿಸಿದ್ದೇ ಈ ಕಾರಣದಿಂದ; ಒಣ ದೇಶಭಾಷಾ ಅಭಿಮಾನದಿಂದಲ್ಲ. ಅಂತಹ ಒಣ ದೇಶಭಾಷಾಭಿಮಾನದಿಂದಷ್ಟೇ ಮಾತೃಭಾಷಾ ಶಿಕ್ಷಣವನ್ನು ಹೇಳುವ ಆರೆಸ್ಸೆಸ್ ಈ ವಿಷಯದ ಬಗ್ಗೆ ಈಗ ಸೊಲ್ಲೆತ್ತುವ ಧೈರ್ಯವನ್ನೇ ವಹಿಸಲಾಗದಾಗಿದೆ. ಈ ವಿಷಯದಲ್ಲಿ ಅದನ್ನು ಇನ್ನು ಹೆಚ್ಚು ಕೆಣಕಿದರೆ ಅದು ರಾಷ್ಟ್ರದ ಮಾತೃಭಾಷೆ ಹಿಂದಿ ಎಂದು ವಾದಿಸತೊಡಗಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸೀತು!

ಆದೇನೇ ಇದ್ದರೂ, ಈ ಯಾವ ಪ್ರತಿಕೂಲ ಪರಿಸ್ಥಿತಿಯೂ ಮಾತೃಭಾಷಾ ಶಿಕ್ಷಣವಾದಿಗಳ ಎದೆಗುಂದಿಸಬಾರದು. ಸರ್ವೋಚ್ಚ ನ್ಯಾಯಾಲಯದ ತೀರ್ಪೇ ಅಂತಿಮ ಆದೇಶವಲ್ಲ. ಇದು ಪ್ರಜಾಪ್ರಭುತ್ವ, ಪ್ರಜಾಶಕ್ತಿಯ ನೈತಿಕ ಒತ್ತಡದ ಮೂಲಕ ಏನನ್ನಾದರೂ ಸಾಧಿಸಬಹುದು. ಸಂವಿಧಾನ ತಿದ್ದುಪಡಿಯೂ ಇದರಲ್ಲಿ ಒಂದು. ಕರ್ನಾಟಕದಲ್ಲಿ ಸಂಖ್ಯಾಬಲ ಕನ್ನಡದ ಪರವಾಗಿಯೇ ಇದೆ ಎಂಬುದನ್ನು ನಾವು ಗಮನಿಸಬೇಕು: ನಮ್ಮ ಆಡಳಿತಗಾರರ ಮತ್ತು ಕೇವಲ ಪ್ರಯೋಜನಬುದ್ಧಿಯ ಉದಯೋನ್ಮುಖ ಮಧ್ಯಮ ವರ್ಗದ ಜನರ ಎಷ್ಟೆಲ್ಲ ಅಪ್ರಾಮಾಣಿಕ ನಡೆ ನುಡಿಗಳ ಹೊರತಾಗಿಯೂ ರಾಜ್ಯದಲ್ಲಿ ಈಗಲೂ ಅರ್ಧಕ್ಕಿಂತ ಹೆಚ್ಚು ಮಕ್ಕಳು ಕನ್ನಡ ಮಾಧ್ಯಮದಲ್ಲೇ ಓದುತ್ತಿದ್ದಾರೆ. ಅಂದರೆ ಕನ್ನಡಪರವಾದ ಅರ್ಥಪೂರ್ಣ ಪ್ರಜಾಪ್ರಭುತ್ವದ ನೆಲೆಯ ಮತ್ತು ನೈತಿಕವಾದ ಧ್ವನಿ ಎತ್ತಲು ಇನ್ನೂ ಕಾಲ ಮಿಂಚಿಲ್ಲ. ಕನ್ನಡ ಪರವಾದ ಇಂತಹ ನೈತಿಕ ನೆಲೆಯ ಜಾಗೃತ ಸಂಘಟನೆಯ ತುರ್ತು ಅಗತ್ಯ ಇಂದು ಇದೆ. ಈ ಹಿನ್ನೆಲೆಯಲ್ಲಿ ಪತ್ರಿಕೆ ಆಯ್ದ ಕೆಲವರನ್ನು ಮೂರು ಪ್ರಶ್ನೆಗಳನ್ನು ಕೇಳುವ ಮೂಲಕ ಒಂದು ನಾಡಿಮಿಡಿತ ಪರೀಕ್ಷೆ ಮಾಡಿದೆ. ಕನ್ನಡ ಮಾಧ್ಯಮ ಕುರಿತ ಹಲವು ಸಮಸ್ಯೆಗಳು ಇಲ್ಲಿ ಬಿಚ್ಚಿಕೊಂಡಿವೆ. ಇವುಗಳಲ್ಲಿ ಕೆಲವು ನಿಜವಾದರೂ, ಹಲವು ಕುಂಟು ನೆಪಗಳು ಎಂಬುದು ಹೇಳಿದವರಿಗೂ, ನಮಗೂ ಗೊತ್ತಾಗುವಂತೆಯೇ ಇವೆ. ನಿಜವಾದ ಸಮಸ್ಯೆ ಎಂದರೆ ನಮ್ಮ ಹೊಸ ಮಧ್ಯಮ ವರ್ಗದ ಮೈಮರೆವು ಮತ್ತು ಹುಸಿ ಪ್ರತಿಷ್ಠೆ. ಈ ಬಗ್ಗೆ ಈಗ ಕೆಲವರಲ್ಲಿ ಪಶ್ಚಾತ್ತಾಪವೂ ಉಂಟಾದಂತಿದೆ. ಇದು ತಡವಾದರೂ ಸ್ವಾಗತಾರ್ಹವೇ. ಇರಲಿ, 'ಹೊಸಮನುಷ್ಯ' ಕೇಳಿದ ಮೂರು ಪ್ರಶ್ನೆಗಳೆಂದರೆ–

**೧. ನಮ್ಮ ಮಕ್ಕಳಿಗೆ ಶಾಲಾ ಶಿಕ್ಷಣ ಮಾಧ್ಯಮ ಕನ್ನಡದಲ್ಲೇ ಇರಬೇಕೆಂಬುದಕ್ಕೆ ನಿಮ್ಮ ಕಾರಣಗಳೇನು.?**

**೨. ನಿಮ್ಮ ಮಕ್ಕಳು/ಮೊಮ್ಮಕ್ಕಳು ತಮ್ಮ ಶಾಲಾ ಶಿಕ್ಷಣವನ್ನು ಯಾವ ಮಾಧ್ಯಮದಲ್ಲಿ ಪಡೆಯುತ್ತಿವೆ? ಮತ್ತು ಅದಕ್ಕೆ ಕಾರಣಗಳೇನು?**

**೩. ಕನ್ನಡದ ಮಕ್ಕಳಿಗೆ ಕನ್ನಡದಲ್ಲೇ ಶಾಲಾಶಿಕ್ಷಣ ಒದಗಿಸುವ ಸಾಧ್ಯತೆಗಳ ಎಲ್ಲ ಬಾಗಿಲುಗಳೂ ಮುಚ್ಚಿದಂತಿರುವ ಈ ಸಂದರ್ಭದಲ್ಲಿ ನಿಮ್ಮ ಪ್ರಕಾರ ಈ ದಿಸೆಯಲ್ಲಿ ನಾವು ಮಾಡಬಹುದಾದ ಕೊನೆಯ ಪ್ರಯತ್ನ ಯಾವುದಾಗಿರಬೇಕು.?**

-ಸಂಪಾದಕ

## ಇಂಗ್ಲಿಷ್ ಈಜು ಬುರುಡೆಯ ಅಗತ್ಯ



೧. ತಾಯಿನುಡಿ, ಮನೆಮಾತು, ಪರಿಸರ ಭಾಷೆ ಎಲ್ಲವೂ ಕನ್ನಡವಾಗಿರುವಾಗ ಸಹಜವಾಗಿಯೇ ಅದು ಸರಿಯಾಗಿ, ಶೀಘ್ರವಾಗಿ ಗ್ರಹಿಸುವ ಮಾಧ್ಯಮವಾಗಿರುತ್ತದೆ, ಬುದ್ಧಿಭಾವಗಳನ್ನು ಅರಿಯಲೂ ಅರುಹಲೂ ಅದು ಸದಾ ಸಜ್ಜಾಗಿರುತ್ತದೆ ಎಂದು ಪೋಷಕರೂ ಸರ್ಕಾರವೂ ಕನ್ನಡವನ್ನು ಪೊರೆದರು. ಆದರೆ ಇಂದು ಈ ಪರಿಸ್ಥಿತಿ ಬದಲಾಗಿದೆ. ಈಗ ಶೀಘ್ರ ಹಣಗಳಿಕೆಗೆ ಇಂಗ್ಲಿಷ್ ಮಾಧ್ಯಮ ಹೆದ್ದಾರಿಯಾಗಿದ್ದು ಇಂಗ್ಲಿಷ್ ಶಾಲೆಗಳು ಹೆಚ್ಚುತ್ತಿವೆ, ಕನ್ನಡ ಶಾಲೆಗಳು ಮುಚ್ಚುತ್ತಿವೆ. ಈ ಇಂಗ್ಲಿಷ್ ಮಾಧ್ಯಮ ಶಾಲೆಗಳ ವಿಪರ್ಯಾಸವೆಂದರೆ ಅಲ್ಲಿ ಪಾಠ ಹೇಳುವ ಗುರುಗಳೂ ಪಾಠ ಕೇಳುವ ಶಿಷ್ಯರೂ ಇಂಗ್ಲಿಷ್ ಮಾತೃಭಾಷೆಯವರಲ್ಲ. ಇಬ್ಬರಿಗೂ ತಮ್ಮದಲ್ಲದ ಭಾಷೆಯ ಬಗ್ಗೆ ಕಾಳಜಿ!

೨. ನನ್ನ ಮೂವರು ಮಕ್ಕಳೂ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದರು. ಆದರೆ ಮೊಮ್ಮಕ್ಕಳದು ಇಂಗ್ಲಿಷ್ ಮಾಧ್ಯಮ. ಅದು ಅವರ ಪೋಷಕರ ಆಯ್ಕೆ.

೩. 'ಕೊನೆಯ ಪ್ರಯತ್ನ' ಎಂಬ ಮಾತು ಬೇಡ. ಕನ್ನಡ ಗಂಡಾಂತರದಿಂದ ಪಾರಾಗಿ ಗೆಲ್ಲುವವರೆಗೂ ಪ್ರಯತ್ನಗಳು ನಿಲ್ಲಬಾರದು. ತಕ್ಷಣಕ್ಕೆ ತುರ್ತಾಗಿ ಕೈಗೊಳ್ಳಬೇಕಾದ ಕ್ರಮ ಎಂದರೆ, ಸರ್ಕಾರಿ ಶಾಲೆಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕು. ಕನ್ನಡ ಮುಳುಗದೆ ಇಂದಿನ ದಿನಮಾನದ ಪ್ರವಾಹದಲ್ಲಿ ತೇಲಬೇಕಾದರೆ ಇಂಗ್ಲಿಷ್ ಈಜುಬುರುಡೆಯನ್ನು ಕಟ್ಟಿಕೊಳ್ಳುವುದು ಲೇಸು. ಇದಕ್ಕಾಗಿ ಸರ್ಕಾರಿ ಶಾಲೆಗಳಲ್ಲಿ ಬೆಳಗ್ಗೆ ೮ ರಿಂದ ೧೨.೩೦ ರ ವರೆಗೆ ಕನ್ನಡ ಮಾಧ್ಯಮ ತರಗತಿಗಳು. ಮತ್ತೆ ಮಧ್ಯಾಹ್ನ ಈ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಮಾತ್ರ ೧.೩೦ ರಿಂದ ಸಂಜೆ ೪.೩೦ ರವರೆಗೆ ಇಂಗ್ಲಿಷ್ ತರಗತಿಗಳನ್ನು ನಡೆಸುವುದು. ಇಂಥ ಏರ್ಪಾಟಿನಿಂದ ಕನ್ನಡ ಮಾಧ್ಯಮ ಉಳಿದು ಇಂಗ್ಲಿಷಿನ ಹಂಬಲವೂ ಈಡೇರುತ್ತದೆ. ಇದರ ಜತೆಜತೆಗೇ ಖಾಸಗಿ ಶಾಲೆಗಳಲ್ಲಿ ಕನ್ನಡ ಬೋಧನೆ ಮತ್ತು ಕನ್ನಡ ಮಾಧ್ಯಮದ ತರಗತಿಗಳು ಇರುವುದು ಕಡ್ಡಾಯವಾಗಬೇಕು.

**–ಹಂಪನಾ,** ಹಿರಿಯ ಕನ್ನಡ ವಿದ್ವಾಂಸರು, ಬೆಂಗಳೂರು

## ಇಂಗ್ಲಿಷ್ ವ್ಯಾಮೋಹ ಹಿಂದಿ ಆಕ್ರಮಣಕ್ಕೆ ಕಾರಣವಾದೀತು!



೧. ಚಿಕ್ಕಂದಿನಲ್ಲಿ ನಮ್ಮ ಭಾಷೆಯಲ್ಲಿ ಕಲಿತದ್ದು ನಮ್ಮೊಳಗೆ ಸೇರಿ ಹೋಗಿರುತ್ತದೆ. ಪ್ರೌಢಶಾಲೆಯವರೆಗಾದರೂ ಕನ್ನಡದಲ್ಲಿ ಶಿಕ್ಷಣ ಇರಬೇಕು. ಆದರೆ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲೇಬೇಕು.

೨. ನಮ್ಮ ಮಕ್ಕಳಲ್ಲಿ ಸುಶ್ಮಿತಾ ಪ್ರೌಢಶಾಲೆಯವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತಳು. ಈಶಾನ್ಯೆ ಪ್ರೌಢಶಾಲೆಯಲ್ಲೂ ಕನ್ನಡ ಮಾಧ್ಯಮದಲ್ಲೇ ಕಲಿತಳು. ಇಬ್ಬರೂ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವವರು. ಈಶಾನ್ಯೆ ಇಂಜಿನಿಯರಿಂಗ್‌ನ್ನು ಅತ್ಯುನ್ನತ ಶ್ರೇಣಿಯಲ್ಲಿ, ಎಂ.ಎಸ್.ನ್ನು ಶೇ ೯೮ ಅಂಕ ಪಡೆದು ತೇರ್ಗಡೆ ಹೊಂದಿದಳು. ಇಬ್ಬರೂ ಭಾಷೆಯ ತೊಡಕಿಲ್ಲದೆ ದೇಶ–ವಿದೇಶ ಸುತ್ತಿ ಬಂದಿರುವರು. ಮೊಮ್ಮಗಳು ವಿಹಾ ಖಾನೋಲ್ಕರ್‌ಗೆ ಮೂರೂವರೆ ವರ್ಷದವರೆಗೂ ಮಾತು ಬರಲಿಲ್ಲ. ಇದಕ್ಕೆ ಮನೆಯಲ್ಲಿ ಬಹುಭಾಷಾ ವಾತಾವರಣವೇ ಕಾರಣವೆಂದು ತೇಜಸ್ವಿ ಹೇಳುತ್ತಿದ್ದರು. ಈಗ ಬೆಂಗಳೂರಿನಲ್ಲಿ ಕನ್ನಡ ಶಾಲೆಗಳೇ ಅಪರೂಪವಾಗಿರುವಾಗ ಇವಳು ಇಂಗ್ಲಿಷ್ ಮಾಧ್ಯಮ ಶಿಕ್ಷಣ ಪಡೆಯುವುದು ಅನಿವಾರ್ಯವಾಗಿದೆ. ಆದರೆ ಅವಳು ಒಂದು

ಭಾಷೆಯಾಗಿ ಕನ್ನಡ ಕಲಿಯುತ್ತಿದ್ದಾಳೆ.

ಈಶಾನ್ಯೆ ಕ್ಯಾಲಿಫೋರ್ನಿಯದಲ್ಲಿದ್ದಾಗ ಅಲ್ಲಿ ಒಂದು ಮಕ್ಕಳ ಹಬ್ಬ. ಅವಳ ಆಫೀಸಿನ ತುಂಬ ನೆರೆಹೊರೆಯಿಂದ ಕರೆದು ತಂದಿದ್ದ ಪುಟ್ಟ ಮಕ್ಕಳ ಕಲರವ. ಆ ಸಂದರ್ಭದಲ್ಲಿ ಈಶಾನ್ಯೆಯನ್ನು ಪರಿಚಯಿಸಲಾಗಿದ್ದು ಹೀಗೆ: 'ಇವರು ಇಂಡಿಯಾದಿಂದ ಬಂದಿದ್ದಾರೆ. ಒಬ್ಬರೇ ಜಗತ್ತು ಸುತ್ತುತ್ತಿದ್ದಾರೆ. ತಮ್ಮ ಎಲ್ಲ ಕೆಲಸಗಳನ್ನೂ ತಾವೇ ಪ್ರೀತಿಯಿಂದ ಮಾಡಿಕೊಳ್ಳುತ್ತಾರೆ. ಮಕ್ಕಳೇ ನೀವೂ ಇವರಂತಾಗಬೇಕು.' ಆಗ ಅಲ್ಲಿದ್ದ ಮಕ್ಕಳೆಲ್ಲ ಈಶಾನ್ಯೆಯನ್ನು ಕಣ್ತುಂಬಾ ತುಂಬಿಕೊಂಡವಂತೆ. ಆಗ ತನಗೆ ತಾನು ಓದಿದ ಗಂಗೋತ್ರಿ ಕನ್ನಡ ಶಾಲೆ ನೆನಪಿಗೆ ಬಂದು ತನ್ನ ಕಣ್ಣುಗಳೂ ತುಂಬಿ ಬಂದುವೆಂದು ಈಶಾನ್ಯೆ ಹೇಳುತ್ತಾಳೆ.

೩. ಕನ್ನಡ ಶಾಲೆಗಳ ಗುಣಮಟ್ಟವನ್ನು ಸುಧಾರಿಸಿ ಅಲ್ಲಿ ಇಂಗ್ಲಿಷ್‌ನ್ನು ಒಂದು ಭಾಷೆಯಾಗಿ ಚೆನ್ನಾಗಿ ಕಲಿಸುವ ವ್ಯವಸ್ಥೆಯಿರಬೇಕು. ಇಲ್ಲದಿದ್ದರೆ ಕನ್ನಡ-ಇಂಗ್ಲಿಷ್ ಗಲಾಟೆಯ ಮಧ್ಯೆ ಹಿಂದಿ ನುಸುಳುವ ಅಪಾಯವಿದೆ.

**-ರಾಜೇಶ್ವರಿ ತೇಜಸ್ವಿ**, ರೈತ ಮಹಿಳೆ ಮತ್ತು ಲೇಖಕಿ, ಮೂಡಿಗೆರೆ

## ಸಂವಿಧಾನ ತಿದ್ದುಪಡಿ, ಶಾಲಾ ಶಿಕ್ಷಣದ ರಾಷ್ಟ್ರೀಕರಣ ಅಗತ್ಯ



೧. ಮನೆಯಲ್ಲಿ ಮತ್ತು ಪರಿಸರದಲ್ಲಿ ಕಲಿತ ನುಡಿಯು ಲೋಕವನ್ನು ಕಾಣುವ ಮತ್ತು ಕಟ್ಟಿಕೊಡುವ ಮಾಧ್ಯಮವಾಗಿ ಈಗಾಗಲೇ ರೂಪಿತವಾಗಿರುತ್ತದೆ. ಶಾಲೆ ಅದರ ಮುಂದುವರಿಕೆ. ಈಗ ಇರುವ ಇಂಗ್ಲಿಷ್ ಮಾಧ್ಯಮವು ಮಾತು, ಓದು, ಬರವಣಿಗೆಯೆಂಬ ಮೂರು ನೆಲೆಗಳಲ್ಲೂ ಸೀಮಿತರಾದ ಸಂಕುಚಿತರಾದ ಲೋಕವಿರೋಧಿಗಳಾದ ಆದರ್ಶರಹಿತರಾದ ಕುಬ್ಜರನ್ನು ಸೃಷ್ಟಿಸುತ್ತಿದೆ. (ಇದಕ್ಕೆ ಇಂಗ್ಲಿಷ್ ಕಾರಣವಲ್ಲ, ಅದನ್ನು ಬಳಸಿಕೊಳ್ಳುತ್ತಿರುವ ದುಷ್ಟ ವ್ಯೂಹ/ವ್ಯವಸ್ಥೆಗಳು ಕಾರಣ. ನಾವು ಏನನ್ನು ಯಾಕೆ ಕಲಿಸುತ್ತೇವೆ ಎನ್ನುವುದು ಯಾವ ಭಾಷೆಯಲ್ಲಿ ಎನ್ನುವಷ್ಟೇ ಮುಖ್ಯ.

೨. ನಾನು ಕಾಲೇಜು ಪ್ರವೇಶಿಸುವವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತವನು. ನನ್ನ ಮಗನದು ಕನ್ನಡ ಪ್ರಥಮ ಭಾಷೆ, ಇಂಗ್ಲಿಷ್ ಮಾಧ್ಯಮ. ಚಿಕ್ಕ ಮಗುವನ್ನು ದೂರದ ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸುವದು ತಾಯಿ-ತಂದೆಯರಿಗೆ ಕಷ್ಟವಾಗುತ್ತದೆ. ಮೇಲುಮುಖ ಚಲನೆಯಲ್ಲಿರುವ(?) ಮಧ್ಯಮವರ್ಗದ ಲಕ್ಷಣಗಳು ನನ್ನಲ್ಲಿಯೂ ಇದ್ದವು. ಶಾಲಾಶಿಕ್ಷಣದ ಗೋಡೆಗಳಾಚೆಗೂ ಮಗುವನ್ನು ಸರಿಯಾಗಿ ಬೆಳೆಸಬಹುದೆಂಬ ನಂಬಿಕೆ ಇತ್ತು.

೩. ಈಗ ಅಲ್ಪಸಂಖ್ಯಾತರಾಗಿರುವ **'ನಾವು'** ಏನು ಮಾಡಿದರೂ ಸರಿಯಾದ ದಿಕ್ಕಿನಲ್ಲಿ ಬದಲಾವಣೆ ಆಗುವುದಿಲ್ಲ. ಬೀದಿ ಭಾಷಣ/ಬರವಣಿಗೆಗಳನ್ನು ಕಡಿಮೆ ಮಾಡಿ ಕನ್ನಡವನ್ನು ಎಲ್ಲ ನೆಲೆಗಳಲ್ಲೂ ಬೆಳೆಸುವುದೊಂದೇ 'ನಮಗೆ' ತೆರೆದಿರುವ ದಾರಿ. ಈ ದಿಕ್ಕಿನಲ್ಲಿ ಆಧುನಿಕ ತಂತ್ರಜ್ಞಾನವು ಮಿತ್ರನೇ ಹೊರತು ಶತ್ರುವಲ್ಲ. 'ಸಂವಿಧಾನ ಬದಲಾವಣೆ' ಮತ್ತು ಶಾಲಾ ಶಿಕ್ಷಣದ ರಾಷ್ಟ್ರೀಕರಣ'ಗಳಿಂದ ಮಾತ್ರ ಗುರಿ ಮುಟ್ಟುವುದು ಸಾಧ್ಯ. ಯಾವುದೇ ಪಕ್ಷ ಆ ದಿಕ್ಕಿನಲ್ಲಿ ಒಂದು ಹೆಜ್ಜೆಯೂ ಇಡುವುದಿಲ್ಲ. ಜನರು ಇದಕ್ಕೆ ಬೆಂಬಲ ನೀಡುವುದಿಲ್ಲ.

ಕನ್ನಡ ಮಾಧ್ಯಮದಲ್ಲಿ ತಿಳುವಳಿಕೆಯನ್ನು ಬಿತ್ತರಿಸುವ ಅನೌಪಚಾರಿಕ ಸಂಸ್ಥೆಗಳನ್ನು 'ಸಿರಿಗರ' ಹೊಡೆಯದ ಆದರ್ಶವಾದಿಗಳು ನಡೆಸಬೇಕು.

**-ಎಚ್. ಎಸ್. ರಾಘವೇಂದ್ರ ರಾವ್**, ಸಾಹಿತ್ಯ ಚಿಂತಕರು, ಬೆಂಗಳೂರು

## ನಮ್ಮನ್ನು ನಾವಾಗಿ ಉಳಿಸುವ ಮಾರ್ಗ



೧. ಇಲ್ಲಿಯೇ. ನಮ್ಮ ಅನುಭವಗಳು ಭಾಷೆಯೊಂದಿಗೇ ಬೆಳೆಯುವುದರಿಂದ ಅದನ್ನು ಬಿಡುವುದೆಂದರೆ ಚರ್ಮ ಸುಲಿದುಕೊಂಡಂತೆ. ಅಕೃತ್ರಿಮವಾಗಿ ಮತ್ತು ಅಧಿಕೃತವಾಗಿ ನಮ್ಮ ಒಡಲನ್ನು ತಿಳಿಸಿಕೊಡುವ ಶಕ್ತಿ ಇರುವುದು ನಮ್ಮ ನೆಲದ ಭಾಷೆಗೆ ಮಾತ್ರ. ನಮ್ಮನ್ನು ನಾವಾಗಿ ಉಳಿಸುವ ಮಾರ್ಗವೂ ಅದುವೇ. ಅತಿಮೋಹಕ್ಕೂ ಒಳಗಾಗದೆ, ಕನ್ನಡವನ್ನು ಬಳಸುವ ವಿವೇಕ ನಮಗೆ ಆತ್ಮಸ್ಥೈರ್ಯ ನೀಡುತ್ತದೆ ಎಂಬುದು ನನ್ನ ಅನುಭವವೂ ಆಗಿದೆ.

೨. ಕೇಳಿ! ನಾವು ಕನ್ನಡ ಮಾತಾಡುತ್ತೇವೆ, ಓದುತ್ತೇವೆ. ಅದು ಇದ್ದೇ ಇರುತ್ತದೆ. ನಮ್ಮ ಮಕ್ಕಳು ಗೊತ್ತಿರದ ಭಾಷೆಯನ್ನು ಕಲಿಯಬೇಕು ಎಂದಾಗ ಅದು ಸತ್ಯ ಕಂಡಿತು. ಮಕ್ಕಳೂ ಇಂಗ್ಲಿಷ್ ಶಾಲೆ ಸೇರಿದಾಗ ನನಗೇನೂ ತಪ್ಪು ಕಾಣಲಿಲ್ಲ. ನನ್ನ ಶಿವಮೊಗ್ಗೆಯ ದಿನಗಳವು. ಒಂಥರ ಕಾಡಿನಲ್ಲಿ ತಬ್ಬಿಬ್ಬು ನಿಂತ ಕರುವಿನಂತಿದ್ದೆ. ಮಕ್ಕಳ ಬಾಯಲ್ಲಿ ಇಂಗ್ಲಿಷ್ ಕೇಳುವಾಗ ಖುಶಿಯಾಗುತ್ತಿತ್ತು. ಆದರೆ ದಿನ ಹೋದಂತೆ ಅವರು ಓದುವುದು ಬರೀ ಮಿದುಳಿಗೆ ಮಾತ್ರ ಅಂಟಿಕೊಳ್ಳುತ್ತಿದೆಯೇ ಎಂದು ತಳಮಳವೂ ಸುರುವಾಯಿತು. 'ಮೇರೀ ಹ್ಯಾಡ್ ಎ ಲಿಟ್ಲ್ ಲ್ಯಾಂಬ್'ಕ್ಕಿಂತ 'ಮೈನಾ ಹಕ್ಕಿ ಹಾಡಿತು ಹಾಡೂ' ಹಾಡಿದ್ದರೆ ಅದು ಅವರ ಚೇತನದಲ್ಲಿ ಸರ್ವವ್ಯಾಪಿಯಾಗುತ್ತಿತ್ತು ಎಂಬುದು ಬಹಳ ನಿಧಾನವಾಗಿ ಅರಿವಾಯಿತು. ಅಪರಾಧೀಭಾವ ನನ್ನೊಳಗೆ ಶಾಶ್ವತವಾಗಿ ಉಳಿದೇಹೋಯಿತು. ಇಷ್ಟಾದರೂ ನನ್ನ ಮಕ್ಕಳು ಕನ್ನಡವನ್ನು ಬಹಳ ಪ್ರೀತಿಸುವ, ಓದುವ, ಬರೆಯಲು ಬಲ್ಲ ಮಕ್ಕಳು ಎಂಬ ಸಮಾಧಾನದೊಂದಿಗೇ.

೩. ಮಕ್ಕಳಲ್ಲಿ ತಮ್ಮ ನೆಲದ ಭಾಷೆ, ಅದರ ಸತ್ವ ಕಲೆ ಸಂಸ್ಕೃತಿ ಸಾಹಿತ್ಯ ರಂಪರೆ ಮತ್ತು ಜ್ಞಾನವನ್ನೇ ಕಂದಿಸುವ ಹಕ್ಕು ಎಂದೆಂದಿಗೂ ನಿಮಗಿಲ್ಲ ಎಂಬುದನ್ನು ಹೆತ್ತವರಿಗೆ ಮನಗಾಣಿಸಬೇಕು. ಕನ್ನಡಮೀಡಿಯಂನಲ್ಲಿ ಕಲಿತು ಬಂದ ಮಕ್ಕಳಿಗೆ ಸರಕಾರವು ಉದ್ಯೋಗಾವಕಾಶದಲ್ಲಿ ಯೋಗ್ಯತೆಗನುಸಾರ ಪ್ರಾಶಸ್ತ್ಯ ನೀಡಬೇಕು.

**-ವೈದೇಹಿ**, ಹಿರಿಯ ಲೇಖಕಿ, ಮಣಿಪಾಲ

## ನುಡಿಯಿಲ್ಲದೇ ನಾಡಿಲ್ಲವಾದ್ದರಿಂದ...



೧. ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣ ಭದ್ರ ಬುನಾದಿ. ಭಾಷಾವಾರು ರಾಜ್ಯಗಳ ರಚನೆಯ ಉದ್ದೇಶ ಆ ಪ್ರದೇಶದ ಜನರ ಸಂಸ್ಕೃತಿಯ ಏಳಿಗೆ ಜೊತೆಗೆ ಎಲ್ಲಾ ವ್ಯವಹಾರ ಸಂವಹನಗಳು ಆ ಪ್ರದೇಶದ ಭಾಷೆಯಲ್ಲಿಯೇ ನಡೆಯಬೇಕೆಂಬುದಾಗಿದೆ. ಮಗುವಿನ ಭಾಷೆಯಲ್ಲಿಯೆ ಶಾಲಾ ಶಿಕ್ಷಣ ಇರಬೇಕೆಂಬುದು ವಿಶ್ವದ ಮನಃಶಾಸ್ತ್ರಜ್ಞರ, ಶಿಕ್ಷಣ ತಜ್ಞರ ಖಚಿತ ಅಭಿಪ್ರಾಯವಾಗಿದೆ. 'ಸಹಜವಾಗಿ' ಯಾವ ಭಾಷೆಯನ್ನು ಬಳಸುತ್ತೇವೆಯೊ ಆ ಭಾಷೆ ಶಿಕ್ಷಣ ಮಾಧ್ಯಮವಾಗಬೇಕು. 'ಎಚ್ಚರಿಕೆ'ಯಿಂದ ಬಳಸುವ ಭಾಷೆ ಸಂಪರ್ಕ ಭಾಷೆಯಾಗಿರಬೇಕು. ಕರ್ನಾಟಕದಲ್ಲಿ ಕನ್ನಡ ತಲೆಬಾಗಿಲು, ಅನ್ಯಭಾಷೆಗಳು ಕಿಟಕಿಗಳಿದ್ದಂತೆ. ಹಾಗಾಗಿ ಶಿಕ್ಷಣ ಮಾಧ್ಯಮ ಕನ್ನಡವೇ ಆಗಿರಬೇಕು.

೨. ನಮ್ಮ ಒಬ್ಬಳೇ ಮಗಳು ಕನ್ನಡ ಮಾಧ್ಯಮದಲ್ಲಿ ಓದಿ ವೈದ್ಯೆಯಾಗಿದ್ದಾಳೆ. ಆಕೆಯ ಇಬ್ಬರು ಮಕ್ಕಳನ್ನು ಕನ್ನಡದಲ್ಲಿ ಓದಿಸಲು ಸರಿಯಾದ ಶಾಲೆಗಳಿಲ್ಲ ಎಂದು ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸುತ್ತಿದ್ದು, ಮನೆಯಲ್ಲಿ ಕನ್ನಡ ಬೋಧಿಸಲಾಗುತ್ತಿದೆ.

೩. ಸಮಾನ ಶಿಕ್ಷಣ ನೀತಿಯನ್ನು ಜಾರಿಗೆ ತಂದು, ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸಿ ಅಲ್ಲಿ ಜನಪ್ರತಿನಿಧಿಗಳ, ಉನ್ನತ ಶ್ರೇಣಿಯ ಸರ್ಕಾರಿ ಅಧಿಕಾರಿಗಳ ಮಕ್ಕಳೂ ಸೇರಿ ಎಲ್ಲರೂ ಕಡ್ಡಾಯವಾಗಿ ಕಲಿಯುವಂತಾದರೆ ಮುಕ್ಕಾಲು ಪಾಲು ಸಮಸ್ಯೆ ಬಗೆಹರಿದಂತೆಯೆ. ಕೇಂದ್ರ ಸಾಹಿತ್ಯ ಅಕಾಡೆಮಿ ನೇತೃತ್ವದಲ್ಲಿ (ಕಂಬಾರರು ಅಧ್ಯಕ್ಷರಾಗಿರುವ ಕಾರಣ) ಎಲ್ಲ ದೇಶಿಭಾಷೆಗಳ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಸೇರಿ, ಮನಶಾಸ್ತ್ರಜ್ಞರು, ಶಿಕ್ಷಣವೇತ್ತರು ಕೇಂದ್ರ ಸರ್ಕಾರಕ್ಕೆ ಈ ವಿಷಯವನ್ನು ಮನದಟ್ಟು ಮಾಡಿಕೊಡಬೇಕು. ಬೇಡಿಕೆ ಈಡೇರುವವರೆಗೆ ಪ್ರಶಸ್ತಿ - ಪುರಸ್ಕಾರಗಳನ್ನೊಳಗೊಂಡಂತೆ ಎಲ್ಲ ಭಾಷಾ ವಿಷಯದ ಸಮ್ಮೇಳನ-ಸಂಭ್ರಮ-ಉತ್ಸವಗಳನ್ನು ದೂರವಿಡಬೇಕು. ನುಡಿಯಿಲ್ಲದೇ ನಾಡಿಲ್ಲ ಎಂಬುದು ಸರ್ವವಿದಿತವಾಗಿರುವಾಗ ಈ ಉತ್ಸವಗಳು, ಸಂಭ್ರಮಗಳು ಸೂತಕವಿದ್ದಂತೆ.

**-ಸಿ. ಚೆನ್ನಬಸವಣ್ಣ**, ಖ್ಯಾತ ಪುಸ್ತಕ ಪ್ರಕಾಶಕರು, ಬಳ್ಳಾರಿ

## ಇಂಗ್ಲಿಷ್ ಶಿಕ್ಷಣವೆಂಬ ಹೆಸರಿನ ಕಣ್ಕಟ್ಟು ವಿದ್ಯೆ



೧. ಪ್ರಾಥಮಿಕ ಶಾಲೆಯೆಂಬುದು ಮಕ್ಕಳು ಮೊದಲ ಬಾರಿಗೆ ಕುಟುಂಬದ ಹೊರಗಿನ ಪರಿಸರ ಸಮಾಜಗಳಿಗೆ ತೆರೆದುಕೊಳ್ಳುವ ತಾಣ; ಅದು ಅವರ ಸಾವಯವ ಬೆಳವಣಿಗೆಗೆ ಕಾರಣವಾಗಬೇಕಿದ್ದರೆ ಮನೆಮಾತಿನಲ್ಲೇ ಅದಾಗುವುದು ತುಂಬ ಅಗತ್ಯ. ಅಲ್ಲದೆ, ಶಿಕ್ಷಣವು ವಿದ್ಯಾರ್ಥಿಗಳ ಮನಸ್ಸಿಗೆ ಶಿಕ್ಷೆಯೋ ಎಂಬಂತಾಗಿರುವ ಇವತ್ತಿನ ಪಿಡುಗಿಗೆ ದೇಶಭಾಷೆಗಳಲ್ಲಿ ನಡೆಸುವ ಶಿಕ್ಷಣ ಮದ್ದಾಗಬಲ್ಲುದು ಎಂದು ನನ್ನ ತಿಳಿವು.

೨. ೨೦೧೮ ಜೂನ್‌ನಲ್ಲಿ ಶಾಲೆ ಆರಂಭಿಸಿದ ನನ್ನ ಮೊಮ್ಮಗನನ್ನು ನಮ್ಮ ಕುಟುಂಬದ ಸರ್ವಾನುಮತದಂತೆ ಸರ್ಕಾರಿ ಪ್ರಾಥಮಿಕ ಶಾಲೆಗೇ ಸೇರಿಸಿದೆವು. ನಮಗೆ ಕನ್ನಡ ಭಾಷೆಯ ಮೇಲೆ ಪ್ರೀತಿಯಿರುವುದು ಈ ನಿರ್ಧಾರಕ್ಕೆ ಕಾರಣವಾಗಲಿಲ್ಲ. ಬದಲು, ಮೊದಲನೆಯದಾಗಿ, ಖಾಸಗಿ/ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ನೀಡಲಾಗುವ ಶಿಕ್ಷಣವೆಂಬ ಹೆಸರಿನ ಕಣ್ಕಟ್ಟು ವಿದ್ಯೆಯ ಅನಗತ್ಯ ಭಾರ ಅವನ ಮೇಲೆ ಬೀಳದಿರಲಿ, ಅಲ್ಲಿಯ ಪೈಪೋಟಿ-ಮೇಲುಕೀಳಾಟಗಳು ಈ ಎಳೆವಯಸ್ಸಿನಲ್ಲೇ ಅವನನ್ನು ತಾಗದಿರಲಿ ಎಂಬ ಆಶಯ; ಹಾಗೂ, ಎರಡನೆಯದಾಗಿ, ನಮ್ಮ ಕುಟುಂಬದಾಚೆಗಿನ ಬೇರೆ ಜಾತಿ-ವರ್ಗ-ಲಿಂಗಗಳ ಮಕ್ಕಳೊಡನೆ ಒಡನಾಡಿದರೆ

ಮಾತ್ರ ಆತ ಸಮಾಜದಲ್ಲಿ ಮುಂದೆ ಯೋಗ್ಯವಾಗಿ ಬದುಕಿಯಾನು ಎಂಬ ನಂಬಿಕೆ – ಇವೆರಡು ಈ ನಿರ್ಧಾರಕ್ಕೆ ಪ್ರೇರಕವಾಯಿತು.

೩. ಇವತ್ತು ನಾವು ಕನ್ನಡ ಮಾಧ್ಯಮಕ್ಕಾಗಿ ಹೋರಾಡುವುದಕ್ಕಿಂತ ಇನ್ನೂ ಮುಖ್ಯವಾಗಿ ಶಿಕ್ಷಣವೆಂಬ ಪ್ರಕ್ರಿಯೆಯು ಮಕ್ಕಳಿಗೆ ಆಕರ್ಷಕವೂ ಉಪಯುಕ್ತವೂ ಆಗುವಂತೆ (ಕಡೆಪಕ್ಷ ಮಾರಕವಂತೂ ಆಗದಂತೆ) ಮಾಡುವತ್ತ ಯತ್ನಿಸಬೇಕು. ಆದಕಾರಣ, ಕನ್ನಡ ಮಾಧ್ಯಮಪರ ಒತ್ತಾಯಕ್ಕೆ ದನಿಗೂಡಿಸುತ್ತಲೇ ಅದೇ ನಮ್ಮ ಕಾಲದ ಪ್ರಾಥಮಿಕ ಹೋರಾಟವಲ್ಲ ಎಂದೂ ನಾನು ಭಾವಿಸಿದ್ದೇನೆ.

**–ಕೆ.ವಿ. ಅಕ್ಷರ,** ಹಿರಿಯ ರಂಗಕರ್ಮಿ, ಹೆಗ್ಗೋಡು

## ಕನ್ನಡ ಮಾಧ್ಯಮದಲ್ಲಿ ಆಗಿದ್ದರೆ ಚನ್ನಾಗಿ ಇರುತ್ತಿತ್ತು...



೧. ಮಕ್ಕಳ ಗ್ರಹಿಕೆ ಮತ್ತು ಕಲಿಕೆಯಲ್ಲಿ ಚುರುಕುತನ ಕಾಣಲು ಮಾತೃಭಾಷೆ ಅಥವಾ ಪರಿಸರದ ಭಾಷೆಯಲ್ಲಿ ಮಾತ್ರ ಸಾಧ್ಯ ಎಂಬುದನ್ನು ಅರಿಯಲು ದೊಡ್ಡ ಪಾಂಡಿತ್ಯವೇನು ಅಗತ್ಯ ಇಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ನೂರಾರು ತರಗತಿಗಳ ಮಧ್ಯ ನಿಂತು ಗಮನಿಸಿದ ಅನುಭವದ ಹಿನ್ನೆಲೆಯಲಿ ಇದನ್ನು ನಾನು ಮನಗಂಡಿದ್ದೇನೆ. ಯಾವುದೇ ಮಾಧ್ಯಮವಾದರೂ ಹೊಂದಿಕೊಳ್ಳಬಲ್ಲ ಸುಮಾರು ಶೇ. ೧೦ ರಷ್ಟು ಪ್ರತಿಭಾವಂತ ಮಕ್ಕಳನ್ನು ಹೊರತುಪಡಿಸಿದರೆ ಇನ್ನುಳಿದ ಮಕ್ಕಳಿಗೆ ಅನ್ಯ ಭಾಷಾ ಮಾಧ್ಯಮ ಒಂದು ಉರುಳಾಗಿ ಪರಿಣಮಿಸುತ್ತದೆ. ಉರು ಹೊಡೆದು ಕಲಿವ ಕಲಿಕೆ ಬುದ್ಧಿ ಭಾವ ಅರಳಿಸದು.

೨. ನನ್ನ ಇಬ್ಬರು ಮಕ್ಕಳೂ ಇಂಗ್ಲಿಷ್ ಮಾಧ್ಯಮದಲ್ಲೇ ಓದಿದವರು.. ಕಾರಣ, ಆಗ ಬೆಂಗಳೂರಿನಲ್ಲಿ ಮನೆ ಸಮೀಪ ಇದ್ದುದೇ ಆಂಗ್ಲ ಮಾಧ್ಯಮ ಶಾಲೆ. ಹಿರಿಮಗ ಮಿಲ್ಟ್ರಿ ಶಾಲೆಗೆ ಸೇರಿದ್ದರಿಂದ ಕಿರಿಯನ ಕಲಿಕೆ ಕನ್ನಡ ಮಾಧ್ಯಮದಲ್ಲಿ ಆಗಿದ್ದರೆ ಚೆನ್ನಾಗಿ ಇರುತ್ತಿತ್ತೆಂದು ನಾನು ಅಂದುಕೊಂಡದ್ದುಂಟು. ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುವವರೆಗೆ ಈ ಕುರಿತು ನನ್ನ ತಿಳಿವಳಿಕೆಯೂ ಅಸ್ಪಷ್ಟವಾಗಿತ್ತು.

೩. ಈಗ ಸರಕಾರ ನಾಡು ನುಡಿ ಉಳಿವು ಕುರಿತು ಗಂಭೀರ ಚಿಂತನೆ ಮಾಡಬೇಕು. ರಾಜ್ಯ ಸರಕಾರದ ಎಲ್ಲ ಹುದ್ದೆಗಳ ಭರ್ತಿಗೆ ಹತ್ತನೆಯ ತರಗತಿ ವರೆಗಿನ ಕನ್ನಡ ಮಾಧ್ಯಮ ಓದನ್ನು ಕಡ್ಡಾಗೊಳಿಸಬೇಕು. ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಬೋಧಿಸುವ ಕ್ರಮವಾಗಬೇಕು. ಮಲಗಿರುವ ಸರಕಾರಿ ಶಾಲೆಗಳನ್ನು ಎಚ್ಚರಿಸಿ ಗುಣಮಟ್ಟದ ಶಿಕ್ಷಣ ಖಾತ್ರಿ ಪಡಿಸಬೇಕು.

**–ವೆಂಕಟೇಶ ಮಾಚಕನೂರ,** ನಿವೃತ್ತ ಶಿಕ್ಷಣ ಆಯುಕ್ತರು, ಧಾರವಾಡ

## ಕನ್ನಡ ಮಾಧ್ಯಮದ ಮಕ್ಕಳ ಸಾಧನೆ ಇದು!



೧. ಕನ್ನಡ ನಮ್ಮ ಭಾಷೆ. ಅಡಿಗೆ–ಊಟಗಳಿಂದ ಮೊದಲು ಮಾಡಿ ಸಂಗೀತ–ಸಾಹಿತ್ಯಗಳವರೆಗೂ ಅದು ನಮ್ಮನ್ನು ಸಲಹುತ್ತ ಬಂದಿದೆ. ಪರಿಸರದ ಸಹಜ ಭಾಷೆಯ ಓದು ಮಕ್ಕಳ ಆತ್ಮಶಕ್ತಿಯನ್ನು ಹೆಚ್ಚಿಸುವುದರಿಂದ ಕಲಿಯುವಿಕೆ ಒಂದು ಒತ್ತಡ ಎನಿಸುವುದಿಲ್ಲ. ಬೇರೆ ಭಾಷೆಯಿಂದ ಸ್ವೀಕರಿಸಿ ತಲೆಯಲ್ಲಿ ಮಾತೃಭಾಷೆಗೆ ಅನುವಾದಿಸಿಕೊಂಡು ಕಲಿಯುವುದು ಹಿಂಸೆ ಎನಿಸುತ್ತದೆ. ಕನ್ನಡ ಶಾಲೆಗಳಲ್ಲಿ ಪರಿಸರದ ಎಲ್ಲ ರೀತಿಯ, ಎಲ್ಲಾ ಹಿನ್ನೆಲೆಯ ಜನರ ಜೊತೆಗೆ ಬೆರೆತು ಕಲಿಯುವುದರಿಂದ ಬದುಕಿಗೆ ಬೇಕಾಗುವ ಸಮಾನತೆಯ ಪಾಠ ಕೂಡ ಜೊತೆಯಲ್ಲಿಯೇ ದೊರಕುತ್ತದೆ.

೨) ನನಗೆ ಇಬ್ಬರು ಮಕ್ಕಳು. ದೊಡ್ಡವ ಎಂಟನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತ. ಈಗ ಆತ ಎಂ.ಟೆಕ್, ಪಿಎಚ್‌ಡಿ ಮಾಡಿ ಒಳ್ಳೆಯ ಉದ್ಯೋಗದಲ್ಲಿದ್ದಾನೆ. ಎರಡನೆಯವ ಹತ್ತನೆ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿ ಈಗ ಟೆಕ್ಸಾಸ್ ವಿವಿದಲ್ಲಿ ಎಮ್‌ಎಸ್ ಮಾಡಿ ನೌಕರಿಯ ಜೊತೆಗೆ ಜಾರ್ಜಿಯಾ ಟೆಕ್ ವಿವಿ ದಲ್ಲಿ ಪಿ.ಎಚ್.ಡಿ ಮಾಡುತ್ತಿದ್ದಾನೆ.

ಹೇಳಬೇಕಾದ್ದು ಇಷ್ಟೇ: ಕನ್ನಡ ಮಾಧ್ಯಮದಲ್ಲಿ ಓದಿದ ಇಬ್ಬರೂ ಕಲಿಕೆಯಲ್ಲಿ, ನೌಕರಿ ಪಡೆಯುವಲ್ಲಿ ಹಿಂದೆ ಬಿದ್ದಿಲ್ಲ. ಆದರೆ ಮೊಮ್ಮಕ್ಕಳ ವಿಷಯದಲ್ಲಿ ನನ್ನ ಪ್ರಯತ್ನ ಫಲ ನೀಡದ ಬಗ್ಗೆ ನನಗೆ ವಿಷಾದವಿದೆ ಎಂದು ಹೇಳಲೇಬೇಕು.

೩) ಸಂವಿಧಾನದ ತಿದ್ದುಪಡಿಯೊಂದೇ ಉಳಿದಿರುವ ಮಾರ್ಗ. ಆದರೆ ಇಡೀ ದೇಶ ಸುತ್ತಿ ಆಯಾ ಪ್ರದೇಶಗಳ ರಾಜಕೀಯ ಮುಖಂಡರ ಒಟ್ಟಭಿಪ್ರಾಯ ಸಂಗ್ರಹಿಸಿ ಅವರನ್ನು ಕೂಡ ಸೇರಿಸಿ ಕೇಂದ್ರ ಸರಕಾರದ ಮೇಲೆ ಒತ್ತಡ ತಂದು ಪ್ರಾದೇಶಿಕ ಭಾಷೆಗಳನ್ನು ಮಾಧ್ಯಮವಾಗಿಸುವಂತೆ ಸಂವಿಧಾನದ ತಿದ್ದುಪಡಿ ಮಾಡಲು ಮುಂದಾಗುವ ರಾಜಕಾರಣಿಗಳು ಇಂದು ಇಲ್ಲ. ಪಾಲಕರ ಮನ ಪರಿವರ್ತಿಸುವುದು ಕೂಡ ಒಂದು ಮಾರ್ಗ

**–ವಿಜಯೇಂದ್ರ ಪಾಟೀಲ,** ಹಿರಿಯ ವಿನೋದ ಸಾಹಿತಿ, ಗೋಕಾಕ

## ದೆಹಲಿಯ ಆಪ್ ಸರ್ಕಾರದ ಕೆಲಸ ಮಾದರಿಯಾಗಲಿ



೧. ತಮ್ಮ ಮನೆಮಾತಿನೊಂದಿಗೆ ಶಿಕ್ಷಣವನ್ನು ಪಡೆಯುವ ಯಾವುದೇ ವ್ಯಕ್ತಿ ಹೆಚ್ಚು ಸೃಜನಶೀಲವಾಗಿ ಇರುವುದಕ್ಕೆ ಸಾಧ್ಯ. ತನ್ನದಲ್ಲದ ಅನ್ಯ ಭಾಷೆಯೊಂದು ಮಗುವಿನ ಸಹಜ ಪ್ರತಿಭೆಯನ್ನು ನಾಶ ಮಾಡುತ್ತದೆ. ಯಾಕೆಂದರೆ ಬಹುತೇಕ ನಾವೆಲ್ಲರೂ ಇಂದು ಇಂಗ್ಲಿಷ್‌ನಲ್ಲಿ ಮಾತಾಡುವಾಗ ಕನ್ನಡದಲ್ಲಿ ಯೋಚಿಸಿದ್ದನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ ಮಾತಾಡುತ್ತೇವೆ. ಹಾಗಾಗಿ ಕನ್ನಡದಲ್ಲಿ ನಿರರ್ಗಳವಾಗಿ ಮಾತಾಡುವವರೆಲ್ಲರೂ ಇಂಗ್ಲಿಷ್‌ನಲ್ಲಿ ಮಾತಾಡುವಾಗ ತಡವರಿಸಿಯೇ ಮಾತಾಡುತ್ತಾರೆ. ನಾನು ಯಾವ ಭಾಷೆಯಲ್ಲಿ ಯೋಚಿಸಬಲ್ಲೆನೋ ಅದೇ ಭಾಷೆಯಲ್ಲಿ ಶಿಕ್ಷಣ ಕೊಡುವುದರಿಂದ ಬಿರುಕುಗಳಿಲ್ಲದ ಶಿಕ್ಷಣ ಮತ್ತು ಜ್ಞಾನದ ಅನ್ವೇಷಣೆ ಸಾಧ್ಯವಾಗಬಹುದು.

೨. ನಾನು ದೇಶದ ಯಾವ ಭಾಗದ ವಿಶ್ವವಿದ್ಯಾನಿಲಯದಲ್ಲಾದರೂ ಕೆಲಸ ಮಾಡುವ ಸಾಧ್ಯತೆ ಇದ್ದಿರುವುದರಿಂದ ನನ್ನ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಕೇಂದ್ರೀಯ ವಿದ್ಯಾಲಯದಲ್ಲಿ ಓದಿಸುತ್ತಿದ್ದೇನೆ.

೩. ನನ್ನ ಪ್ರಕಾರ ದೆಹಲಿಯ ಆಪ್ ಸರಕಾರ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ನಡೆಸಿದ ಕ್ರಾಂತಿಕಾರಿ ಚಟುವಟಿಕೆಗಳು ಕರ್ನಾಟಕ ಸರಕಾರಕ್ಕೆ ಆದರ್ಶವಾಗಬೇಕಿದೆ. ಶಿಶುವಿಹಾರಗಳಿಂದ ಹಿಡಿದು ಪದವಿಪೂರ್ವ ಕಾಲೇಜುಗಳೆಲ್ಲವನ್ನೂ ಒಂದು ಛತ್ರಿಯ ಕೆಳಗೆ ತಂದು ಪ್ರತಿ ಗ್ರಾಮದಲ್ಲಿ ಒಂದು ಸಮಗ್ರ ಶಾಲಾ ಸಮುಚ್ಚಯವನ್ನು ರಚಿಸುವುದು. ಕನ್ನಡ ಅಲ್ಲಿಯ ಶಿಕ್ಷಣ ಮಾಧ್ಯಮವಾಗಿದ್ದು ಇಂಗ್ಲಿಷ್–ಹಿಂದಿ ಭಾಷೆಗಳನ್ನು ಒಂದನೇ ತರಗತಿಯಿಂದಲೇ ಕಲಿಸಬಹುದು. ರಾಜ್ಯದಲ್ಲಿ ಕನಿಷ್ಠ ಪಕ್ಷ ಒಂದಾದರೂ ಇಂಜಿನಿಯರಿಂಗ್, ಮೆಡಿಕಲ್ ಸೇರಿದಂತೆ ಎಲ್ಲ ವಿಷಯಗಳಲ್ಲೂ ಕನ್ನಡದಲ್ಲೇ ಉನ್ನತ ಶಿಕ್ಷಣವನ್ನು ಕೊಡುವಂತಹ ಸಂಸ್ಥೆಗಳನ್ನು ಸ್ಥಾಪಿಸುವುದು. ಈಗಾಗಲೇ ಕನ್ನಡ ಮಾಧ್ಯಮದ ಶಾಲಾಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿರುವವರಿಗೆ ವಿಶೇಷ ಪ್ರೋತ್ಸಾಹ ನೀಡಬೇಕು.

**–ನಿತ್ಯಾನಂದ ಬಿ. ಶೆಟ್ಟಿ,** ಕನ್ನಡ ಪ್ರಾಧ್ಯಾಪಕರು, ತುಮಕೂರು

## ಆ ಶಕ್ತಿ ಬಂದುದು ಕನ್ನಡ ಮಾಧ್ಯಮದಿಂದ



೧. ನಾನು ಹೊರ ರಾಜ್ಯವೊಂದರ ಕನ್ನಡ ಮಾಧ್ಯಮ ಸರಕಾರಿ ಶಾಲೆಯಲ್ಲಿ ಓದಿದ್ದು. ನನ್ನ ಮಾತೃ ಭಾಷೆ ಕನ್ನಡವಲ್ಲ. ನನ್ನ ಮಾತೃಭಾಷೆಯಲ್ಲಿ ಶಿಕ್ಷಣ ಮಾಧ್ಯಮ ಇಲ್ಲ. ಕನ್ನಡ ನನ್ನ ಮಾತೃಭಾಷೆಗೆ ಹತ್ತಿರವಾದ ಭಾಷೆ. ಇಂದು ನಾನು ಕೆಲಸ ಮಾಡುತ್ತಿರುವ ಸಂಸ್ಥೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಅಥವಾ ಅವರವರ ಮಾತೃಭಾಷಾ/ರಾಜ್ಯಭಾಷಾ ಮಾಧ್ಯಮದಲ್ಲಿ ಓದಿದ ಬೆರಳೆಣಿಕೆಯ ಮಂದಿಯಲ್ಲಿ ನಾನೂ ಒಬ್ಬ. ಉಳಿದ ಸಹೋದ್ಯೋಗಿಗಳೆಲ್ಲಾ ಇಂಗ್ಲಿಷ್ ಮಾಧ್ಯಮದಲ್ಲಿ ಓದಿ ಉನ್ನತ ಮಟ್ಟದ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಓದಿ ಬಂದವರು. ನಾನು ಅವರಷ್ಟು ಉನ್ನತ ಮಟ್ಟದ ಸಂಸ್ಥೆಗಳಲ್ಲಿ ಓದಿಲ್ಲವಾದರೂ ಅವರೊಡನೆ ಸರಿಸಮಾನವಾಗಿ ವ್ಯವಹರಿಸುವುದಕ್ಕೆ ಮತ್ತು ಹೊಂದಿಕೊಳ್ಳುವುದಕ್ಕೆ ಬೇಕಾದ ಶಕ್ತಿ ಬಂದದ್ದು ನಾನು ಕನ್ನಡ ಮಾಧ್ಯಮದಲ್ಲಿ ಓದಿದ್ದರಿಂದ ಎಂದು ನಾ ನಂಬಿದ್ದೇನೆ.

೨. ಹಾಗಾಗಿ ಮಗನನ್ನು ಕನ್ನಡ ಮಾಧ್ಯಮದಲ್ಲೇ ಓದಿಸಬೇಕೆಂದಿತ್ತು. ಆದರೆ ಮಗನ ವಿದ್ಯಾಭ್ಯಾಸದ ಬಗ್ಗೆ ಕೌಟುಂಬಿಕವಾಗಿ ಸಾಮೂಹಿಕ ನಿರ್ಧಾರ ಕೈಗೊಳ್ಳುವಾಗ ನನ್ನ ಕನ್ನಡ ಮಾಧ್ಯಮದಲ್ಲಿ ಆತನನ್ನು ಓದಿಸಬೇಕೆಂಬ ಬೇಡಿಕೆಗೆ ಯಾವ ಮನ್ನಣೆಯೂ ದೊರಕಲಿಲ್ಲ. ಪ್ರತಿವಾದ ಮಂಡಿಸಲು ಯಾವುದೇ ಕನ್ನಡ ಮಾಧ್ಯಮ ಶಾಲೆಯನ್ನು ಹೆಸರಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ.

೩. ಯಾವ ಖಾಸಗಿ ಇಂಗ್ಲಿಷ್ ಮಧ್ಯಮ ಶಾಲೆಗೂ ಕಡಿಮೆ ಇಲ್ಲ ಎಂಬಂತಹ ಸರಕಾರೀ ಕನ್ನಡ ಮಾಧ್ಯಮ ಶಾಲೆಯೊಂದು ಬೆಂಗಳೂರಿನಲ್ಲಿ ಸ್ಥಾಪನೆಯಾಗಿ ಅಲ್ಲಿಗೆ ಮೊದಲು ಶಿಕ್ಷಣ ಸಚಿವರಾದಿಯಾಗಿ ಅಧಿಕಾರದಲ್ಲಿರುವ ಎಲ್ಲರೂ ತಮ್ಮ ತಮ್ಮ ಮಕ್ಕಳನ್ನು ಸೇರಿಸಿ ಎಲ್ಲರಲ್ಲೂ ಭರವಸೆ ಹುಟ್ಟುವಂತೆ ಮಾಡಿದರೆ ಅದು ಕನ್ನಡ ಮಾಧ್ಯಮ ಉಳಿಸುವಲ್ಲಿ ಕೊನೆಯ ಪ್ರಯತ್ನ ಆದೀತು.

**–ಎ. ನಾರಾಯಣ,** ಪ್ರಾಧ್ಯಾಪಕರು, ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ

## ಕೇವಲ ಮಾಧ್ಯಮದ ಭಾಷೆ ಮುಖ್ಯವಾಗುವುದಿಲ್ಲ



೧. ನಮ್ಮ ಮಕ್ಕಳ ಶಿಕ್ಷಣ ಮಾಧ್ಯಮ ಕನ್ನಡದಲ್ಲೇ ಇರಬೇಕು ಎಂಬುದು ಆಶಯ ಮತ್ತು ಆದರ್ಶ. ತಾತ್ವಿಕವಾಗಿ ಅದುವೇ ಸರಿ. ಮಾಧ್ಯಮದ ಪ್ರಶ್ನೆಯಿರುವುದು ಸಾಮಾಜಿಕ ಸಾಂಸ್ಕೃತಿಕ ವಾತಾವರಣವನ್ನು ಸೃಷ್ಟಿಮಾಡುವ ವಿನ್ಯಾಸದಲ್ಲಿ. ಕನ್ನಡ ನುಡಿ ಮೂಲಕ ಕಲಿಸುವ ಯಾವುದೇ ತರಗತಿಗಳಿಲ್ಲಿಯೂ ನಮ್ಮ ಬಹುಭಾಷಿಕ ಪರಿಸರದ ತಿಳಿವು ಮತ್ತು ಸಾಂಸ್ಕೃತಿಕ ವಿವೇಕಕ್ಕೆ ಹೊರತಾಗಿರುವ ಸಂಗತಿಗಳೇ ಮುಖ್ಯವಾಗಿರುತ್ತವೆ. ಹಾಗಾಗಿ ಇಲ್ಲಿ ಕೇವಲ ಭಾಷೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು, ಶಿಕ್ಷಣ ಮಾಧ್ಯಮದ ತಾತ್ವಿಕತೆ ಹಾಗೂ ಹೆಚ್ಚುಗಾರಿಕೆಯನ್ನು ತೀರ್ಮಾನಿಸುವುದು ಸೂಕ್ತವಾದ ನಿಲುವಲ್ಲ. ಬದುಕುವ ಪರಿಸರದ ಇಡಿತನದ ತಿಳಿವಳಿಕೆ ಮಗುವಿನ ಶೈಕ್ಷಣಿಕ ವಾತಾವರಣದಲ್ಲಿ ಸಿಕ್ಕಾಗ ಮಾತ್ರ ಶಿಕ್ಷಣ ಮಾಧ್ಯಮದ ಪ್ರಶ್ನೆಗೆ ಮಹತ್ವ ಬರುತ್ತದೆ ಹಾಗೂ ಗುಣಾತ್ಮಕ ಶಿಕ್ಷಣ ದೊರೆಯುತ್ತದೆ.

೨. ನನ್ನ ಮಗಳ ಪ್ರಾಥಮಿಕ ಶಿಕ್ಷಣ ಪಠ್ಯಗಳು ಮಾತ್ರ ಇಂಗ್ಲಿಶಿನಲ್ಲಿದ್ದು ಕಲಿಕೆಯ ಮಾಧ್ಯಮ ಕನ್ನಡವೇ ಆಗಿದ್ದ ಶಾಲೆಯಲ್ಲಾಯಿತು. ಇದು ಕೂಡ ಮಾಹಿತಿ ಪ್ರಧಾನವಾದ ಕಲಿಕೆಯೇ ಆಗಿದ್ದು ಇಲ್ಲಿಯೂ ಸಾಂಸ್ಕೃತಿಕ ವಿವೇಕವನ್ನು ಪಡೆಯುವ ಅವಕಾಶವಿರಲಿಲ್ಲ.

೩. ಕನ್ನಡ ನುಡಿಯನ್ನು ಬಳಸುವುದರ ಮೂಲಕ ಕನ್ನಡ ಮಾಧ್ಯಮವನ್ನು ನೆಲೆಗೊಳಿಸುವುದು ಅಸಾಧ್ಯ. ಕನ್ನಡ ಸಮುದಾಯಗಳ ಲೋಕಗ್ರಹಿಕೆ ಹಾಗೂ ಬಹುಭಾಷಿಕ-ಸಾಂಸ್ಕೃತಿಕ ವಿವೇಕ ನಮ್ಮ ಶಿಕ್ಷಣದ ಗುರಿಯಾಗಬೇಕು.

**–ಮಲ್ಲಿಕಾರ್ಜುನ ಮೇಟಿ**, ಭಾಷಾಶಾಸ್ತ್ರ ಪ್ರಾಧ್ಯಾಪಕರು, ಶಿವಮೊಗ್ಗ

### ಮೊಲೆ ಹಾಲು ನಂಜಾಗಿ ತಾಯ್ನುಡಿಗೆ ಸೋಂಕಾಗಿ...

ಮೊಲೆಹಾಲು ನಂಜಾಗಬಹುದೆ? ನಂಜಾಗಲಾರದು. ಆದರೆ ಅದನ್ನು ಮಾಡಬಹುದು. ರಸಾಯನಿಕಗಳ ದುರ್ಬಳಕೆ ಈಗಾಗಲೇ ಮಾಡಿರುವಂತೆ. ಹಾಗೆಯೇ ತಾಯ್ನುಡಿಯನ್ನೂ ನಂಜಾಗಿಸುವ ಸಾಮಾಜಿಕ ರಸಾಯನಿಕಗಳ ಪ್ರಯೋಗವೂ ಈಗ ವ್ಯಾಪಕವಾಗಿ ನಡೆದಿದೆ. ಅದಕ್ಕೊಂದು ಸಣ್ಣ ಉದಾಹರಣೆ ಇಲ್ಲಿದೆ. ಸಂಬಂಧಪಟ್ಟವರಿಗೆ ಮುಜುಗರವಾಗಬಾರದೆಂದು ಇಲ್ಲಿನ ಹೆಸರುಗಳಲ್ಲಿ ಸ್ವಲ್ಪ ಬದಲಾವಣೆ ಮಾಡಲಾಗಿದೆಯಷ್ಟೆ:

ಚಂದ್ರಶೇಖರಮೂರ್ತಿ ಮತ್ತು ದ್ರಾಕ್ಷಾಯಿಣಿ ಎಂಬ ನನ್ನ ಪರಿಚಿತ ದಂಪತಿಗಳ ಕುಟುಂಬವೊಂದು ಬೆಂಗಳೂರಿನ ಬಡಾವಣೆಯೊಂದರಲ್ಲಿ ಕನ್ನಡ ಅಕ್ಷರಗಳಲ್ಲಿ ಬರೆಯಲೂ, ಉಚ್ಚರಿಸಲೂ ಕಷ್ಟವಾಗುವಂತಹ ಹೆಸರಿನ ವಸತಿ ಸಮುಚ್ಚಯವೊಂದರಲ್ಲಿ ವಾಸಿಸುತ್ತಾರೆ. ಅವರಿಬ್ಬರೂ ಶಾಲಾ ಶಿಕ್ಷಣವನ್ನು ಪೂರ್ತಿಯಾಗಿ ಕನ್ನಡದಲ್ಲೇ ಮುಗಿಸಿ ಎಂಜಿನಿಯರ್ ಮತ್ತು ಶಾಲಾ ಶಿಕ್ಷಕಿಯಾದವರು. ಅವರ ಮಗ-ಸೊಸೆ: ಫಣೀಂದ್ರನಾಥ ಮತ್ತು ಜ್ಯೋತಿಶ್ರೀ. ಅವರು ಇಂಗ್ಲಿಷ್ ಮಾಧ್ಯಮದಲ್ಲಿ ಓದಿದರೂ ಎರಡನೆಯ ಭಾಷೆಯಾಗಿ ಕನ್ನಡವನ್ನು ಕಲಿತವರು. ಇಬ್ಬರೂ ಬೆಂಗಳೂರಿನ ಎರಡು ವಿದ್ಯಾ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಇವರಿಗೆ ಮೂರು ಜನ ಮಕ್ಕಳು: ಕಾರ್ತಿಕ್ ತೇಜಸ್ವಿ, ಸುಷ್ಮಾ ಪ್ರಿಯದರ್ಶಿನಿ ಮತ್ತು ಹರ್ಷಿತಾ ಅಮೃತವರ್ಷಿಣಿ. ಇವರಲ್ಲಿ ಕಾರ್ತಿಕ್‌ನ ಕನ್ನಡ ಜ್ಞಾನ ಅಷ್ಟಕ್ಕಷ್ಟೆ, ಏಕೆಂದರೆ ಅವನು ಕಲಿತ ಖಾಸಗಿ(ಕನ್ನಡದವರೇ ನಡೆಸುತ್ತಿದ್ದ)ಶಾಲೆಯಲ್ಲಿ ಎರಡನೇ ಭಾಷೆಯಾಗಿಯೂ ಕನ್ನಡ ಕಲಿಕೆಗೆ ಅವಕಾಶವಿರಲಿಲ್ಲ. ಜೊತೆಗೆ ಶಾಲಾ ಆವರಣದಲ್ಲಿ ಕನ್ನಡ ಮಾತಾಡಿದರೆ ದಂಡ ವಿಧಿಸಲಾಗುತ್ತಿತ್ತಂತೆ. ಹಾಗಾಗಿ ಅವನು ಮೊದಲ ಎರಡು ಭಾಷೆಗಳಾಗಿ ಇಂಗ್ಲಿಷ್ ಮತ್ತು ಸಂಸ್ಕೃತ ಕಲಿಯಬೇಕಾಯಿತು. ಇನ್ನು ಇಬ್ಬರು ಆ ಹೆಣ್ಣು ಮಕ್ಕಳನ್ನು ಕೇಳಿದರೆ ಅವರು ಬಹು ವಯ್ಯಾರದಿಂದ ತಮಗೆ ಕನ್ನಡ ಕಂಡರೇ ಭಯ ಎಂದು ಹೇಳುತ್ತಾರೆ! ಏಕೆಂದರೆ ಅದರಲ್ಲಿ ಓದಲು, ಬರೆಯಲು ಕಷ್ಟವಾಗುವ ಘರ್ಜನೆ, ಕೃತಜ್ಞತೆ, ಶೀರ್ಷಾಸನ ಮುಂತಾದ ಭಯಂಕರ ಶಬ್ದಗಳಿವೆಯಂತೆ!

ಮನೆಯಲ್ಲೂ ಇಂಗ್ಲಿಷ್ ಮಾತನಾಡುವ ಈ ಕುಟುಂಬದ ಸದಸ್ಯರ ಹೆಸರುಗಳನ್ನು ಗಮನಿಸಿದರೆ ಇದಕ್ಕಿಂತ ದೊಡ್ಡ ಆತ್ಮದ್ರೋಹ ಇನ್ನೊಂದಿರಲು ಸಾಧ್ಯವಿಲ್ಲ ಎನ್ನಿಸದಿರಲಾರದು. ಆದರೆ ಇಂತಹ ಆತ್ಮದ್ರೋಹಿ ಮಾತುಗಾರಿಕೆಗೆ ಪ್ರೇರಣೆ ನೀಡಿದ ಲಾಬಿಯ ಪೂರ್ವಾಪರಗಳು ಈಗ ಎಲ್ಲರಿಗೂ ಗೊತ್ತಿರುವಂತಹವೇ ಆಗಿವೆ.! ಹೇಗಿದ್ದರೂ ನಮ್ಮ ಸರ್ವೋಚ್ಚ ನ್ಯಾಯಾಲಯದ ಪ್ರಕಾರ ಇದೆಲ್ಲ ಅವರವರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ವಿಷಯ!

ನಾನು ಕುಟುಂಬದ ಹಿರಿಯರಾದ ನನ್ನ ಗೆಳೆಯ ಮೂರ್ತಿಯವರನ್ನು ಇದೆಲ್ಲ ಏನು? ಎಂದು ಕೇಳಿದರೆ ಅವರು 'ಈಗ ನಮ್ಮದೇನೂ ನಡೆಯುವುದಿಲ್ಲ ಸ್ವಾಮಿ!' ಎಂದು ಕೈಯಾಡಿಸುತ್ತಾರೆ! ಇದು ಇಂದಿನ ಕನ್ನಡಿಗರ ಕರ್ಮ ಕಥೆ! **–ಡಿಎಸ್ನೆನ್**

## ನಾಡಭಾಷೆಯಲ್ಲಿನ ಏಕರೂಪದ ಶಿಕ್ಷಣವೇ ಪರಿಹಾರ



೧. ನಮ್ಮ ನಾಡ ಭಾಷೆ ಕನ್ನಡ. ನಮ್ಮ ಮಾತೃಭಾಷೆ ಕನ್ನಡ. ಅದುದರಿಂದ, ನಮ್ಮ ಮಕ್ಕಳಿಗೆ ಶಾಲಾ ಶಿಕ್ಷಣ ಮಾಧ್ಯಮ ಕನ್ನಡದಲ್ಲೇ ಇರಬೇಕು.

೨. ನಮ್ಮ ಮಕ್ಕಳು ಶಾಲಾ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಪಡೆದರು. ಕಾರಣಗಳು: ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕಾಗಿ ಬಂದಾಗ, ನಾನು ಒಂದೆರಡು ಕನ್ನಡ ಮತ್ತು ಇಂಗ್ಲಿಷ್ ಕಾನ್ವೆಂಟ್‌ಗಳನ್ನು ನೋಡಿ ಬಂದೆ. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ಶಾಲೆಗಳ ನಡುವೆ ಕಂಡ ತಾರತಮ್ಯ ಅಗಾಧವಾಗಿತ್ತು. ನಮ್ಮ ಬಾಲ್ಯದಲ್ಲಿ ನಾವು ಕಲಿಯುವಾಗ ಹೀಗಿರಲಿಲ್ಲ. ಜೊತೆಗೆ, 'ನನ್ನ ಪತಿ ಬಾಲ್ಯದಲ್ಲಿ, ಹಳ್ಳಿಯಲ್ಲಿ ಅನುಭವಿಸಿದ ಅಸ್ಪೃಶ್ಯತೆಯ ಅವಮಾನಗಳು ನನ್ನನ್ನು ಬೆಚ್ಚಿಬೀಳಿಸಿದ್ದವು. ಅದನ್ನು ಸ್ವಲ್ಪಮಟ್ಟಿಗಾದರೂ ಅವರು ಶಿಕ್ಷಣ ಮತ್ತು ಉದ್ಯೋಗದಿಂದ ಮೀರಲು ಸಾಧ್ಯವಾಗಿತ್ತು. ಕನ್ನಡ ಮಾಧ್ಯಮದ ಶಾಲೆಗಳ ಸ್ಥಿತಿಯಿಂದಾಗಿ, ಮಕ್ಕಳಿಗೆ ಉನ್ನತ ಶಿಕ್ಷಣ ಸಾಧ್ಯವಾಗದೆ, ಎಲ್ಲಿ ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗುವುದೂ ಎಂಬ ಅತಂಕದಿಂದ ಮತ್ತು ಮಕ್ಕಳಿಗೆ ಮನೆಯಲ್ಲಿ ಸಮರ್ಥವಾಗಿ ಕನ್ನಡ ಕಲಿಸಬಲ್ಲೆನೆಂಬ, ಕನ್ನಡ ಮನಸ್ಸು ರೂಪಿಸಬಲ್ಲೆ ಎಂಬ ಆತ್ಮವಿಶ್ವಾಸದಿಂದ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಿದೆವು

೩. ಇದಕ್ಕೆ ಸಂಬಂಧಿಸಿದ ಕಾನೂನು ತೊಡಕುಗಳು ಏನಿರುವವೊ ನಾನರಿಯೆ. ಒಬ್ಬ ಕನ್ನಡಿಗಳಾಗಿ ನನಗೆ ಅನ್ನಿಸುವುದು, ಕನಿಷ್ಠ ಹತ್ತನೇ ತರಗತಿಯವರೆಗಾದರೂ ಎಲ್ಲಾ ಮಕ್ಕಳಿಗೂ ನಾಡಭಾಷೆಯಲ್ಲಿ ಕಡ್ಡಾಯ, ಏಕರೂಪದ ಶಿಕ್ಷಣ ದೊರಕುವಂತಾಗಬೇಕು. ಉಳ್ಳವರು, ಇಲ್ಲದವರು ಎಲ್ಲರ ಮಕ್ಕಳು ಒಂದೇ ಶಾಲೆಯಲ್ಲಿ ಕಲಿಯುವಂತಿರಬೇಕು. ಇದಕ್ಕೆ ಬೇಕಿರುವುದು ಇಚ್ಛಾಶಕ್ತಿ. ಈ ಇಚ್ಛಾಶಕ್ತಿ, ಸರ್ಕಾರಗಳು, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಜನತೆಯಲ್ಲಿ ಮೂಡಿಸುವಂತಹ ಜನಾಂದೋಲನವನ್ನು ಸಮರ್ಥವಾಗಿ ರೂಪಿಸಬೇಕು.

**–ಮಲ್ಲಿಕಾ ಬಸವರಾಜು**, ಸಾಮಾಜಿಕ ಕಾರ್ಯಕರ್ತರು, ತುಮಕೂರು

### ಇನ್ನೆರಡು ಪತ್ರಗಳು

ಕಳೆದ ಸಂಚಿಕೆಯಲ್ಲಿ ನಾಗೇಶ ಹೆಗಡೆಯವರ 'ವರ್ಷದ ಹುಚ್ಚುಮಳೆ ಮತ್ತು ಗಾಂಧಿ ಮಾರ್ಗ' ಲೇಖನವು ನಮ್ಮ ಆಡಳಿತಗಾರರನ್ನಲ್ಲದೆ ಸಾಮಾನ್ಯ ಜನತೆಯಾದ ನಮ್ಮನ್ನೂ ನಮ್ಮ ಬದುಕಿನ ಮಾರ್ಗದ ಬಗ್ಗೆ ಮರು ಆಲೋಚನೆಗೆ ಹಚ್ಚಲು ಪ್ರೇರೇಪಿಸುವಂತಿತ್ತು. ಇನ್ನು 'ಧರ್ಮವಿಚಾರ ಪುಟ'ದಲ್ಲಿ ಸಿ. ಪ್ರಶಾಂತ್ ಅವರು ಪರಿಚಯಿಸಿದ 'ಯೂಜಿ'ಯವರ ವಿಚಾರಗಳು ನಿಜವಾಗಿಯೂ ನಮ್ಮನ್ನು ನಾವೇ ಒಮ್ಮೆ ಒದರಿಕೊಂಡು ಬದುಕಿನಲ್ಲಿ ಮುಂದಿನ ಹೆಜ್ಜೆ ಇಡುವಂತೆ ಒತ್ತಾಯಿಸುತ್ತವೆ.

**–ಎಂ.ಬಿ. ರಂಗನಾಥ್**, ಮೈಸೂರು

ಅಕ್ಟೋಬರ್ ಸಂಚಿಕೆ ಗಾಂಧಿ ಕುರಿತ ಲೇಖನಗಳನ್ನೊಳಗೊಂಡಿದ್ದು ಆಪ್ತವೆನಿಸಿತು. ಮುಖ್ಯವಾಗಿ ಡಿ.ಎಸ್. ನಾಗಭೂಷಣವರ 'ಗಾಂಧಿ ಕಥನ'ದಿಂದ ಆಯ್ದ 'ವಿಶ್ರಾಂತಿಯ ನಂತರ ಮತ್ತೆ ದೇಶ ಪರ್ಯಟನೆ' ಹೆಚ್ಚು ಇಷ್ಟವಾಯಿತು. ಸುದ್ದಿ ಮಾಧ್ಯಮಗಳು ಇಲ್ಲವೇ ಇಲ್ಲವೆನಿಸುವಷ್ಟು ಕನಿಷ್ಠವಾಗಿದ್ದ ಆ ಕಾಲದಲ್ಲಿ ಗಾಂಧಿ ಹೋದಲ್ಲೆಲ್ಲ ಸೇರುತ್ತಿದ್ದ ಜನಸಾಗರ, ದೇಶದ ಒಳಗೆ ಮಾತ್ರವಲ್ಲದೆ ಹೊರಗೂ ಕೂಡ ಕಂಡುಬರುತ್ತಿದ್ದ ಅವರ ಬಗೆಗಿನ ಆಕರ್ಷಣೆ, ಗೌರವಾದರಗಳು ಹೇಗೆ ಸಾಧ್ಯವಾಯಿತೆಂದು ಅಚ್ಚರಿ ಹುಟ್ಟಿಸುತ್ತದೆ.

ಇನ್ನು ಸಂದೀಪ್ ಪಾಂಡೆಯವರ ಲೇಖನದಲ್ಲಿ ದೇಶದ ಜವಳಿ, ಚಹ ಉದ್ಯಮ ಮತ್ತು ಪಾರ್ಲೆ ಕಂಪನಿಗಳು ನಷ್ಟದಲ್ಲಿರುವ ವಿಚಾರ ಪ್ರಸ್ತಾಪವಿದೆ. ಇದಕ್ಕೆ ಕಾರಣ ಮಾರುಕಟ್ಟೆಯ ಮಿತಿಯನ್ನು ಮೀರಿದ ಉತ್ಪಾದನೆಯ ಜೊತೆಗೆ ಗ್ರಾಹಕರ ಆಸಕ್ತಿ, ಅಭಿರುಚಿಗಳೂ ಕಾರಣವಾಗಿರಬಹುದು. ಕರ್ನಾಟಕದ ಹೆಚ್.ಎಮ್.ಟಿ. ಗಡಿಯಾರಗಳು, ಇಳಕಲ್, ಮೊಳಕಾಲ್ಮೂರು ಸೀರೆಗಳ ಪಾಡು ಎಲ್ಲರಿಗೂ ಗೊತ್ತಿದೆ. ಹೆಚ್ಚುತ್ತಿರುವ ಜೀವನವೆಚ್ಚ ಮತ್ತು ಹೆಚ್ಚಿಸಲೇಬೇಕಿರುವ ಸಂಬಳಗಳಿಂದಾಗಿ ಉದ್ಯಮಗಳು ನಷ್ಟಕ್ಕೆ ಗುರಿಯಾಗುತ್ತವೆ. ಕೈಗಾರಿಕಾ ಉತ್ಪನ್ನಗಳನ್ನು ಬಳಸದಿರುವುದು ಪರಿಹಾರವೆ? ಇದು ಇನ್ನಷ್ಟು ಉದ್ಯಮಗಳ ಅವನತಿಗೆ, ಆ ಮೂಲಕ ನಿರುದ್ಯೋಗಕ್ಕೆ ಕಾರಣವಾಗುವುದಿಲ್ಲವೆ? ಎಂಬ ಪ್ರಶ್ನೆಗಳಿವೆಯಾದರೂ ಏನನ್ನೂ ಮಾಡದೆ ಯಾವ ತೀರ್ಮಾನಕ್ಕೂ ಬರಲು ಸಾಧ್ಯವಿಲ್ಲ.

**–ಎನ್. ಎಮ್. ಕುಲಕರ್ಣಿ**, ಹೆಗ್ಗೋಡು

**ಸ್ಯಾಕ್ಸೊಫೋನ್ ಕಲಾವಿದ ಕದ್ರಿ ಗೋಪಾಲನಾಥ್ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ-ಸಂ.**

# ಕೆಲ ಅತಿ ಸಣ್ಣ ಕಥೆಗಳು

–ಸವಿತಾ ನಾಗಭೂಷಣ

ಚಿತ್ರಗಳು : ಬಿ.ಜಿ. ಗುಜ್ಜಾರಪ್ಪ

## ೧. ರಾಜ ಮತ್ತು ಮುದುಕಿ



ಅವಳ ಬೆನ್ನು ಬಗ್ಗಿ ಹೋಗಿದ್ದಿತು. ಆದರೂ ಆ ಮುದುಕಿ ತನ್ನ ಕೈಗಳಲ್ಲಿ ಕಸುವು ತುಂಬಿಕೊಂಡು ದೋಟಿಯಿಂದ ಮರದ ಕೊಂಬೆಯಲ್ಲಿ ಜೋತಾಡುತ್ತಿದ್ದ ಎರಡು ಸೀಬೆ ಹಣ್ಣುಗಳನ್ನು ಕೀಳಲು ಪ್ರಯತ್ನಿಸುತ್ತಿದ್ದಳು. ಸೀಬೇ ಹಣ್ಣುಗಳೋ ರೆಂಬೆಗೇ ಆತುಕೊಂಡು ಒಲ್ಲೆ, ಬರಲೊಲ್ಲೆ ಅನ್ನುತ್ತಿದ್ದವು.

ಚರಪರ ಚರಪರ ಸದ್ದಾಯಿತು. ಈ ಕಗ್ಗಾಡಿನಲ್ಲಿ ಈಟೊತ್ತಿನಲ್ಲಿ ಯಾರಪ್ಪಾ ಎಂದು ಮುದುಕಿ ಕಣ್ಣನ್ನು ಕಿರಿದಾಗಿಸಿ ನೋಡಿದಳು. ತಲೆಯ ಮೇಲೊಂದು ಫಳಫಳ ಎನ್ನುವ ಬಟ್ಟಲನ್ನು ಕವುಚಿ ಹಾಕಿಕೊಂಡು ಎದೆಗೆ ಅರಶಿನ ಬಣ್ಣದ ತಗಡನ್ನು ಸುತ್ತಿಕೊಂಡಿರುವ ಕಟ್ಟು ಮಸ್ತಾದ ಮನುಷ್ಯನೊಬ್ಬ ನಡೆದುಕೊಂಡು ಇವಳತ್ತಲೇ ಬರುವುದು ಕಾಣಿಸಿತು.

ಆ ವ್ಯಕ್ತಿ ಮುದುಕಿಯ ಹತ್ತಿರ ಬಂದು. 'ಅಜ್ಜಿ.... ಕುಡಿಯಲು ನೀರು ಇದೆಯೇ?' ಎಂದು ಕೇಳಿದ. ಅಜ್ಜಿ ಅಲ್ಲೇ ಹರಿಯುತ್ತಿದ್ದ ಸಣ್ಣ ತೊರೆಯತ್ತ ಕೈದೋರಿದಳು.

ನೀರು ಕುಡಿದು ಸುಧಾರಿಸಿಕೊಂಡ ಆ ಮನುಷ್ಯನಿಗೆ ಕಾಡಿನಲ್ಲಿ ದಾರಿ ತಪ್ಪಿತು. ನನ್ನ ಪರಿವಾರದವರು ಇಲ್ಲೇ ಎಲ್ಲೋ ಇರುವರು, ಹುಡುಕಿಕೊಂಡು ಬರಬಹುದು ಎಂದು ಹೇಳಿ ನೆಲಕ್ಕೆ ಒರಗಿದ್ದ ಒಂದು ಮರದ ಬೊಡ್ಡೆಯ ಮೇಲೆ ಕೂತ. 'ಇದೇನಿದು ತಲೆಯ ಮೇಲೆ ಬಟ್ಟಲು ಕವುಚಿಕೊಂಡಿರುವೆಯಲ್ಲ? ಇದೇನಿದು ತಗಡು ಎದೆಗೆ ಕಟ್ಟಿಕೊಂಡಿರುವೆಯಲ್ಲ..?' ಎಂದು ಮುದುಕಿ ಕೇಳಿದಳು. ಆ ಮನುಷ್ಯ ನಕ್ಕು 'ಅದು ಕಿರೀಟ, ಇದು ಕವಚ' ಎಂದು ವಿವರಿಸಿದ. 'ಯಾರಪ್ಪ ನೀನು? ಹೆಸರೇನು?' ಎಂದು ಕೇಳಲು ಆತ ತಾನು ಈ ಸೀಮೆಯ ರಾಜ ಎಂದು ಹೇಳಿದ. ತನ್ನ ಅರಮನೆ ಸೈನ್ಯ ಸಂಪತ್ತು ಇತ್ಯಾದಿ...ಇತ್ಯಾದಿಗಳ ಬಗ್ಗೆ ಸಣ್ಣ ವಿವರಣೆ ಕೊಟ್ಟ. ಮುದುಕಿಗೆ ಅವನು ಹೇಳಿದ್ದು ಒಂದೂ ತಲೆಗೆ ಹೋದಂತೆ ಕಾಣಲಿಲ್ಲ. ಅದರ ಬಗ್ಗೆ ಹೆಚ್ಚು ಆಸಕ್ತಿ ತೋರದೆ 'ಮದುವೆ ಆಗಿದೆಯೇ? ಮಕ್ಕಳು ಎಷ್ಟು? ಹೊಟ್ಟೆ ಹೊರೆಯಲು ಏನು ಮಾಡುತ್ತೀಯಾ?' ಎಂದು ಕೇಳಿದಳು. ರಾಜ ಪ್ರಜೆಗಳ ಪರಿಪಾಲನೆ ತನ್ನ ಕೆಲಸ ಎಂದ. 'ಕೈಕಾಲು ಇರುವ ಮನುಷ್ಯರು ಗೇದು ತಿಂದು ಸಾಯುವರು ಅಂದುಕೊಂಡಿದ್ದೆ, ಅವರನ್ನು ನೋಡಿಕೊಳ್ಳಲು ಈ ವ್ಯವಸ್ಥೆ ಇದೆ ಎನ್ನುವುದು ನನಗೆ ಗೊತ್ತೇ ಇಲ್ಲಾ... ಈ ಹಣ್ಣಿನ ಮರಗಳು, ಹರಿಯುವ ಹಳ್ಳ–ಕೊಳ್ಳ ಸಣ್ಣ ಗುಡಿಸಲು, ಇಷ್ಟೇ ಗೊತ್ತಿರುವುದು' ಎಂದಳು. ಒಬ್ಬ ಮಗನಿರುವನೆಂದೂ ಕಲ್ಲು ಕೆತ್ತುವ ಕೆಲಸ ಮಾಡಿ ಭತ್ತ ಎಣ್ಣೆ ಉಪ್ಪು ಹುಣಿಸೆಹಣ್ಣು ಸಂಜೆಗೆ ಮನೆಗೆ ತರುವನೆಂದೂ ಹೇಳಿದಳು.

'ತಿನ್ನಲು ಏನಾದರೂ ಇದೆಯೇ?' ಎಂದು ರಾಜ ಕೇಳಲು ದೋಟಿಯನ್ನು ನೀಡಿ 'ತುಸು ಹಳದಿಗೆ ತಿರುಗಿರುವ ಆ ಹಣ್ಣುಗಳೆರಡನ್ನು ಬೀಳಿಸು' ಎಂದಳು. ನೆಲ ಬಗೆದು ಸಣ್ಣಪುಟ್ಟ ಗೆಡ್ಡೆಗಳನ್ನು ತೆಗೆದು ನೀರಿನಲ್ಲಿ ತೊಳೆದು ನೀಡಿದಳು. ಗಂಜಿ ಬೇಯಿಸಲು ಕಾಳುಕಡ್ಡಿ ಇಲ್ಲ. ಎಂದು ಒಂದಿಷ್ಟು ಹಸಿರೆಲೆಗಳನ್ನು ಆರಿಸಿ ತಂದು ಬೇಯಿಸಿ ತಾನೂ ತಿಂದು ಅವನಿಗೂ ನೀಡಿದಳು.

ಅಷ್ಟರಲ್ಲಿ ರಾಜನ ಪರಿವಾರ ಅವನನ್ನು ಹುಡುಕಿಕೊಂಡು ಬಂದಿತು. ಇಷ್ಟೆಲ್ಲಾ ಉಪಚರಿಸಿದ ಮುದುಕಿಗೆ ಏನಾದರೂ ನೀಡಲು ರಾಜನಿಗೆ ಮನಸ್ಸಿದ್ದರೂ ಮುದುಕಿಗೆ ಉಪಯೋಗವಾಗಬಹುದಾದ ಯಾವ ವಸ್ತುವೂ ಸದ್ಯ ಅವನ ಬಳಿ ಇರಲಿಲ್ಲ. 'ಮತ್ತೆ ಎಂದಾದರೂ ಬಂದು ನೀಡುವೆ– ಕಾಣುವೆ' ಎಂದಾತ ಹೇಳಲು ಮುದುಕಿ ಖಡಕ್ಕಾಗಿ 'ಈ ಸಲವೇನೋ ಹಳ್ಳದಲ್ಲಿ ನೀರಿತ್ತು, ಮರದಲ್ಲಿ ಹಣ್ಣಿತ್ತು, ಗಡ್ಡೆ ಗೆಣಸು ಸಿಕ್ಕಿತು. ಸದಾಕಾಲ ಸಿಗುವುದಿಲ್ಲ ಹಾಗಾಗಿ ದಾರಿ ತಪ್ಪಬೇಡ, ಬರುವುದೂ ಬೇಡ' ಎಂದು ಹೇಳಿ ಅವನನ್ನು ಬೀಳ್ಕೊಟ್ಟಳು.

## ೨. ಬರವಣಿಗೆ



ಬುಟ್ಟಿ ಹೆಣೆಯುತ್ತಾ ಕೂತಿದ್ದ ಗಂಗಣ್ಣ ಬೀಡಿ ಸೇದುತ್ತಾ ಕೂತ ತನ್ನ ತಂದೆ ನಿಂಗಣ್ಣನಿಗೆ ಆಚೆ ಮನೆ ತಮ್ಮಣ್ಣನ ಮಗ ಚಿಕ್ಕಣ್ಣನ ಪಟ ಪೇಪರಿನಲ್ಲಿ ಬಂದಿರುವುದನ್ನು ಹೇಳಿದನು.

ಭಾಳ ಭಾಳ ಓದಿ ಭಾಳ ಭಾಳ ಬರೆದವನಂತೆ. ಪರದೇಸಕ್ಕೂ ವಿಮಾನ ಹತ್ತಿ ಹೋಗಿ ಅದೆಂತದೋ ತಕ್ಕಂಡವನಂತೆ ಎಷ್ಟು ದಪ್ಪ ಎತ್ತರ ಆಗಿಬಿಟ್ಟವನೆ, ಫಳಫಳ ಬೆಳ್ಳಗೆ ಹೊಳಿತಾವನೆ ಗುರ್ತ ಸಿಗವಲ್ದು ಎಂದನು. ಹೋಟ್ಲು ತಾವ ಅದೇ ಮಾತು... ಎಂದನು. ಚಿಕ್ಕೋನಿದ್ದಾಗ ನೀರಿಗೆ ಬೀಳಕ್ಕೆ ಭಾಳ ಹೆದರ್ಕೆ, ನಾನೇ... ತಳ್ಳುದ್ರೆ ಹೆದ್ರಿ ಹೆದ್ರಿ ಬೀಳೋನು... ನಾನೆ ನೀರ್ನಲ್ಲಿ ಕೈಕಾಲು ಬಡಿಯೋದ ಕಲ್ಸಿದ್ದು ಎಂದು ನಗೆಯಾಡಿದನು. ದೊಡ್ಡ ಮನುಸ್ಯ ಆಗವನೇ... ಕರುಸ್ತಾರಂತೆ, ಸಮ್ಮಾನ ಮಾಡ್ತಾರಂತೆ... ಬಂದಾಗ ಮಾತಾಡುಸ್ತೀನಿ ಗುರ್ತಾ ಹಿಡಿತಾನಾ ನೋಡಬೇಕು ಎಂದನು.

ನಿಂಗಣ್ಣ ಮತ್ತೊಂದು ಬೀಡಿ ಹಚ್ಚುತ್ತಾ.... 'ಏನೋ ಮುಖ ನೆಪ್ಪಿಗೆ ಬರವಲ್ದು... ಭಾಳಾ ದಿನಾತು, ಅದೇನು ಭಾಳಾ ಭಾಳಾ ಅಂದ್ರ ರಾಮಾಯ್ಣ ಮಾಭಾರತಕ್ಕಿಂತ ದೊಡ್ಡ್ ಬರದಾನಾ?' ಎಂದು ಬೆರಗಿನಿಂದ ಕೇಳಿದನು.

## ೩. ಹುಲಿ



ಅದೊಂದು ಚಂದದ ಪಟ್ಟೆ ಹುಲಿ. ಅದರ ಅಮ್ಮ ಹಾಲೂಡಿ ಉಕ್ಕುಕ್ಕಿ ಬಂದ ಪ್ರೀತಿಯಿಂದ ನೆಕ್ಕಿ ನೆಕ್ಕಿ, ಆಟ ಪಾಠ ಕಲಿಸಿ ಬೇಟೆ ಆಡುವುದನ್ನೂ ಕಲಿಸಿ, ಸದಾ ಎಚ್ಚರದಿಂದ ಹೇಗೆ ಇರಬೇಕು ಎಂಬುದನ್ನೂ ತೋರಿಸಿ, ಈಗ ದೊಡ್ಡ ಆಗಿರುವೆ, ಹೋಗು ರಾಣಿಯಂತೆ ಬದುಕುಮಾಡು ಎಂದು ಹೇಳಿ ಮಗಳನ್ನು ದಟ್ಟ ಕಾಡಿನಲ್ಲಿ ತೊರೆದು ಹೋಯಿತು.

ಈ ದಿನಗಳಲ್ಲಿ ಯಾವುದೋ ವಿಚಿತ್ರ ವಾಸನೆ, ತನ್ನ ಎಡಬಿಡದೆ ಹಿಂಬಾಲಿಸುತ್ತಿದೆ... ಸಣ್ಣ ಸಪ್ಪಳ, ಯಾವುದೋ ಕಣ್ಣು ತನ್ನನ್ನು ಸತತವಾಗಿ ಗಮನಿಸುತ್ತಿದೆ ಎಂದು ಹುಲಿಗೆ ಭಾಸವಾಗುತ್ತಿತ್ತು.

ಯಾವುದೋ ಒಂದು ಆಕಾರ, ಅದರ ಹೆಗಲಲ್ಲಿ ಬಗಲಲ್ಲಿ ಏನೇನೋ ನೇತಾಡಿಕೊಂಡು ಇರುವುದನ್ನು ಅದರ ಗುರಿ ತಾನೇ ಆಗಿರುವುದನ್ನೂ ಕಂಡುಕೊಂಡಿತು.

ಆಗಾಗ ಜಾಗ ಬದಲಿಸುವುದು, ಸದಾ ಪೊದೆಯ ಮರೆಯಲ್ಲಿ ಅಡಗಿಕೂರುವುದು ಎಲ್ಲಾ ಮಾಡತೊಡಗಿತು. ನೀರು ಕುಡಿಯಲು ಹಳ್ಳದ ಬಳಿ ಹೋಗುವಾಗ ಹತ್ತು ಸಲ ಸುತ್ತಲೂ ಕಣ್ಣಾಡಿಸುತ್ತಿತ್ತು. ಅದೊಂದು ತರಹ ವಿಚಿತ್ರ ವಾಸನೆ! ಅದು ಕೇಡು ಉಂಟು ಮಾಡುವ ವಾಸನೆ ಎಂದು ಅದರ ಅಮ್ಮ ಮಗುವಾಗಿದ್ದಾಗ ಓಡಿಸಿಕೊಂಡು ಹೋದದ್ದು ನೆನಪಾಗಿ ಆ ವಾಸನೆ ಮೂಗಿಗೆ ಮುಟ್ಟಿದ ಕೂಡಲೆ ನಡುಗಿ ಹೋಗುತ್ತಿತ್ತು.

ಸಣ್ಣಗೆ ಹಳ್ಳ ಹರಿಯುವ ಸದ್ದು...ಬಂಡೆಯ ಮೇಲೆ ಮೈಚಾಚಿ ಮಲಗಿ ಕನಸು ಕಾಣುತ್ತಿತ್ತು. ಅಲ್ಲೇ ಹುಲ್ಲು ಮೇಯುತ್ತಿದ್ದ ಜಿಂಕೆಗಳು ಇದ್ದಕ್ಕಿದ್ದಂತೆ ಹಿಂದೆ ಸರಿಯುವುದು ಕಾಣಿಸಿತು. ಹಕ್ಕಿಯೊಂದು ವಿಕಾರವಾಗಿ ಕೂಗಿತು. ಮಂಗವೊಂದು ಥಂಗನೆ ನೆಗೆದಾಡಿ ಮರವನೇರಿತು.

ವಿಚಿತ್ರ ವಾಸನೆ! ಅತಿ ಕ್ರೂರ ವಿಚಿತ್ರ ವಾಸನೆ! ಏನೋ ಚುಚ್ಚಿದಂತಹ ಅನುಭವ! ಏನಾಯಿತು? ನೆನಪಿಗೆ ಬರಲೊಲ್ಲದು. ಎಚ್ಚರವಾದಾಗ ವಿಚಿತ್ರ ವಾಸನೆಯ ಮಂದಿ ಹತ್ತಿರವೇ ಗುಂಪುಗುಂಪಾಗಿ ಸುತ್ತುವರೆದಿದ್ದರು. ವಿಚಿತ್ರವಾಗಿ ಸದ್ದು ಮಾಡುತ್ತಿದ್ದರು.

ಆಗಾಗ ಪಕಪಕ ಬೆಳಕು ಮುಖದ ಮೇಲೆ ಬಿದ್ದು ಹುಲಿ ಕಣ್ಣು ಚುಚ್ಚುತ್ತಿತ್ತು– ಮುಚ್ಚುತ್ತಿತ್ತು. ನೆರೆದ ಮಂದಿಯನ್ನು ಮುಟ್ಟಲಾಗದಂತೆ ಸುತ್ತಲೂ ಏನೋ ನೆಟ್ಟಿದ್ದರು...ಕಟ್ಟಿದ್ದರು.

ಒಂದು ಚಣ ಅಮ್ಮನನ್ನೂ ಹಚ್ಚ ಹಸಿರು ಕಾಡನ್ನೂ ಚಂದದ ಪಟ್ಟೆ ಹುಲಿ ಕೊನೆಯ ಬಾರಿಗೆ ಎಂಬಂತೆ ನೆನೆಯಿತು.

## ೪. ಹಳೆಯ ಕೊಡ



**ಮು**ತ್ತಜ್ಜಿಯ, ಅಜ್ಜಿಯ ಕೈ ಬದಲಾಯಿಸಿ ಅಮ್ಮನ ತನಕ ಬಂದ ಕಬ್ಬಿಣ ಹಿತ್ತಾಳೆ ತಾಮ್ರದ ಕಾವಲಿ, ಚರಿಗೆ, ಮರಿಗೆ ಕೊಡ ತಟ್ಟೆ ಲೋಟ ಎಲ್ಲಾ ಅಟ್ಟದಿಂದ ಕೆಳಗಿಳಿಸಿ ಗುಜರಿ ಸಾಬಣ್ಣನ ಮುಂದೆ ಗುಡ್ಡೆ ಹಾಕಿ ಎಷ್ಟಾಗುತ್ತೆ ಹೇಳು ಅಂದೆ. ಸಾಬಣ್ಣನ ಮುಖ ಊರಗಲವಾಯಿತು, ಇನ್ನೂ ಏನಾರ ಮಡಗಿದೀರಾ ನೋಡಿ ಅಂದ.

ಕಾಲೆಳೆದುಕೊಂಡು ಬಂದ ಅಮ್ಮ ನೆಗ್ಗಿದ ಪುಟ್ಟ ಕೊಡದತ್ತ ಕೈದೋರಿ 'ನಾನು ಸಣ್ಣಾಕಿ ಇದ್ದಾಗ ಬಾವಿಯಿಂದ ನೀರೆಳೆದು ಮನೆಮಂದಿಗೆ ಸಿಹಿನೀರು ಉಣಿಸಿ ತಣಿಸಿದ ಕೊಡ' ಎಂದು ನಿಡುಸುಯ್ದಳು. ನೆಗ್ಗಿದೆ ಬಗ್ಗಿದೆ ಸೊಟ್ಟಗಾಗಿದೆ. ನನ್ನದೇ ಪರಾಕ್ರಮ ಎಂದು ಹಳೆಯ ನೆನಪಲ್ಲಿ ನೆಂದಳು.

ಸಾಬಣ್ಣ ಮಿಕ್ಕವನೆಲ್ಲಾ ಗುಡ್ಡೆಯಾಗಿಸಿ ಇಂತಿಷ್ಟು ಎಂದು ಬೆಲೆ ಕಟ್ಟಿದ. ಕೊಡವ ತಟ್ಟಿ ಮುಟ್ಟಿ ಎತ್ತಿ ಮೇಲೆಸೆದು ಹಿಡಿದು ಕೊಡದ ಬಾಯೊಳಗೆ ಹಣಕಿ ಇಣುಕಿ ನೋಡಿ ಮತ್ತೆ ಅಮ್ಮನ ನೋಡುತ್ತಾ ಒಂದು ಸಣ್ಣ ತೂತ ಇದೆ. ಬೆಸಿಗೆ ಹಾಕಿ ಆಚೀಚೆ ಬಡಿದು ಫಳಫಳ ಮಾಡಿಕೊಡುವೆ...ಸಂತೋಷವಾ ಎಂದು ಕೇಳಿದ.

ನಾನು ಅಮ್ಮನ ಮುಖ ನೋಡಿದೆ.

ಅಮ್ಮ ಕಣ್ಣಲ್ಲೇ ನೀರು ತುಂಬಿಕೊಂಡಳು.

## ೫. ಬಾಂಧವ್ಯ



**ಶ**ಶಾಂಕ ದಿನಾಲು ಮನೆಯಿಂದ ಕಛೇರಿಗೆ ಹೊರಡುವುದು ಬೆಳಿಗ್ಗೆ ಎಂಟೂವರೆಗೆ. ಮಡಿವಾಳ ಮೇಲು ಸೇತುವೆ ಬಳಿ ಬಂದಾಗ ಸರಿಸುಮಾರು ಸಿಗ್ನಲ್ ಬೀಳುತ್ತದೆ. ಅದೇ ಆ ಮುದುಕಿ ಕಾರಿನ ಬಳಿ ಬಂದು ಟಕ್ ಟಕ್ ಟಕ್ ಎಂದು ಮೂರು ಸಲ ಕಿಟಕಿ ಗಾಜು ಕುಟ್ಟುತ್ತಾಳೆ. ಶಶಾಂಕ ಐದು ರೂಪಾಯಿಯ ನಾಣ್ಯ ನೀಡುತ್ತಾನೆ. ಅವಳು ನಮಸ್ಕಾರ ಮಾಡಿ ಜಾಗ ಖಾಲಿ ಮಾಡುತ್ತಾಳೆ. ಆ ಮುದುಕಿಗೆ ಏನಿಲ್ಲ ಅಂದರೂ ಎಂಭತ್ತರ ಮೇಲಾಗಿದೆ ಎಂದು ಅವನಿಗೆ ಅನಿಸಿದೆ. ತಟ್ಪಾಡುತ್ತಾ ಓಡಾಡುವ ಅವಳ ಬಗ್ಗೆ ಅರಿಯುವ ಕುತೂಹಲ ಕೂಡ ಇದೆ. ಕಾರು ನಿಲ್ಲಿಸಿ ಕೇಳಬೇಕು ಅಂದುಕೊಳ್ಳುತ್ತಲೇ ನಾಲ್ಕೈದು ವರುಷಗಳೇ ಕಳೆದಿವೆ. ಒಮ್ಮೊಮ್ಮೆ ಮನೆಯಿಂದ ಹೊರಡುವುದು ತಡವಾಗಿ ಆಕೆ ಸಿಗದಿದ್ದಾಗ ಹಿಂದಿನ ದಿನದ ಬಾಕಿ ಸೇರಿಸಿ ಕೊಡುವುದೂ ಇದೆ.

ಸರಿಯಾಗಿ ಎಂಟೂವರೆಗೆ ಮನೆಯಿಂದ ಹೊರಡುವುದು.... ಆ ಸಮಯದಲ್ಲಿ ಮನೆಮಂದಿ ಏನಾದರೂ ಕೆಲಸ ಹೇಳಿದರೆ ಆ ಮುದುಕಿ ಕಾಯುತ್ತ ಇರುತ್ತಾಳೆ, ಈಗ ಆಗಲ್ಲ ಎಂದು ಹೇಳಿ ಸಿಡಿಮಿಡಿಗೊಳ್ಳುವುದು, ಇವೆಲ್ಲ ಶಶಾಂಕನ ಮನೆಯವರಿಗೆ ವಿಚಿತ್ರವೆನಿಸಿ ಆಗಾಗ ಅವರು ಮುದುಕಿಯ ವಿಷಯ ತೆಗೆದು ತಮಾಷೆ ಮಾಡಿ ಆಡಿಕೊಳ್ಳುವ ತನಕ ಬಂದಿದೆ.

ಕಳೆದ ತಿಂಗಳಿನಿಂದ ಬಡ್ತಿ ಸಿಕ್ಕಿ ಶಶಾಂಕನಿಗೆ ಪಗಾರ ಹೆಚ್ಚಾದ ಮೇಲೆ ಅವನು ಆಕೆಗೆ ಹತ್ತು ರೂಪಾಯಿಯ ನೋಟು ನೀಡಲು ಶುರು ಮಾಡಿದ್ದಾನೆ. ಓಹೋ ಮುದುಕಿಗೂ ಪ್ರೊಮೋಷನ್ ಎಂದು ಮಗಳು ರೇಗಿಸಿ ನಕ್ಕಿದ್ದಾಗಿದೆ.

ನಲವತ್ತರ ಆಸುಪಾಸಿನಲ್ಲಿರುವ ಶಶಾಂಕನಿಗೆ ಯಾಕೋ ಮೊನ್ನೆ ಎದೆ ಹಿಂಡಿದಂತಾಗಿ ಡಾಕ್ಟರ್ ಹತ್ತಿರ ತಪಾಸಣೆ ಮಾಡಿಸಿದಾಗ ಒಂದಿಷ್ಟು ಪರೀಕ್ಷೆಗಳನ್ನು ಮಾಡಿ ಆರು ವಾರ ವಿಶ್ರಾಂತಿ ತೆಗೆದುಕೊಳ್ಳಲೇಬೇಕು ಎಂದು ಸೂಚಿಸಿರುತ್ತಾರೆ. ಮಾರನೆಯ ದಿನದಿಂದ ಶಶಾಂಕ ಕಛೇರಿಗೆ ರಜೆ ಹಾಕಿದ್ದರೂ ಸರಿಯಾಗಿ ಎಂಟೂವರೆಗೆ ಹೊರಟು ಸಿಗ್ನಲ್ ಬಳಿ ಮುದುಕಿ ಸಿಕ್ಕಿ ಟಕ್ ಟಕ್ ಟಕ್ ಎಂದು ಬಾಗಿಲು ಬಡಿದಾಗ ಆಕೆಯ ಕೈಯಲ್ಲಿ ಐದುನೂರು ರೂಪಾಯಿಯ ನೋಟ ಇರಿಸಿ, 'ನನಗೆ ಆರಾಮಿಲ್ಲ, ನಾನು ನಾಲ್ಕೈದು ವಾರ ಬರಲ್ಲ...ಎನಲು' ನಡುಗುವ ಕೈಯಿಂದ ಮುದುಕಿ ಅದನ್ನು ಇಸಿದುಕೊಂಡು ಕಣ್ಣಿಗೆ ಒತ್ತಿಕೊಳ್ಳುವಳು.

ಶಶಾಂಕನಿಗೆ ಏನೋ ಕಳವಳ...... ಆಕೆಯನ್ನು ಮತ್ತೆ ನೋಡುವೆನೋ ಇಲ್ಲವೋ ಎಂದು ಅನಿಸಿ ಕಾರಿನ ಗಾಜು ಏರಿಸಿ ಕಾರನ್ನು ತಿರುಗಿಸಿಕೊಂಡು ಮರಳಿದರೂ ಅದೇ ಗುಂಗಿನಲ್ಲಿ ಇರುವನು. ಇದನ್ನು ಗಮನಿಸಿದ ಶಶಾಂಕನ ಹೆಂಡತಿ ಯಾಕೆ ಮುದುಕಿಗೇನಾಯಿತು? ಎಂದು ಕೇಳಲು, ಆಕೆ ಗಟ್ಟಿಮುಟ್ಟಾಗಿರುವಳು ಅದಲ್ಲ ವಿಷಯ, ಯಾಕೋ ಸುಸ್ತು ಎಂದು ಕ್ಷೀಣವಾದ ದನಿಯಲ್ಲಿ ಉಸುರುತ್ತಾ ಮಾತ್ರೆ ನುಂಗಿ ನೀರು ಕುಡಿಯುವನು.

## ೬. ಕಾಂಡಾ ಭಾಷೆ ಮಾತನಾಡುವ ಕಟ್ಟಕಡೆಯ ಮನುಷ್ಯ...



**ಊ**ಹಿಸಲೂ ಅಸಾಧ್ಯವಾದ ಕೆಟ್ಟ ಕಾಯಿಲೆಯೊಂದು ಆ ಸೀಮೆಗೆ ಸುನಾಮಿಯಂತೆ ಅಪ್ಪಳಿಸಿ ಎಲ್ಲರೂ ವಿಧಿವಶರಾಗಿ ಅದೃಷ್ಟವೋ ದುರದೃಷ್ಟವೋ ಅವನೊಬ್ಬನೇ ಉಳಿದುಕೊಂಡಿದ್ದನು. ಅವನು 'ಅಮ್ಮಾ' 'ಅಕ್ಕಾ' ಎಂದು ಕರೆಯುತ್ತಾ ಹುಚ್ಚನಂತೆ ಅಲೆಯುತ್ತಾ ಅದೆಷ್ಟೋ ವರುಷಗಳು ಕಳೆದರೂ ತನ್ನವರು, ತನ್ನ ಭಾಷೆ ಮಾತನಾಡುವವರು ಸಿಗದೆ ಗರ ಬಡಿದಂತವನಾಗಿದ್ದನು. ಒಮ್ಮೆ ಹೀಗೆ ನದಿ ತಟದಲ್ಲಿ ನಡೆದು ಹೋಗುತ್ತಿರಲು ಅಡವಿಯೊಂದು ಎದುರಾಗಿ ಅಲ್ಲೇ ಸೊಂಪಾಗಿ ಬೆಳೆದಿದ್ದ ಗಿಡಗಳಿಂದ ಹಣ್ಣುಗಳನ್ನು ತರಿದು ತಿಂದು ತಂಪಾದ ನೀರು ಕುಡಿದು ದೂರದಲ್ಲಿದ್ದ ಬೆಟ್ಟದ ಸಾಲುಗಳನ್ನು ನೋಡುತ್ತಾ ನದಿಯ ತಟದಲ್ಲಿ ಕುಳಿತಿದ್ದನು. ಯಾವುದೋ ದನಿ ! ಹತ್ತಿರ ಹತ್ತಿರ ಬಂದಂತಾಯಿತು. ಅದೆಷ್ಟೋ ವರುಷಗಳ ನಂತರ ಮನುಷ್ಯ ಎದುರಾಗಿದ್ದನು ! ಆಗಂತುಕರಿಬ್ಬರು ಆ ಹಾದಿಯಲ್ಲಿ ಮಾತನಾಡುತ್ತಾ ಬರುತ್ತಿದ್ದವರು ಇವನನ್ನು ನೋಡಿ ನಿಂತು ಏನೋ ಕೇಳಿದರು. ಎಷ್ಟೇ ಗಮನ ಕೊಟ್ಟು ಆಲಿಸಿದರೂ ಅದಾವ ಭಾಷೆ ಎಂದು ಇವನಿಗೆ ತಿಳಿಯಲಿಲ್ಲ. ಅವರು ಇವನನ್ನು ಸಮೀಪಿಸಿದಂತೆ ಇವನು ಹರ್ಷದಿಂದ ಅವರನ್ನು ಕಾಂಡಾ ಭಾಷೆಯಲ್ಲಿ ಮಾತನಾಡಿಸಿದನು. ಅವರಿಗೆ ಏನೂ ತಿಳಿಯದೆ ಅವರ ಭಾಷೆಯಲ್ಲಿ ಏನೋ ಹೇಳಿದರು. ಕಾಂಡಾ ಭಾಷೆ ಮಾತನಾಡುವ ಜನರೆಲ್ಲಿ? ಆ ನನ್ನ ಕಾಂಡಾ ಸೀಮೆ ಎಲ್ಲಿ ಹೇಳಿ ಎಂದು ಪರಿಪರಿಯಾಗಿ ಬೇಡಿಕೊಂಡನು. ಅವರು ತಮ್ಮ ಭಾಷೆಯಲ್ಲಿ ಏನೆಲ್ಲಾ ಹೇಳಿ ಸಾಕಾಗಿ ಇನ್ನೂ ಕೆಲವು ಭಾಷೆಗಳಲ್ಲಿಯೂ ಮಾತನಾಡಿ ಇವನಿಗೆ ಮನನ ಮಾಡಲು ಅಸಮರ್ಥರಾಗಿ, ಸಾಕಾಗಿ ಏನೂ ಮಾಡಲು ತೋರದೆ ಅವನ ಕಣ್ಣಿನಾಳದಲಿ ಇಳಿದು ಮನದಿಂಗಿತ ಅರಿತು ಅಚ್ಚರಿಯಾಗಿ ಅವನ ಸನ್ನೆ ಭಾಷೆಗೆ ಪ್ರತಿಯಾಗಿ ನದಿಯಾಚೆಯಿದ್ದ ಬೆಟ್ಟದತ್ತ ಕೈದೋರಿದರು. ಇವನು ಜೋರಾಗಿ ಯಾರಲ್ಲಿ? ಯಾರಲ್ಲಿ? ಎಂದು ಕೂಗಿದನು. ರುಮು ರುಮು ಎಂದು ಬಲವಾದ ಗಾಳಿ ಬೀಸಿ ಅಲ್ಲಿಂದ ಇಲ್ಲಿ.. ಇಲ್ಲೀ.. ಎಂಬ ಕ್ಷೀಣವಾದ ದನಿ ಕೇಳಿ ಬಂದಿತು.

ಇವನು ಅವರಿಗೆ ಕೈ ಮುಗಿದು ನದಿ ದಾಟಿ ಬೆಟ್ಟಗಳ ಸಾಲಿನತ್ತ ನಡೆದು ಹೋದನು. ಕಾಂಡಾ ಭಾಷೆ ಮಾತನಾಡುವ ಕಟ್ಟ ಕಡೆಯ ಮನುಷ್ಯ ಈಗಲೂ ಅಲ್ಲೆಲ್ಲೋ ಇರುವನು... ಅವನಿಗೆ ಸಾವಿಲ್ಲ.. ಅವನ ಬಳಿ ಕಾಂಡಾ ಭಾಷೆಯ ಸಮಸ್ತ ಭಂಡಾರವಿದೆ ಎಂದು ಈಗಲೂ ಸುತ್ತಮುತ್ತಲಿನ ಕಂಗಲೀಸು ಭಾಷೆ ಮಾತನಾಡುವ ಜನ ಆಡಿಕೊಳ್ಳುವರು.



**(ಶಿವಮೊಗ್ಗ ನಿವಾಸಿಯಾದ ಸವಿತಾ ನಾಗಭೂಷಣ ಕನ್ನಡದ ಹಿರಿಯ ಕವಯತ್ರಿ ಮತ್ತು ಕಥನಕಾರ್ತಿ)**

# ಸಾಹಿತ್ಯ-ಸಂಸ್ಕೃತಿ-ನಾಟಕ-ಇತ್ಯಾದಿ : ಕೆಲ ಬಿಡಿ ಟಿಪ್ಪಣಿಗಳು





**ಈ** ವರ್ಷವೂ ಪ್ರತಿವರ್ಷದಂತೆ ಅಕ್ಟೋಬರ್ ಮೊದಲ ವಾರದಲ್ಲಿ (೪ರಿಂದ ೮ರವರೆಗೆ) ನೀನಾಸಂ ಸಂಸ್ಕೃತಿ ಶಿಬಿರ ಹೆಗ್ಗೋಡಿನಲ್ಲಿ ನಡೆಯಿತು. ಈ ವರ್ಷದ ಶಿಬಿರದ ವಿಷಯ: 'ಕಲೆಯ ಅನುಭವ'. ನಾನು ೪ರ ಸಂಜೆಯಿಂದ ೬ರ ಸಂಜೆಯವರೆಗಿನ ಮೂರು-ನಾಲ್ಕು ಗೋಷ್ಠಿಗಳು ಮತ್ತು ಸಂಜೆಯ ಎರಡು ನಾಟಕಗಳನ್ನು ನೋಡಿದೆ. ಇವುಗಳ ಆಧಾರದ ಮೇಲೇ ಹೇಳುವುದಾದರೆ ಶಿಬಿರ ಅದರ ಈ ವರ್ಷಕ್ಕಾಗಿ ಆಯ್ದುಕೊಂಡಿದ್ದ ವಿಷಯದಂತೆಯೇ ಬಹು ಸ್ಥೂಲವೂ ಸಡಿಲವೂ ಆಗಿತ್ತು. ವಿಜಾಪುರದ ಕಡೆಯಿಂದ ಬಂದ ಹಲಗೆಮ್ಮ ಭಜನಾ ಮಂಡಳಿಯ ಕಲಾವಿದರು ಮೀನಾಕ್ಷಿ ಬಾಳಿಯವರ ಚುರುಕಾದ ಸೂತ್ರಧಾರತ್ವದಲ್ಲಿ ಪ್ರಸ್ತುತಪಡಿಸಿದ ಪಾರಿಜಾತ ಭಜನೆಗಳ ಕಚ್ಚಾ ಪ್ರತಿಭೆ ಕೇಳುಗರನ್ನು ನಿಬ್ಬರೆಗಾಗಿಸಿತು. ಪ್ರಪಂಚದ ಮಾಯೆಯ ಬಗ್ಗೆ ಹೇಳುತ್ತಾ ಮನುಷ್ಯನ ಮೂಲಾಧಾರಗಳನ್ನು ಅಲುಗಾಡಿಸುವ ಈ ಭಜನೆಗಳಿಗೆ ಸಾಹಿತ್ಯ ಮತ್ತು ಸಂಗೀತಗಳೆರಡರಲ್ಲೂ ಗಡಸುತನ ತಾನೇ ತಾನಾಗಿ ಒದಗಿ ಬಂದಂತಿತ್ತು. ಊರ ಹಬ್ಬ-ಜಾತ್ರೆಗಳಲ್ಲಿ ಹಾಡಲಾಗುವ ಈ ಭಜನೆಗಳು ಆ ಗದ್ದಲದಲ್ಲಿ ಎಷ್ಟು ಸಾರ್ಥಕ ಪರಿಣಾಮವನ್ನುಂಟು ಮಾಡುವವೋ ಎಂಬ ಅನುಮಾನದೊಂದಿಗೇ ಆ ಅದ್ಭುತ ಕಲಾವಿದರ ತಂಡವನ್ನು ನಾನು ವೈಯಕ್ತಿಕವಾಗಿ ಅಭಿನಂದಿಸಿದೆ.

ಈ ಗೋಷ್ಠಿಯನ್ನು ಬಿಟ್ಟರೆ ಸ್ವಲ್ಪಮಟ್ಟಿಗೆ ಗಮನ ಸೆಳೆದ ಗೋಷ್ಠಿಯೆಂದರೆ ಹರಿಹರನ್ ಅವರು ಕಲಾತ್ಮಕ/ಬೌದ್ಧಿಕ ಸಿನಿಮಾಗಳ ಪ್ರತಿಷ್ಠೆಗೆ ಪ್ರತಿಯಾಗಿ ಜನಪ್ರಿಯ/ವ್ಯಾಪಾರಿ ಸಿನಿಮಾಗಳ ರಸ ಬಿಂದುಗಳು ಮತ್ತು ಅ-ಸಾಮಾನ್ಯ ಗುಣಗಳನ್ನು ಗುರುತಿಸುತ್ತಾ ನಡೆಸಿಕೊಟ್ಟ ಪ್ರಾತ್ಯಕ್ಷಿಕೆ. ಇದು ನೀನಾಸಂ ಶಿಬಿರದ 'ಪ್ರತಿಷ್ಠಿತ' ಶೈಲಿಗೇ ವಿರುದ್ಧವಾದುದೆನಿಸಿ ಒಳ್ಳೆಯ ಆರಂಭ ಎನಿಸಿದ್ದಂತೂ ನಿಜ. ಏಕೆಂದರೆ ಕೆ.ವಿ. ಸುಬ್ಬಣ್ಣನವರ ಕಾಲದಿಂದಲೂ ನಾನು ಅವರಿಗೆ ನಿಮ್ಮ ರಸಗ್ರಹಣ ಶಿಬಿರಗಳಿಗೆ ಕನ್ನಡ ಮತ್ತು ಇತರ ಭಾಷೆಗಳ ಪ್ರಧಾನ ಲಹರಿಯ ಚಿತ್ರಗಳನ್ನು ಪರಿಚಯಿಸಿ ಎಂದು ಹೇಳುತ್ತಲೇ ಇದ್ದೆ. ಆದರೆ ಸುಬ್ಬಣ್ಣ ರಷ್ಯಾ, ಇಟಲಿ, ಪೋಲೆಂಡ್ ಇತ್ಯಾದಿ ದೇಶಗಳ ಸಿನಿಮಾಗಳ ವ್ಯಾಕರಣ ಪಾಂಡಿತ್ಯದಲ್ಲಿ ಮುಳುಗಿಹೋಗಿ ನಮ್ಮಂತಹ ಸಾಮಾನ್ಯರ ಮಾತುಗಳನ್ನು ಆಲಿಸುವ ಸ್ಥಿತಿಯಲ್ಲಿರಲಿಲ್ಲ. ಇನ್ನು ಬಾನು ಮುಷ್ತಾಕ್ ಮತ್ತು ಜಯಂತ ಕಾಯ್ಕಿಣಿ ಅವರು ಭಾಗವಹಿಸಿದ್ದ ಕಥಾನುಭವ ಗೋಷ್ಠಿಯಲ್ಲಿ ಬಾನು ಅವರ ಸ್ತ್ರೀ ಅದೂ ಮುಸ್ಲಿಂ ಸ್ತ್ರೀಯ ಸಂಕಟಗಳ ಪುನರಾವರ್ತಿತ ನಿವೇದನೆ ವೇದನೆಯನ್ನಷ್ಟೇ ಉಂಟು ಮಾಡಿದರೆ ಸಿದ್ಧತೆ ಇಲ್ಲದಂತೆ ಚೆಲ್ಲಾಪಿಲ್ಲಿಯಾಗಿ ಮಾತನಾಡಿದ ಜಯಂತ್ ಮಾತುಗಳಲ್ಲಿ ಅಲ್ಲಲ್ಲಿ ಮಿಂಚು ಕಾಣಿಸಿಕೊಂಡಿತಾದರೂ, ಒಟ್ಟು ಪರಿಣಾಮದಲ್ಲಿ ಅದು ಬಹು ಎಳಸು ಎಳಸಾದ ಪ್ರಶ್ನೋತ್ತರಗಳಿಗೆ ಕಾರಣವಾಗಿ ಸುಸ್ತು ಹೊಡೆಸಿತು.

ಬಹು ಕುತೂಹಲ ಕೆರಳಿಸಿದ್ದ ಟಿ.ಎಂ. ಕೃಷ್ಣರ ಕರ್ನಾಟಕ ಸಂಗೀತ ಪ್ರಾತ್ಯಕ್ಷಿಕೆ ಮುತ್ತುಸ್ವಾಮಿ ದೀಕ್ಷಿತರ ಮಾಯಾಮಾಳವಗೌಳ ರಾಗದ ಕೃತಿಯೊಂದರ ಮೈಮರೆಸುವಂತಹ ಸಮೂಹ ಗಾಯನದೊಂದಿಗೆ ಆರಂಭವಾಯಿತಾದರೂ ನಂತರ ಬಹುಭಾಗ ಶಿಬಿರದಲ್ಲಿ ಟಿಸಪಿಸನೆ ಇಂಗ್ಲಿಷ್ ಮಾತಾಡುವ ಜನರೊಡನೆಯ ಸಂವಾದವಾಗಿ ಮಾರ್ಪಾಟಾಗಿ ಸಂಗೀತದಲ್ಲಿ ವಿಶೇಷಜ್ಞತೆ ಏನೂ ಇಲ್ಲದ ಹೆಚ್ಚಿನ ಶಿಬಿರಾರ್ಥಿಗಳ ಕಕ್ಕಾಬಿಕ್ಕಿಗೆ ಕಾರಣವಾಯಿತು. ಕೃಷ್ಣ ಅಂತಹ ಒಳ್ಳೆಯ ಗಾಯಕರಲ್ಲವೆಂಬ ಈವರೆಗಿನ ನನ್ನ ಅಭಿಪ್ರಾಯ ಅಂದು ಸ್ವಲ್ಪಮಟ್ಟಿಗೆ ಬದಲಾಯಿತಾದರೂ, ಅವರ ಮಾತುಗಾರಿಕೆಯ ಉತ್ಸಾಹ ಅವರ ವ್ಯಕ್ತಿತ್ವಕ್ಕೆ ಅನುಚಿತವಾದದ್ದು ಎಂದು ಎನಿಸಿದ್ದೂ ನಿಜ.

ಇದಕ್ಕೆ ಮುಂಚಿನ ಗೋಷ್ಠಿಯಲ್ಲಿ, ಈಗ ನೀನಾಸಂನ ನಿಲಯದ ಕಲಾವಿದರೇ ಆಗಿ ಹೋಗಿರುವ ಸುಂದರ ಸಾರುಕ್ಕೈ ಮತ್ತು ಗೋಪಾಲ್ ಗುರು ಎಷ್ಟೇ ಹಸನ್ಮುಖರಾಗಿ ಮಾತಾಡಿದರೂ ಶಿಬಿರಾರ್ಥಿಗಳನ್ನು ಹಸನ್ಮುಖಿಗಳನ್ನಾಗಿ ಮಾಡುವಲ್ಲಿ ಮಾತ್ರ ಯಶಸ್ವಿಯಾಗಲಿಲ್ಲ! ಅಥವಾ ತಮ್ಮ ಭಾಷಣಗಳ ಸಾಮಾನ್ಯತೆಯನ್ನು ಮುಚ್ಚಿಕೊಳ್ಳಲು ಆ ಮಹನೀಯರು ಹಸನ್ಮುಖಿಗಳಾಗಿದ್ದರೋ? ತಿಳಿಯದು!

ಇವಿಷ್ಟರ ಆಧಾರದ ಮೇಲೆ ಹೇಳುವುದಾದರೆ, ದೊಡ್ಡ ಸಂಖ್ಯೆಯಲ್ಲಿಯೇ ರಾಜ್ಯಾದ್ಯಂತದಿಂದ ಬರುವ ಶಿಬಿರಾರ್ಥಿಗಳಿಗೆ ಇನ್ನಷ್ಟು ದೃಷ್ಟಿ ಕೇಂದ್ರೀಕರಿಸಲ್ಪಟ್ಟ ಹಾಗೂ ಸಾಮಾನ್ಯ ಸೂಕ್ಷ್ಮತೆಯ ನೆಲೆಯ ಮತ್ತು ಹೆಚ್ಚಾಗಿ ಕನ್ನಡದಲ್ಲಿ ನಡೆಯಬಹುದಾದ ವಿಷಯ ಮತ್ತು ಸಂಪನ್ಮೂಲ ವ್ಯಕ್ತಿಗಳ ಆಯ್ಕೆಯ ಅಗತ್ಯವಿದೆ ಎನ್ನಿಸುತ್ತದೆ. ಈಗ ಇರುವ ಸ್ವರೂಪದಲ್ಲಿ ಅದು ಕೆಲ ಆಯ್ದ/ಆಹ್ವಾನಿತ (ಇಂಗ್ಲಿಷ್) ಶಿಕ್ಷಿತ ಶಿಬಿರಾರ್ಥಿಗಳ ಬೌದ್ಧಿಕ ವಿಹಾರದ ವೇದಿಕೆಯಾಗಬಹುದಷ್ಟೆ. ಹಿಂದಿನ ದಿನದ ನಾಟಕಗಳ ಕುರಿತ ಚರ್ಚೆಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳ ಉತ್ಸಾಹ ನೋಡಿದರೆ ನನ್ನ ಮಾತು ಇನ್ನಷ್ಟು ಸ್ಪಷ್ಟವಾಗಬಹುದು.

ಇನ್ನು ಶಿಬಿರದ ಭಾಗವಾಗಿ ನಡೆದ ನಾಟಕಗಳ ಬಗ್ಗೆ ಹೇಳುವುದಾದರೆ, ನಾನು ಮೊದಲೆರಡು ಸಂಜೆಗಳ ಈ ವರ್ಷದ 'ತಿರುಗಾಟ'ದ ನಾಟಕಗಳನ್ನು ನೋಡಿದೆ. ಮೊದಲ ಸಂಜೆಯ ನಾಟಕ ಗಿರೀಶ್ ಕಾರ್ನಾಡರ ಕೊನೆಯ ನಾಟಕ 'ರಾಕ್ಷಸ-ತಂಗಡಿ'. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣವಾದ ರಕ್ಕಸ ತಂಗಡಿ ಯುದ್ಧದ ಹಿಂದಿನ ರಾಜಕಾರಣವನ್ನು ಹೇಳುವ ಈ ನಾಟಕದ ಒಳಗೆ ಒಂದು ತುಡಿಯುವ ಜೀವವಿಲ್ಲದ ಕಾರಣ ನಿರ್ದೇಶಕ ಬಿ.ಆರ್ ವೆಂಕಟರಮಣ ಐತಾಳರು ಅದನ್ನು ಒಂದು ನಾಟಕವಾಗಿ ದರ್ಶನೀಯಗೊಳಿಸಲು ಮಾಡಿರುವ ಪ್ರಯತ್ನಗಳೆಲ್ಲವೂ ನೆಲಕ್ಕೆ ಮಗುಚಿಕೊಂಡಿವೆ. ದೃಶ್ಯಾಂತರಗಳ ನಡುವೆ ಬಳಸಿರುವ ಆದೀಲ್ ಶಾನ ಹಿಂದೂ ದೇವತಾಸ್ತುತಿಗಳಾಗಲೀ ಅಥವಾ ಕನ್ನಡದ ಪದಗಳಾಗಲೀ ನಾಟಕಕ್ಕೊಂದು ದಿಕ್ಕು ಒದಗಿಸಲು ನೆರವಾಗಲಿಲ್ಲ. ಬದಲಿಗೆ ಅನಗತ್ಯ ಬಾಯಿಬಡುಕತನ ಮಾತ್ರವೆನಿಸಿತು. ಏಕೆಂದರೆ ಆದಿಲ್ ಶಾನ ಧಾರ್ಮಿಕ ಉದಾರತನ ನಾಟಕದಲ್ಲೆಲ್ಲೂ ಸಾಕ್ಷೀಕರಿಸಲ್ಪಟ್ಟಿಲ್ಲ. ನಾಟಕ ಸೃಷ್ಟಿಯಾಗಬೇಕಾಗಿದ್ದುದು ಬಿಜಾಪುರದ ಸುಲ್ತಾನ ತಾನು ತಂದೆಯಾಗಿ ಸ್ವೀಕರಿಸಿದ್ದ ರಾಮರಾಯನ ವಿರುದ್ಧವಾಗಲು ಉದ್ಭವವಾಗುವ ಕಾರಣಗಳ ರಾಜಕಾರಣದಲ್ಲಿ. ಹಾಗೇ ರಾಮರಾಯನ ದೊರೆ ಗುಣದ ಸಂಕೀರ್ಣತೆಯಲ್ಲಿ. ಆದರೆ ಅವು ವ್ಯಕ್ತವಾಗಬೇಕಾದ ಅವರ ಒಳತೋಟಿಗಳಿಗೆ ಅವಕಾಶವೇ ಇಲ್ಲದೆ ಇಡೀ ನಾಟಕ ಸುಲಭ ಮಾತುಗಾರಿಕೆಯ ತೆಳು ದೃಶ್ಯಗಳಾಗಿ ಕಟ್ಟಲ್ಪಟ್ಟಿದ್ದು ಅದು ಅದರ ಸೊಂಟ ಮುರಿದು ಕೂರಿಸಿದಂತಾಗಿದೆ. ಈ ಕಾರಣದಿಂದಾಗಿ ನಂತರದ ಯುದ್ಧ ದೃಶ್ಯಗಳು ಕಾಲೇಜು ನಾಟಕಗಳ ಮಟ್ಟಕ್ಕೆ ಇಳಿದು ಹಾಸ್ಯಾಸ್ಪದವಾಗಿ ಕಾಣುತ್ತವೆ. ಹೀಗಾಗಿ ನಾಟಕದ ಒಟ್ಟು ದುರಂತ ಸ್ಫುಟವಾಗಿ ಮೂಡದೇ ಹೋಗಿ ಮಹಾಸಾಮ್ರಾಜ್ಯವೊಂದರ ಪತನದ ಕಥೆ ಯಾವ ವಿಷಾದವನ್ನೂ ಮೂಡಿಸದ ಟೊಳ್ಳು ಆವೇಶದ ಮಾತುಗಳ ಆಟವಾಗಿ ಮುಕ್ತಾಯಗೊಳ್ಳುತ್ತದೆ.. ಎಲ್ಲ ಮುಗಿದ ನಂತರ ನಾಟಕಕ್ಕೊಂದು ನೀನಾಸಂಗೇ ವಿಶಿಷ್ಟವಾದ ಷರಾ ಬರೆಯಲು ಹಾಡುವ ದಾಸರ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂಬ ಹಾಡು ಇಡೀ ನಾಟಕದ ಸೋಲನ್ನು ಮರೆಮಾಚುವ ಹಾಡಾಗಿ ಮಾತ್ರ ಕೇಳಿಸುತ್ತದೆ. ಇನ್ನು ಕಾರಣವಿಲ್ಲದೆ ಕಪಾಳಕ್ಕೆ ಬಾರಿಸಿದಂತೆ ಕೇಳಿಸಿ ಬೆಚ್ಚಿಬೀಳಿಸುವ ಮಿಳಾವ್‌ನ ಅಬ್ಬರ ಈ ನಾಟಕದ ಸಂಗೀತದ ರುಚಿಯನ್ನೇ ಕೆಡಿಸಿದೆ ಎಂಬುದನ್ನೂ ಇಲ್ಲಿ ಹೇಳಬೇಕು.

ಇನ್ನು ಎರಡನೆಯ ಸಂಜೆಯ ನಾಟಕ 'ಕರ್ಣ ಸಾಂಗತ್ಯ'ವು ಕುಮಾರವ್ಯಾಸ ಭಾರತ, ಪಂಪ ಭಾರತ, ಜನಪದ ಮಹಾಭಾರತ, ಯಕ್ಷಗಾನ ಪ್ರಸಂಗ ಇತ್ಯಾದಿ ಮೂಲಗಳಿಂದ ಆಯ್ದು ರಚಿಸಿದ್ದೆಂದು ಹೇಳಲಾದ ಕರ್ಣ ಪುರಾಣ. ಈ ರಚನೆ ಇದನ್ನು ನಿರ್ದೇಶಿಸಿದ ಗಣೇಶ ಮಂದರ್ತಿಯವರದ್ದೇ. ಆದರೆ ಕರ್ಣ ಪ್ರಸಂಗಗಳ ಈ ಸಂಕಲನದ ವಿನ್ಯಾಸ ಕೊನೆಗೆ ಕರ್ಣನ ಜನ್ಮಾಂತರ (ಡಂಡೋದ್ಭವ?) ಕರ್ಮದ ಪುರಾಣ ಕಥೆಯಂತೆ ನಿರೂಪಿಸಲ್ಪಟ್ಟು ಒಟ್ಟಾರೆ ನಾಟಕ ಸ್ಥೂಲವಾಗಿ ಕುಮಾರವ್ಯಾಸನ



ಕೃಷ್ಣ ಕಥೆಯ ದುರ್ಬಲ ಛಾಯೆಯಾಗಿ ಮೂಡಿ ತನ್ನ ಘೋಷಿತ 'ಸಾಂಗತ್ಯ'ವನ್ನು ಕಳೆದುಕೊಳ್ಳುತ್ತದೆ. ಪಂಪ ಭಾರತದ 'ಕರ್ಣ ರಸಾಯನ' ನೆಪಮಾತ್ರಕ್ಕೆ ಇಲ್ಲಿ ಇದ್ದಂತಿದ್ದು ಜನಪದ ಭಾರತವನ್ನಂತೂ ಹಾಸ್ಯರಸ ಉತ್ಪತ್ತಿಗಾಗಿ ದುರ್ಬಳಕೆ ಮಾಡಿಕೊಂಡಂತಿದೆ. ಹೀಗಾಗಿ ಇಡೀ ನಾಟಕವನ್ನು ಹಿಡಿದು ನಿಲ್ಲಿಸಬೇಕಾಗಿದ್ದ ಕರ್ಣ ಕಥೆಯ ದುರಂತ ನಾಟಕ ರಚನಾ ವಿನ್ಯಾಸದಲ್ಲಿನ ಸಡಿಲ ಬಂಧ, ರಸಿಕರ ಬುದ್ಧಿಮತ್ತೆಯನ್ನು ಅನುಮಾನಿಸಿ ಎಲ್ಲವನ್ನೂ ವಾಚ್ಯವಾಗಿಯೇ ಹೇಳುವ ಹಠ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಮಹಾಭಾರತದ ಸಂಕಥನದುದ್ದಕ್ಕೂ ನೋವಿನ ಎಳೆಯಾಗಿ ಕಾಡುತ್ತಾ ಜಗತ್ತಿನ ಸಾಹಿತ್ಯದ ಅತ್ಯಂತ ಸಂಕೀರ್ಣ ಪಾತ್ರವಾಗಿ ನೈತಿಕತೆಯನ್ನು ಕುರಿತಂತೆ ಹಲವು ಪ್ರಶ್ನೆಗಳನ್ನೆತ್ತುವ ಕರ್ಣ ಪ್ರಸಂಗ ಇಲ್ಲಿ ಸರಳರೇಖಾತ್ಮಕ ನಿರೂಪಣೆಯಲ್ಲಿ ಕುಣಿ ಕುಣಿದು ದಣಿದು ಪ್ರೇಕ್ಷಕರನ್ನೂ ದಣಿಸುತ್ತದೆ. ನಿರ್ದೇಶಕರು ಕರ್ನಾಟಕ ಮತ್ತು ಕೇರಳಗಳ ಕರಾವಳಿ ಪ್ರದರ್ಶನ ಕಲೆಗಳಲ್ಲಿ ಪರಿಣತರಿರುವ ಕಾರಣ ಕಥೆಯ ಮೇಲಿನ ಅವುಗಳ ಸವಾರಿಯೂ ಇದಕ್ಕೆ ಕಾರಣವಾಗಿದ್ದಂತಿದೆ. ಆದರೆ ಮೊದಲ ಸಂಜೆಯ ನಾಟಕಕ್ಕೆ ಹೋಲಿಸಿದರೆ ಇದರ ಸಂಗೀತ ನಿರ್ವಹಣೆ ಹದವಾಗಿದೆ.

ನೀನಾಸಂ ರಂಗಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದ ನಟನಟಿಯರು, ತಂತ್ರಜ್ಞರು ರಂಗ ಕಲೆಯ ಎಲ್ಲ ಆಯಾಮಗಳಲ್ಲಿ ನುರಿತವರು. ಹಾಗಾಗಿ ಅಭಿನಯ, ಬೆಳಕು, ರಂಗಸಜ್ಜಿಕೆ ಇತ್ಯಾದಿಗಳ ದೃಷ್ಟಿಯಿಂದ ಈ ಎರಡೂ ನಾಟಕಗಳು ನೋಡಲು ಅರ್ಹವೇ ಆಗಿದ್ದರೂ, ಮೂಲ ಪಠ್ಯದ ದೋಷಗಳು ಮತ್ತು ಅತಿಗಳು ಹಾಗೂ ನಿರ್ದೇಶಕರು ಅವನ್ನು ಮೀರುವ ಉತ್ಸಾಹದಲ್ಲಿ ಮಾಡಿಕೊಂಡಿರುವ ಅವಾಂತರಗಳು ಪ್ರದರ್ಶನಗಳ ಹದ ತಪ್ಪಿಸಿವೆ. ಕಳೆದ ಬಾರಿಯ ಶಿಬಿರದ ನಾಟಕಗಳ ಬಗ್ಗೆ ಬರೆಯುತ್ತಾ ಹೇಳಿದ ಮಾತನ್ನೇ ಪುನರಾವರ್ತಿಸುವುದಾದರೆ, ನೀನಾಸಂಗೆ ಕರಾವಳಿ ರಂಗ ಕಲೆಗಳು ಅದರ ಶಕ್ತಿಯಾಗದೆ, ಅವುಗಳ ಅತಿ ಬಳಕೆಯಿಂದ ದೌರ್ಬಲ್ಯವಾಗಿ ಕಾಣತೊಡಗಿವೆ. ಆಧುನಿಕ ಕನ್ನಡ ರಂಗಭೂಮಿ ಕರಾವಳಿ ಕಲೆಗಳ ಜೊತೆಗೇ ಇತರ ಅನೇಕ ಶಿಷ್ಟ ಮತ್ತು ಜನಪದ ಕಲೆಗಳನ್ನು ದುಡಿಸಿಕೊಳ್ಳುವ ಸಾಧ್ಯತೆಗಳನ್ನು ಪರಿಶೀಲಿಸಬೇಕಿದೆ. 'ರಾಕ್ಷಸ–ತಂಗಡಿ'ಯಂತಹ ಬಯಲು ಸೀಮೆ ಕಥೆಯಲ್ಲಾದರೂ ಈ ಸಾಧ್ಯತೆಗಳ ಪ್ರಯೋಗ ಮಾಡಬಹುದಿತ್ತು. ಜೊತೆಗೆ ನೀನಾಸಂ ಎಲ್ಲ ನಾಟಕಗಳನ್ನೂ ಕೊನೆಗೆ ದಾರ್ಶನೀಕರಿಸುವ ನಾಟಕದ ಹೊರಗಿನ ಪ್ರಯತ್ನವನ್ನು ಕೈಬಿಟ್ಟು, ತಾಕತ್ತಿದ್ದರೆ ಆ ನಾಟಕವೇ–ಅದರ ಪ್ರದರ್ಶನವೇ–ಅದನ್ನು ಮಾಡಲು–ಬಿಡಬೇಕು.

## ವಾರ್ತಾ ಇಲಾಖೆಯ 'ಪಾಪು-ಬಾಪು'



**ನಾ**ಟಕಗಳ ಬಗ್ಗೆ ಬರೆಯುತ್ತಿರುವ ಈ ಸಂದರ್ಭದಲ್ಲಿಯೇ ನಾನು ಇತ್ತೀಚೆಗೆ ನೋಡಿದ–ನಿಜ ಹೇಳಬೇಕೆಂದರೆ ಭಾಗಶಃ ಮಾತ್ರ ನೋಡಿದ–ನಾಟಕವೊಂದರ ಬಗ್ಗೆಯೂ ಬರೆಯುವುದು ಉಚಿತವೇನೋ. ನಾನು ಈ ನಾಟಕವನ್ನು ಭಾಗಶಃ ಮಾತ್ರ ನೋಡಲು ಕಾರಣ ಅದನ್ನು ಪೂರ್ತಿ ನೋಡಲು ಮನಸ್ಸು ಬಾರದಿದ್ದುದು. ಅದು ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆ ಪ್ರಾಯೋಜಿಸಿರುವ ಬೊಳುವಾರರ ಕಾದಂಬರಿ ಆಧರಿಸಿ ಶ್ರೀಪಾದ ಭಟ್ಟರು ನಿರ್ದೇಸಿರುವ 'ಪಾಪು–ಬಾಪು' ನಾಟಕ. ಸರ್ಕಾರದ ಖರ್ಚಿನಲ್ಲಿ ತಯಾರಾಗಿ ಪ್ರದರ್ಶಿತವಾಗುತ್ತಿರುವ ಈ ಪ್ರಯೋಗ ಈವರೆಗೆ ನೂರಾರು ಪ್ರದರ್ಶನಗಳನ್ನು ಕಂಡಿದೆ ಎಂದರೆ ಅಷ್ಟರಮಟ್ಟಿಗೆ ಈ ನಾಟಕದ ವಸ್ತುವಾದ ಗಾಂಧಿ ಚಿತ್ರ ಅಷ್ಟರಮಟ್ಟಿಗೆ ಘಾಸಿಗೊಂಡಿದೆ ಎಂದೇ ಅರ್ಥ. ಗಾಂಧಿ ಬದುಕಿನ ಚಿತ್ರವನ್ನು ಒಂದೂ ಕಾಲು ತಾಸಿಗೆ ಇಳಿಸುವ ಶ್ರೀಪಾದ ಭಟ್ಟರ ರಂಗ ಪ್ರಯೋಗ ಅವರಿಗೆ ಪರಿಣಿತಿ ಇರುವ ನರ್ತನ ಮತ್ತು ಸಂಗೀತಗಳ ಮಧ್ಯೆ ಸಿಕ್ಕಿಹಾಕಿಕೊಂಡು ಹಾಸ್ಯಾಸ್ಪದವಾಗಿದೆ. ಬಾಲಕ ಗಾಂಧಿಯ ಚಿತ್ರಣ ಹಸಿ ಹಸಿ ಮಕ್ಕಳಾಟದಂತಿದ್ದರೆ, ಇಂಗ್ಲೆಂಡ್‌ಗೆ ಹೋದ ಗಾಂಧಿಯನ್ನು ಕಮಂಗಿಯಂತೆ ಚಿತ್ರಿಸುವ, ದ. ಆಫ್ರಿಕಾದಲ್ಲಿನ ನಿರ್ಣಾಯಕ ರೈಲು ಪ್ರಸಂಗವನ್ನು ನೂಕುಗಾಡಿಯೊಂದರ ಮೂಲಕ ನಿರೂಪಿಸುವ ಪ್ರಯತ್ನ ಬಹು ಬಡಕಲಾದ ರಂಗಕಲ್ಪನೆಗೆ ಉದಾಹರಣೆಗಳಂತೆ ಕಾಣುತ್ತವೆ. ಇನ್ನು ನೋಡಲಾಗದೆ ನಾನು ಎದ್ದು ಬಂದೆ. ಮುಂದೆ ನಾಟಕ ಚೆನ್ನಾಗಿದೆ ಎಂದು ಯಾರೂ ನನಗೆ ಹೇಳುವ ಅಗತ್ಯವಿಲ್ಲ.

ಈ ನಾಟಕ ತಂಡಕ್ಕೆ ಗಾಂಧಿ ವ್ಯಕ್ತಿತ್ವ ಪರಿಚಯಿಸಲು ಸರ್ಕಾರದ ಖರ್ಚಿನಲ್ಲಿ ನಾನೂ ಮತ್ತು ನನ್ನ ಪತ್ನಿ ನಾಟಕದ ಸಿದ್ಧತೆ ನಡೆದಿದ್ದ ಶೇಷಗಿರಿ ಗ್ರಾಮದವರೆಗೆ ಹೋಗಿ ಬಂದಿದ್ದೆವು. ಗಾಂಧಿಯ ಬಗ್ಗೆ ಒಂದಷ್ಟು ಪುಸ್ತಕಗಳನ್ನೂ ಕೊಟ್ಟು ಬಂದಿದ್ದೆವು. ಆದರೆ ಅದರ ಪ್ರಭಾವ ಇಲ್ಲಿ ಕಿಂಚಿತ್ತೂ ಕಾಣದೆ ನಮಗೆ ನಮ್ಮ ಬಗ್ಗೆಯೇ ವಿಷಾದವೆನಿಸುತ್ತಿದೆ.. ವಾರ್ತಾ ಇಲಾಖೆ ಈ ಕೂಡಲೇ ಈ ಪ್ರಯೋಗವನ್ನು ನಿಲ್ಲಿಸಿ ಗಾಂಧಿಯವರನ್ನು ಅಪದ್ಧ ನರ್ತನ–ಸಂಗೀತಗಳ ಬಲೆಯಿಂದ ಬಿಡಿಸಿ ಅವರನ್ನು ಅವರದೇ ಆದ ಗಾಂಭೀರ್ಯದೊಂದಿಗೆ ನಿರೂಪಿಸುವ ಹೊಸ ಪ್ರಯೋಗವೊಂದರ ಸಿದ್ಧತೆ ನಡೆಸಬೇಕು ಅಥವಾ ನಮ್ಮ ಸುರಕೋಡರು ಅನುವಾದಿಸಿರುವ ಅಸ್ಗರ್ ವಜಾಹತ್ ಅವರ 'ಗಾಂಧಿಗೆ ಸಾವಿಲ್ಲ' ನಾಟಕದ ಕಡೆ ಕಣ್ಣು ಹಾಯಿಸಬೇಕು.

## ಜಿ. ಕೆ. ರವೀಂದ್ರಕುಮಾರ್



**ಜಿ.**ಕೆ ರವೀಂದ್ರ ಕುಮಾರ್ ಅವರ ಅಕಾಲ ಮರಣ ಎಲ್ಲರಂತೆ ನನ್ನನ್ನೂ ಘಾಸಿಗೊಳಿಸಿದೆ. ಅವರು, ನಾನು ೮೦ರ ದಶಕದಲ್ಲಿ ಭದ್ರಾವತಿ ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕನಾಗಿದ್ದಾಗ ಅಲ್ಲಿ ಅವರು ಉದ್ಘೋಷಕರಾಗಿ ನೇಮಕವಾದವರು. ಒಳ್ಳೆಯ ಕಂಠಸಿರಿಯಿದ್ದ ಅವರು ನಮ್ಮ ಬಹು ಒಳ್ಳೆಯ ಉದ್ಘೋಷಕರಾಗಿದ್ದರಲ್ಲದೆ ಸಾಹಿತ್ಯ–ಸಂಸ್ಕೃತಿ ವಿಷಯಗಳಲ್ಲೂ ಆಸಕ್ತಿ ಹೊಂದಿ ನನ್ನ ಗಮನ ಸೆಳೆದಿದ್ದರು. ನಾನು ಭದ್ರಾವತಿ ಕೇಂದ್ರದಿಂದ ವರ್ಗಾವಣೆಯಾದ ನಂತರ ಅವರು ಕಾರ್ಯಕ್ರಮ ನಿರ್ವಾಹಕರಾಗಿ ಆಯ್ಕೆಯಾಗಿ ಎಷ್ಟೋ ವರ್ಷಗಳ ನಂತರ ಮೈಸೂರಿನಲ್ಲಿ ನಾನು ಸಹಾಯಕ ನಿರ್ದೇಶಕನಾಗಿದ್ದಾಗ ಮತ್ತೆ ನನ್ನ ಕಿರಿಯ ಸಹೋದ್ಯೋಗಿಯಾಗಿದ್ದರು. ಆಕಾಶವಾಣಿಗೆ ಹೇಳಿ ಮಾಡಿಸಿದ್ದಂತಿದ್ದ ಅವರ ವ್ಯಕ್ತಿತ್ವ ಆಕಾಶವಾಣಿ ಒಂದು ಜನಮಾಧ್ಯಮವಾಗಿ ಹಿನ್ನೆಲೆಗೆ ಸರಿದಂತೆ, ನಾನೂ ಸೇರಿದಂತೆ ಇಂತಹ ಹಲವರ ಶ್ರದ್ಧೆ ಮತ್ತು ಪರಿಶ್ರಮ ವ್ಯರ್ಥವಾಗುತ್ತಾ ಹೋದವು. ಈ ಸಂಗತಿಗೂ ಅವರ ಅಕಾಲಿಕ ಮರಣಕ್ಕೂ ಸಂಬಂಧವಿದೆ ಎಂದು ನಾನು ಭಾವಿಸಿದ್ದೇನೆ. ನಾನು ನನ್ನ ಸೇವಾವಧಿ ಇನ್ನೂ ಏಳು ವರ್ಷಗಳಿದ್ದಾಗಲೇ ಸ್ವಯಂ ನಿವೃತ್ತಿ ಪಡೆದು ಇನ್ನೂ ಬದುಕಿ ಉಳಿದುಕೊಂಡಿದ್ದೇನೆ.

ಅದೇನೇ ಇರಲಿ, ರವೀಂದ್ರಕುಮಾರ್ ಅವರ ಕಾವ್ಯ ಎಂದೂ ನನ್ನಲ್ಲಿ ಅಂತಹ ಉತ್ಸಾಹವನ್ನೇನೂ ಹುಟ್ಟಿಸಿರಲಿಲ್ಲ. ಅಸಂಗತ ಶಬ್ದಜಾಲದಂತಿರುತ್ತಿದ್ದ ಅವರ ಕವನಗಳು ಅವುಗಳ ಬೌದ್ಧಿಕ ಭಾವ ಭಂಗಿಗಳಿಗೆ ಮರುಳಾದವರ ಶಕ್ತಿ ದೌರ್ಬಲ್ಯಗಳಿಗೆ ತಕ್ಕಂತೆ ಅರ್ಥ ಹುಟ್ಟಿಸುತ್ತಿದ್ದರೆ ಆಶ್ಚರ್ಯವಿಲ್ಲ. ಆದರೆ ಇಂದು ನಮ್ಮ ಸಾಹಿತ್ಯಲೋಕದಲ್ಲಿನ ಹೊಸ ತಲೆಮಾರಿನ ಗುಂಪುಗಾರಿಕೆ ಇಂಥಹುದನ್ನೆಲ್ಲ ಸಮರ್ಥಿಸಲು ಸಾಹಿತ್ಯ ಸಂವೇದನೆ–ಸೂಕ್ಷ್ಮಗಳಿಗೆ ವಿಮುಖವಾದ ಹುಸಿ ವಿಮರ್ಶೆಯನ್ನು ನಿರ್ಮಿಸುತ್ತಿರುವುದು ದುರದೃಷ್ಟಕರ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೋಗತಿ



**ಹೊ**ಸ ಬಿಜೆಪಿ ಸರ್ಕಾರ ತನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯ ಅಕಾಡೆಮಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ ಪಟ್ಟಿ ನೋಡಿ ಕರ್ನಾಟಕದ ಇಡೀ ಸಾಂಸ್ಕೃತಿಕ ಲೋಕ ಕಕ್ಕಾವಿಕ್ಕಿಯಾಗಿದೆ. ಇದೊಂದು ರೀತಿಯಲ್ಲಿ ಸಿದ್ದರಾಮಯ್ಯ/ ಕುಮಾರಸ್ವಾಮಿ ಸರ್ಕಾರಗಳ ಇಂತಹ ನೇಮಕಾತಿಗಳಿಗೆ ಮುಯ್ಯಿಗೆ ಮುಯ್ಯಿ ವರಸೆಯಲ್ಲಿದ್ದಂತಿದ್ದು, ನಮ್ಮ ಸಾಂಸ್ಕೃತಿಕ ಲೋಕ ಇಂತಹ ರಾಜಕೀಯ ವರಸೆಗಳಿಗೆ ಸಿಕ್ಕಿ ತನ್ನ ಮಾನ–ಮರ್ಯಾದೆಗಳನ್ನೆಲ್ಲ ಕಳೆದುಕೊಳ್ಳುತ್ತಿರುವುದು ದುರದೃಷ್ಟಕರ. ಈ ಹಿಂದಿನ ನೇಮಕಾತಿಗಳಲ್ಲಿ ಸಾಮಾಜಿಕ ನ್ಯಾಯದ ಹೆಸರಿನಲ್ಲೋ, ಮತ್ತೊಂದರ ಹೆಸರಿನಲ್ಲೋ ಸ್ವಜನ ಪಕ್ಷಪಾತ ಇದ್ದಿತಾದರೂ ನೆಪಕ್ಕಾದರೂ ಸಾಂಸ್ಕೃತಿಕ ಕಾಳಜಿಯ ಸೋಂಕು ಅಲ್ಲಿ ಕಾಣುತ್ತಿತ್ತು. ಆದರೆ ಈ ಬಾರಿಯ ನೇಮಕಾತಿ ಸಂಪೂರ್ಣ ರಾಜಕೀಯ ನೇಮಕಾತಿಗಳಾಗಿದ್ದು, ಕಿಂಚಿತ್ತು ಸಾಂಸ್ಕೃತಿಕ ಮರ್ಯಾದೆ ಇದ್ದವರಾರೂ ಅತ್ತ ಸುಳಿಯದಂತಾಗಿದೆ. ಈ ಬಗ್ಗೆ ಇಲಾಖೆಯ ಸಚಿವರು ಆಡಿರುವ ಯಾವ ಮನೆಹಾಳರಿಗೂ ಇಲ್ಲಿ ಜಾಗವಿಲ್ಲ ಎಂಬ ಮಾತೇ ಈ ಇಲಾಖೆ ಈಗ ಮುಟ್ಟಿರುವ ಅಭಿರುಚಿಯ ಅಧೋಗತಿಯನ್ನು ಸೂಚಿಸುತ್ತಿದೆ. ಇವರ ಭಾರತೀಯ ಸಂಸ್ಕೃತಿಯ ಒಂದು ಝಳಕ್ ಇದಿರಬೇಕು!

**–ಡಿ.ಎಸ್. ನಾಗಭೂಷಣ**

**ಧರ್ಮವಿಚಾರ ಪುಟ**

# ಕನ್ನಡ ಧರ್ಮ : ಕೆಲ ನುಡಿ ಮುತ್ತುಗಳು

**–ಓ.ಎಲ್. ನಾಗಭೂಷಣ ಸ್ವಾಮಿ**



**ಕನ್ನಡ ನುಡಿಯನ್ನಾಡುವ ನಾಡಿನಲ್ಲಿ ಹಲವು 'ಧರ್ಮ'ಗಳು ಆಗಿ ಹೋಗಿವೆ, ಅದರಂತೆ ಕನ್ನಡ ನುಡಿಯೂ ಆ ಧರ್ಮಕ್ಕೆ ಬಾಯಿಯಾಗಿ ತನ್ನ ಶಕ್ತಿ ಸಂಪತ್ತನ್ನು ಹೆಚ್ಚಿಸಿಕೊಂಡಿರುವುದಲ್ಲದೆ, ಆ ನುಡಿಯನ್ನಾಡುವ ಜನಕೋಟಿಯ ಲೋಕದೃಷ್ಟಿಯನ್ನೂ ವಿಸ್ತರಿಸುತ್ತಾ, ಬಹುಳಗೊಳಿಸುತ್ತಾ, ಆ ಮೂಲಕ ಉದಾತ್ತಗೊಳಿಸುತ್ತಾ ಬಂದಿದೆ. ಈ ಪ್ರಕ್ರಿಯೆಯಲ್ಲಿ ಕನ್ನಡ ನುಡಿಯಲ್ಲಿ, ಕನ್ನಡ ಮನಸ್ಸಿನಲ್ಲಿ ಎರಕಗೊಂಡ ಒಂದು ವಿಶಿಷ್ಟ ಧರ್ಮವನ್ನೂ ಗುರುತಿಸಬಹುದು, ಅದನ್ನು ಇಲ್ಲಿ ನಾವು 'ಕನ್ನಡ ಧರ್ಮ' ಎಂದು ಕರೆದಿದ್ದೇವೆ.**

**ಕನ್ನಡದಲ್ಲಿ ಲಭ್ಯವಿರುವ ಮೊದಲ ಸಾಹಿತ್ಯ ಕೃತಿ 'ಕವಿರಾಜ ಮಾರ್ಗ'ದಿಂದ ಹಿಡಿದು ಆಧುನಿಕ ಕಾಲದ ಕುವೆಂಪು ಅವರ ಸಾಹಿತ್ಯದವರೆಗೆ ಹೊಮ್ಮಿರುವ ಈ 'ಕನ್ನಡ ಧರ್ಮ'ದ ಒಂದು ಪ್ರಾತಿನಿಧಿಕ ಚಿತ್ರ ಇಲ್ಲಿದೆ–ಸಂ.**

**'ಸುಖವಿದು, ದುಃಖವಿದು, ಹಿತಮಿದು, ಅಹಿತಮಿದು' ಎಂದು ತಿಳಿಸಿ ಹೇಳುವ 'ಕವಿ ವೃಷಭ'ರು ಕನ್ನಡದಲ್ಲಿ ಅನೇಕರಿದ್ದಾರೆ ಎನ್ನುತ್ತದೆ ಕವಿರಾಜಮಾರ್ಗ. ಧರ್ಮದ ನಿಜವಾದ ವ್ಯಾಖ್ಯಾನಕಾರರು ಕವಿಗಳೇ. ತನಗೂ ಲೋಕಕ್ಕೂ ಹಿತವಾಗುವ ಹಾಗೆ ಬದುಕುವ ಬಗೆಯೇ ಧರ್ಮ ಎಂಬ ತಿಳಿವಳಿಕೆಯನ್ನು ಕನ್ನಡ ಕವಿಗಳು ಹೇಳಿದ್ದಾರೆ. ಅಂಥ ಕೆಲವು ಮಾತು ಕನ್ನಡದ ಹಬ್ಬದ ಹೊತ್ತಿನಲ್ಲಿ ನೆನೆಯುವುದು, ಆ ಆಶಯಗಳನ್ನು ತಿದ್ದಿಕೊಳ್ಳುವ ನಿಶ್ಚಯ ಮಾಡುವುದು ಒಳ್ಳೆಯದು.**

೧. ಕ್ರಿಶ ೮೫೦ರ ಕವಿರಾಜಮಾರ್ಗ: 'ಅನ್ಯರ ವಿಚಾರವನ್ನೂ ಅನ್ಯರ ಧರ್ಮವನ್ನೂ ಸಹಿಸಿಕೊಳ್ಳುವುದಕ್ಕೆ ಸಾಧ್ಯವಾದರೆ ಅದೇ ಕಸವರ, ಅಥವಾ ಚಿನ್ನ. ಇಂಥ ಸಹನೆ ಇಲ್ಲದೆ ವರ್ತಿಸುವವರಿಗೆ ಕಸವೇನು, ಕಸವರವೇನು? ಉಬ್ಬಸಪಡುತ್ತ ಬದುಕುವವರು ಅವರು.' [ಪರಿಚ್ಛೇದ ೩. ೨೬]

೨. ಕ್ರಿಶ ೯೪೦: ಪಂಪ, 'ಹುಸಿಯನ್ನು ನುಡಿಯದೆ ಇರುವುದು, ಅನ್ಯ ಸ್ತ್ರೀಗೆ ಆಸೆಪಡದೆ ಇರುವುದು, ಕೊಲ್ಲದೆ ಇರುವುದು, ಮೋಹವಿಲ್ಲದೆ ಬದುಕುವುದು, ಅರಿವನ್ನು ಹೊಸತುಗೊಳಿಸುವುದು ಧರ್ಮ. ಇವಕ್ಕೆಲ್ಲ ತಡೆಯಾಗುವುದು ಅಧರ್ಮ.' ಆದಿಪುರಾಣ: [೫.೭೯]

೩. ಆದರ್ಶ ರಾಜ್ಯದ ವರ್ಣನೆಯಂತಿರುವ ಉತ್ತಮ ಭೋಗಭೂಮಿಯಲ್ಲಿ ಬಡವ ಕಡುಬಲ್ಲಿದ, ಆಳು–ಅರಸ ಎಂಬ ಭೇದಗಳು ಇರುವುದಿಲ್ಲ. [ಆದಿಪುರಾಣ ೫.೩೦]

೪. ಕ್ರಿಶ ೧೧೨೦: ಬಸವಣ್ಣ: ದಯವಿಲ್ಲದ ಧರ್ಮವದೇವುದಯ್ಯಾ/ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ./ ದಯವೇ ಧರ್ಮದ ಮೂಲವಯ್ಯಾ, ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ. [ಸಮಗ್ರ ವಚನ ಸಂ. ೧. ೨೪೭]

೫. 'ಒಲೆ ಹತ್ತಿ ಉರಿದರೆ ನಿಲಬಹುದು, ಧರೆ ಹೊತ್ತಿ ಉರಿದೊಡೆ ನಿಲ್ಲುವುದಕ್ಕಾಗುತ್ತದೆಯೇ? ಬೇಲಿಯೇ ಹೊಲವನ್ನು ಮೇಯ್ದರೆ, ಮನೆಯ ಹೆಂಗಸೇ ಮನೆಯಲ್ಲಿ ಕಳ್ಳತನ ಮಾಡಿದರೆ, ತಾಯಿಯ ಹಾಲು ವಿಷವಾದರೆ ಇನ್ನು ಯಾರಿಗೆ ದೂರು ಹೇಳಲಿ?' [೧.೨೬]

೬. ಕ್ರಿಶ ೧೨೦೦ರ ಸೋಮನಾಥನ ಶತಕ: ಹೊಟ್ಟೆಯೊಳಗೆ ಕೆಸರು ತುಂಬಿರುವಾಗ ಮೇಲೆ ತೊಳೆದರೆ ಶುದ್ಧವಾಗುತ್ತದೆಯೇ? ನಿರ್ಮಲ ಚಿತ್ತವೇ ಮಡಿ

೭. ಕ್ರಿಶ ೧೩೫೦–೧೪೦೧ ಕುಮಾರವ್ಯಾಸ: ಹಲವು ವರ್ಣದೊಳೆಸೆವ ಗೋ ಸಂ/ಕುಲದೊಳೊಂದೇ ವರ್ಣದಲಿ ಕಂ/ ಗೊಳಿಸುವೀ ಕ್ಷೀರಾಮೃತವು ಮೈಗೊಂಡು ತೋರ್ಪಂತೆ/ ಹೊಲಬುಗೆಟ್ಟ ಚರಾಚರಂಗಳ/ ಸುಳಿವಿನಲಿ ಸುಳಿದಡಗಿ ಕಡೆಯಲಿ/ ನಿಲುವ ನಿಜವೊಂದಲ್ಲದೆರಡಿಲ್ಲೆಂದನಾ ಮುನಿಪ

೮. ಒಂದು ವಸ್ತುವನೆರಡು ಮಾಡುವೆ/ನೆಂದು ಬುದ್ಧಿ ಭ್ರಾಂತಿಯಲಿ ಮನ/ ಸಂದು ಸಮ್ಯಗ್ಜ್ಞಾನದುದಯದ ನೆಲೆಯ ಕಾಣಿಸದೆ/ ದಂದುಗಂಬಡುತಿಹುದು ತತ್ವದ / ಹಿಂದುಮುಂದರಿಯದೆ ಮಹಾತ್ಮರು/ ಬಂದ ಪಥದಲಿ ಬಾರದೇ ಕೆಡುತಿಹುದು ಜಗವೆಂದ [ಸಭಾಪರ್ವ. ಸಂಧಿ ೪, ಪದ್ಯ ೧೩ ಮತ್ತು ೧೬]

೯. ಕ್ರಿಶ ೧೪೧೧ರ ಶಾಸನ: ವಿಜಯನಗರದ ಅರಸ ಪ್ರೌಢದೇವರಾಯನ ಮಂತ್ರಿಯಾಗಿದ್ದ ಲಕ್ಷ್ಮೀಧರಾಮಾತ್ಯನಿಗೆ ಆಕೆಯ ತಾಯಿ ಹೇಳಿದ ಪಾಠ: ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಮಂ ಮಾಡಿಸ/ಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್ ನಂಬಿದ/ವರ್ಗ್ಗೆರೆವಟ್ಟಾಗಿರು, ಶಿಷ್ಟರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ ತಾ/ ನೆರೆದಳ್ ಪಾಲೆರೆವೆಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ॥

೧೦. ೧೪೮೪–೧೫೬೪ ಪುರಂದರ ದಾಸ ವಿಷವಿಕ್ಕಿದವಗೆ ಷಡ್ ರಸವನುಣಿಸಲುಬೇಕು. ದ್ವೇಷಮಾಡಿದವನ ಪೋಷಿಸಲುಬೇಕು. ಹುಸಿಯಾಡಿ ಕೆಡಿಸುವನ ಹಾಡಿ ಹರಸಲು ಬೇಕು. ಮೋಸ ಮಾಡುವವನ ಹೆಸರ ಮಗನಿಗಿಡಬೇಕು. ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು. ಬಂಧನದೊಳಿಟ್ಟವರ ಬೆರೆಯಬೇಕು. ಕೊಂದ ವೈರಿಯ ಮನೆಗೆ ನಡೆದು ಹೋಗಲು ಬೇಕು. ಮುಂದೆಣಿಸುವವರ ಗೆಳೆತನ ಮಾಡಬೇಕು. ಕೊಂಡೊಯ್ದು ಬಡಿಯುವವರ ಕೊಂಡಾಡುತಿರಬೇಕು. ಕಂಡು ಸಹಿಸದವರ ಕರೆಯಬೇಕು.' ಇದು ಧರ್ಮದ ಜಯವೆಂಬ ದಿವ್ಯ ಮಂತ್ರ

೧೧. ಕ್ರಿಶ ೧೮೧೦ ಶಿಶುನಾಳ ಶರೀಫ: ದುಡ್ಡು ಕೆಟ್ಟದ್ದು ನೋಡಣ್ಣ – ದುಗ್ಗಾಣಿಗೆ / ದಡ್ಡನಾಗಬೇಡೋ, ತಿಂದೀ ನೀ ಮಣ್ಣ !/ ದುಡ್ಡು ಕೆಟ್ಟದ್ದೊ ಹೆಡ್ಡ ಮೂಢಾತ್ಮ/ ದೊಡ್ಡ ದೊಡ್ಡವರನ್ನೆ ಹೆಗ್ಗಾಲು ಇಡಿಸಿತು/ ದುಡ್ಡು ಕೆಟ್ಟದ್ದು ನೋಡಣ್ಣ/ ಹೆಣ್ಣಿನ ಪೂಜೆಗೆ ಇಳಿಸಿ – ಮಣ್ಣಿನ/ ಸಂತೇಲಿ ಇಲ್ಲದ ಮರ್ಯಾದೆ ಕೊಡಿಸಿ/ ಮಿಣ್ಣನೆ ತಿಂದೀತು ಒಳಗ – ಮೆಲ್ಲನೆ/ ಥಣ್ಣಗ ಮಾಡೀತು ಬೆಂಕಿಯ ಕಿಡಿ./ ರೊಕ್ಕ ಮುಕ್ಕಿಸೀತು ಮಣ್ಣು – ಅದ/ ತಕ್ಕಂತೆ ಬಳಸಲು ತೆರೆಸೀತು ಕಣ್ಣು/ ಮುಕ್ಕುವ ಚಪಲ ಏಕಿನ್ನು – ಮುಕ್ಕಿ/ ಬಿಕ್ಕಳಿಸಲು ಕುಡಿಸೀತು ನೀರನ್ನು/ ಆಸೆ ಬಿದ್ದು ಮನದ ಮಾರಿ/ ಹೊಂಟ್ಯಳೊ ಹುಡುಕುತ್ತ ನೂರೆಂಟು ಕೇರಿ/ ಕಾಸು ಕಾಸನ್ನೂ ಹೆಕ್ಕಿ – ಮೂಳಿ /ಶಿಶುನಾಳಾಧೀಶನ ಮರೆತಾಳು ಸೊಕ್ಕಿ.

೧೨. ೧೯೦೪–೧೯೯೪ ಕುವೆಂಪು : ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?/ ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?/ ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?/ ನಿನ್ನದೆಯ ದನಿಯೆ ಋಷಿ /ಮನು ನಿನಗೆ ನೀನು!

ಎದೆಯ ದನಿ ಧರ್ಮ ನಿಧಿ! ಕರ್ತವ್ಯವದುವೆ ವಿಧಿ!/ ನಂಬದನು; ಅದನುಳಿದು ಋಷಿಯು ಬೇರಿಲ್ಲ! / ನಮ್ಮ ಹೃದಯವೆ ನಮಗೆ ಶ್ರೀ ಧರ್ಮ ಸೂತ್ರ! [೧೯೩೧ ಕೋಗಿಲೆ ಮತ್ತು ಸೋವಿಯೆತ್ ರಶಿಯಾ ಸಂಕಲನದಿಂದ]

ಧರ್ಮವೆನ್ನುವುದು ನಿಂತ ನೀರಲ್ಲ. ಸದಾ ಹೊಸತಾಗಬಲ್ಲ ಮನುಷ್ಯನ ಅರಿವಿನ ಸಾಮರ್ಥ್ಯ, ಅನ್ಯರ ವಿಚಾರವನ್ನೂ ಅಭಿಪ್ರಾಯವನ್ನೂ ಸಹಿಸಿಕೊಳ್ಳುವ ಚಿನ್ನದಂಥ ಗುಣ, ನಿಸರ್ಗದ ಕಟ್ಟಳೆಗೆ ಅನುಗುಣವಾಗ ಬದುಕುತ್ತ ಎಲ್ಲ ಜೀವರಾಶಿಗಳನ್ನೂ ದಯೆಯಿಂದ ಕಾಣುವ ಮನೋಧರ್ಮ, ಸಾಮಾಜಿಕ ವರ್ತನೆಯಲ್ಲಿ ಇತರರ ಹಿತಕ್ಕಾಗಿ ಬದುಕುವ ರೀತಿ, ತನ್ನ ಅಧಿಕಾರವನ್ನ ಬಳಸಿಕೊಂಡು ನೆಲ ಹೊತ್ತಿ ಉರಿಯುವಂತ ಮಾಡದಿರುವ, ತನ್ನಲ್ಲಿ ಸುತ್ತಲ ಜನ ಇಟ್ಟ ನಂಬಿಕೆಯನ್ನು ಹುಸಿಮಾಡದ ಜವಾಬ್ದಾರಿ, ಶುಚಿಯಾದ ಮನಸು.

ಕುವೆಂಪು: ನೂರು ಮತದ ಹೊಟ್ಟ ತೂರಿ ಎಲ್ಲ ತತ್ವದೆಲ್ಲೆ ಮೀರಿ/ ನಿರ್ದಿಗಂತವಾಗಿ ಏರಿ/ ಓ ನನ್ನ ಚೇತನ ಆಗು ನೀ ಅನಿಕೇತನ *(ಅನಿಕೇತನ: ೧೯೬೩)*

ಧರ್ಮವೆನ್ನುವುದು ವ್ಯಕ್ತಿಯೊಬ್ಬ ಸಾಧಿಸಿಕೊಳ್ಳಬೇಕಾದ, ಕಲಿಕೆಯ ಎಲ್ಲ ಭಾರಗಳಿಂದ ಮುಕ್ತಗೊಂಡ ನಿರ್ಮಲ ಹೃದಯವಂತಿಕೆ, ದೃಷ್ಟಿ, ನಿಲುವು ಹೇಗೋ ಹಾಗೆಯೇ ನಿಸರ್ಗದ ಋತವನ್ನು ಮೀರದ ಬದುಕಿನ ರೀತಿಯೂ ಹೌದು. ಸಹನೆ, ಸಮಾನತೆ, ದಯೆ, ಕರುಣೆಗಳ ಗುಣವೂ ಹೌದು. ಧರ್ಮ ಪದದ ಬೇರಿನ ಅರ್ಥ ಸಹಿಸುವುದು, ಧರಿಸುವುದು. ಅದನ್ನು ಮತದೊಡನೆ, ಜಾತಿಯೊಡನೆ ಸಮೀಕರಿಸಿ, ಬೆರೆಸಿ, ಧರ್ಮದ ಗೋಜಲು ವ್ಯಾಖ್ಯಾನ ಸೃಷ್ಟಿಸಿ, ದ್ವೇಷಕಾರಣ ಪ್ರೇರಿತ ರಾಜಕಾರಣಕ್ಕೆ ಬಳಸುವುದು ಧರ್ಮವಲ್ಲ. ಕನ್ನಡ ಮನಸು ಹಾಗೆಂದೂ ಹೇಳಿಲ್ಲ.



**(ಮೈಸೂರಿನಲ್ಲಿ ವಾಸಿಸುವ ಓ.ಎಲ್ ನಾಗಭೂಷಣ ಸ್ವಾಮಿಯವರು ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯಗಳೆರಡರಲ್ಲೂ ವಿದ್ವತ್ತನ್ನು ಹೊಂದಿದವರು. ನಮ್ಮ ಮುಖ್ಯ ವಿಮರ್ಶಕ ಮತ್ತು ಅನುವಾದಕರು ಕೂಡ.)**

# ಪುಸ್ತಕವಲೋಕನ

ಪು: **ಗಾಂಧಿ ಕಥನ** (ಮಹಾತ್ಮ ಗಾಂಧಿಯವರ ಬದುಕಿನ ಒಂದು ಸಮಗ್ರ ನಿರೂಪಣೆ) ಲೇ: **ಡಿ.ಎಸ್. ನಾಗಭೂಷಣ** ಪ್ರ: **ಎಂ. ಮೂನಿಸ್ವಾಮಿ ಅಂಡ್ ಸನ್ಸ್**, ಬೆಂಗಳೂರು (೯೮೪೫೦ ೧೨೬೪೦) ಪು: **೭೧೩ ಬೆಲೆ: ರೂ. ೬೦೦/–**

## ಗಾಂಧಿ ಧ್ಯಾನದಿಂದಲೇ ಹುಟ್ಟಿದ ಗಾಂಧಿ ಸಮಗ್ರ ಚಿತ್ರ




**ಈ** ಒಂದು ವಾರದಿಂದ ಗೆಳೆಯ ಡಿ.ಎಸ್.ಎನ್ ಬರೆದ ಗಾಂಧಿ ಕಥನ ಓದುತ್ತಿದ್ದೇನೆ. ಮೂರು ಹೆಜ್ಜೆಗಳಲ್ಲಿ, ೯೩ ಶೀರ್ಷಿಕೆಗಳ ಮೂರು ಹೆಜ್ಜೆ ಗುರುತುಗಳಲ್ಲಿ, ೫೭೩ ಉಪಶೀರ್ಷಿಕೆಗಳಲ್ಲಿ, ಲೇಖಕನ ಮಾತು ಮತ್ತು ಗಾಂಧಿ ಚಿತ್ರ ಸಂಪುಟವು ಸೇರಿದಂತೆ ಏಳುನೂರಕ್ಕೂ ಹೆಚ್ಚು ಪುಟಗಳಲ್ಲಿ ಹಬ್ಬಿಕೊಂಡಿರುವ ಮಹಾತ್ಮ ಗಾಂಧಿಯವರ ಬದುಕಿನ ಸಮಗ್ರ ನಿರೂಪಣೆಯಾಗಿರುವ ಈ ಉದ್–ಗ್ರಂಥ ನನ್ನನ್ನು ಆವರಿಸಿಕೊಂಡು ಬಿಟ್ಟಿದೆ. ನಮ್ಮ ರತ್ನಾಕರವರ್ಣಿ ತನ್ನ ಕಾವ್ಯವನ್ನು ಪ್ರಾರಂಭಿಸುವಾಗ– 'ಬಿನ್ನಹ ಗುರುವೇ, ಧ್ಯಾನಕ್ಕೆ ಬೇಸರಾದಾಗ ಕನ್ನಡದೊಳಗೊಂದು ಕಥೆ ಹೇಳುವೆ' ಎನ್ನುತ್ತಾ ಶುರು ಹಚ್ಚುತ್ತಾನೆ. ಕತೆ ಹೇಳುತ್ತ ಹೇಳುತ್ತ ಕಥನವೇ ಒಂದು ಧ್ಯಾನವಾಗಿಬಿಡುತ್ತದೆ. ಹಾಗಾಗಬೇಕೆಂಬುದೇ ಆಗಬೇಕೆಂಬುದು ಕವಿಯ ಬಿನ್ನಹ. "ಗಾಂಧಿ ಕಥನ" ದಲ್ಲಿ ಇಂಥದೊಂದು ಚಮತ್ಕಾರ ನಡೆದುಬಿಟ್ಟಿದೆ! ಅಂದರೆ ಕಥನದ 'ವಸ್ತು' ಮತ್ತು ಕಥನದ 'ರೀತಿ' ಒಂದರೊಳಗೊಂದು ಬೆರೆತು ಏಕವಾಗಿಬಿಟ್ಟಿದೆ. ಗಾಂಧಿ ಕಥನ ವನ್ನು ಓದುತ್ತ ಹೋದಂತೆ ಈ ಎರಕದ ಅನುಭವವೇ ಮೊದಲಾಗಿ ನಮಗುಂಟಾಗುವುದು.

ಅಂದರೆ ಗಾಂಧಿಯವರ ಚಿತ್ರ ಆರಾಧನಾ ಭಾವದಿಂದ ಬಾನೇರದಂತೆ, ವಿಮರ್ಶೆಯ ಉಳಿಯಿಂದ ಮೂರ್ತಿ ಭಂಜನೆಯೂ ಆಗದಂತೆ, ವರದಿ ಮಾತ್ರ ವಿವರಣೆಗಳಿಂದ ರಕ್ತ ಹೀನವು ಆಗದಂತೆ, ಸಾವಧಾನದ ಓದುಗರಿಗೆ ತಮ್ಮೊಳಗೇ ಅರ್ಥವಾಗುವಂತೆ, ತಮ್ಮದೇ ಪೂರ್ವಾಗ್ರಹಗಳ ತಿಕ್ಕಾಟದ ಒಳಗಿಂದಲೇ ಗಾಂಧಿ ಮೂರ್ತಿಯೊಂದು ಮೂಡಿಬರಲನುವಾಗುವಂತೆ –ಬಹು ಪರಿಶ್ರಮದಿಂದ ಬರೆದಿರತಕ್ಕ ಅಪೂರ್ವವಾದ ಬರಹವಿದು. ಗಾಂಧಿ, ತಮ್ಮನ್ನು ತಾವೇ ಹೇಗೆ ಕಡೆದುಕೊಂಡರೆನ್ನುವುದನ್ನು, ತಮ್ಮನ್ನು ತಾವೇ ಕೆತ್ತಿಕೊಳ್ಳುತ್ತಾ ಆ ಅಸಹನೀಯ ನೋವು ಮತ್ತು ಸ್ವ– ಆವಿಷ್ಕಾರದ ಸಂಭ್ರಮಗಳನ್ನು ಹೇಗೆ ಅನುಭವಿಸಿದರೆಂಬುದನ್ನು ಪಾರದರ್ಶಕವಾಗಿ ತೋರಿಸುತ್ತಿರುವ ಗ್ರಂಥವಿದು. ಪಾರದರ್ಶಕತೆಗೆ ವಿರೋಧಿಯಾದ ಎಲ್ಲ ಬಗೆಯ ವಾಗಾಡಂಬರಗಳನ್ನು ಕೈಬಿಟ್ಟ ಬರಹವಿದು. ಒಂದು ಮಾತಿನಲ್ಲಿ ಹೇಳಬೇಕೆಂದರೆ– ಉಪವಾಸ ಕೂರುತ್ತಾ, ಉಪವಾಸದಿಂದಲೇ ಪುಷ್ಟಿಗೊಳ್ಳುತ್ತ ಹೋಗುವ ಗಾಂಧಿ ವ್ಯಕ್ತಿತ್ವವನ್ನು ತೋರಿಸಬೇಕಾದ ಮಾತು ಹೇಗಿರಬೇಕು ಎಂಬುದನ್ನು ಪ್ರಜ್ಞಾಪೂರ್ವಕವಾಗಿ ಸಾಧಿಸಿಕೊಂಡ ಬರಹವಿದು.

ಎಲ್ಲೋ ಓದಿದ ನೆನಪಿದೆ. ಧ್ಯಾನಮಗ್ನ, ನಿರ್ವಾಣ ಸ್ಥಿತ ಬುದ್ಧನ ಮುಖ–ಮೂರ್ತಿ ಬೇಕೆಂದರೆ ಎಲ್ಲೆಡೆ ಕಾಣಸಿಗುತ್ತದೆ. ಅದು ಚಿರಪರಿಚಿತ. ಆದರೆ ಮೊದಲ ಬಾರಿಗೆ ಮನುಜರ ಬಾಳಲ್ಲಿ ಸಾವೆಂಬ ನಿಜವನ್ನು ತಿಳಿದಾಗ, ಒಮ್ಮೆಲೆ ಅಂತರಂಗವೇ ಉಲ್ಲೋಲಕಲ್ಲೋಲಗೊಂಡು ಕಂಗೆಟ್ಟು ಹೋದ ಸಿದ್ಧಾರ್ಥನ ಉದ್ವಿಗ್ನ ಚಿಂತಾಕ್ರಾಂತ ಮುಖದ ಕೆತ್ತನೆಯನ್ನು ಎಲ್ಲಿಯಾದರೂ ಕಾಣುವೆವೇನು? ಧ್ಯಾನಸ್ಥ ಮುಖವನ್ನು ಕೆತ್ತುವುದಕ್ಕಿಂತ ದೊಡ್ಡ ಸವಾಲು ಇದು. ಗಾಂಧಿ, ತನ್ನ ಬಾಳು ಪ್ರಯೋಗ ಎಂದುಕೊಂಡಾಗಲೇ, ತನ್ನನ್ನು ತಾನು ಎಲ್ಲರ ಮುಂದೆ ಕೆತ್ತಿಕೊಳ್ಳುತ್ತಾ, ತನ್ನ ಉದ್ವಿಗ್ನ ಮುಖವನ್ನು ಲೋಕಕ್ಕೆ ಕಾಣಿಸುತ್ತಾ, ಶಿಲ್ಪ ಮತ್ತು ಶಿಲ್ಪಿ ಒಂದೇ ಆಗಿ ಎರಕಗೊಳ್ಳುತ್ತ ಹೋದರು. ಇಂಥ ಗಾಂಧಿಯ ಬಾಳನ್ನು– ಅದು ಹೇಗೆ ನಡೆದಿದೆಯೋ ಹಾಗೆ – ತಮ್ಮ ವ್ಯಾಖ್ಯಾನವನ್ನು ಎಲ್ಲಿಯೂ ಹೇರದೇ, ಗಾಂಧಿ ಬಗ್ಗೆ ಬರೆದ ಇತರ ಲೇಖಕರ ವ್ಯಾಖ್ಯಾನವನ್ನು ಸೂಕ್ಷ್ಮ ಎಚ್ಚರಿಕೆಯಿಂದ ಗಮನಿಸಿ, ಎಚ್ಚರದಿಂದ ಆಯ್ಕೆ ಮಾಡಿ, ಡಿ.ಎಸ್.ಎನ್ ಇಲ್ಲಿ ಕಟ್ಟಿದ್ದಾರೆ. ಗಾಂಧಿಗೆ ಪ್ರಿಯವಾದ ಸಂಯಮದ ಮನೋಧರ್ಮವನ್ನು ಈ ಗ್ರಂಥದಲ್ಲಿ ಯಾರೂ ಗುರುತಿಸಬಹುದು. ಒಂದು ಉದಾಹರಣೆ ನೋಡಿ: ಡಿ .ಎಸ್. ಎನ್ ಶ್ರೀ ರಮಣ ಮಹರ್ಷಿಗಳ ಭಕ್ತರೆಂದು ಅವರನ್ನು ಬಲ್ಲ ಎಲ್ಲರಿಗೂ ಗೊತ್ತು. ಸಮಕಾಲೀನರಾಗಿದ್ದು, ಪರಸ್ಪರ ಗೌರವವಿದ್ದು, ರಮಣ ಮತ್ತು ಗಾಂಧಿ ಪರಸ್ಪರ ಭೇಟಿಯಾಗಿಲ್ಲ. ಇನ್ನೇನು ಭೇಟಿ ನಡೆಯುತ್ತದೆ ಎಂಬ ಸಂದರ್ಭವಿದ್ದೂ ಅದು ನಡೆಯಲಿಲ್ಲ. ಈ ಭೇಟಿ ಸಂಭವಿಸಬೇಕಿತ್ತು ಎಂದು ಡಿ.ಎಸ್.ಎನ್ ಹಂಬಲಿಸುತ್ತಾರೆ. ಏಕೆಂದರೆ ಗಾಂಧಿ, ರಮಣರಿಂದ ಅರಿಯಬಹುದಾಗಿದ್ದ ಆಂತರಿಕ ಸತ್ಯ ಒಂದಿತ್ತು ಎಂದು ಅವರು ಭಾವಿಸುತ್ತಾರೆ. ಆದರೆ ಭೇಟಿ ನಡೆಯಲಿಲ್ಲ. ಇದೊಂದು ವಿಧಿವಿಲಾಸವೆಂದೇ ಡಿ.ಎಸ್.ಎನ್ ಹೇಳುತ್ತಾರೆ. ಆಶ್ಚರ್ಯವೆಂದರೆ ಎಲ್ಲ ಮಾತುಗಳನ್ನು ತಮ್ಮ 'ಲೇಖಕನ ಮಾತುಗಳಲ್ಲಿ' ಹೇಳಿದ್ದಾರಲ್ಲದೆ ಗ್ರಂಥದಲ್ಲಿ ಈ ಬಗ್ಗೆ ಒಂದೇ ಒಂದು ಮಾತಿಲ್ಲ! ಭೇಟಿಯಾಗದೆ ಇರುವುದರ ಬಗ್ಗೆ ರಮಣರೆ ಏನು ಹೇಳಿದರು ಎಂಬ ಮಾಹಿತಿ ಇದ್ದು ಅಥವಾ ಮಾಹಿತಿಯನ್ನು ಪಡೆಯಬಹುದಾಗಿದ್ದು, ತಾನು ಹೇಳಹೊರಟಿರುವ ಕಥನಕ್ಕೆ ಅದು ಅಷ್ಟಾಗಿ ಅಗತ್ಯವಿಲ್ಲವೆಂದು ಕಂಡುಕೊಳ್ಳುವ ಸಂಯಮ–ರಮಣ ಭಕ್ತನ–ಈ ಸಂಯಮ ತುಂಬಾ ಇಷ್ಟವಾಗುತ್ತದೆ. ಈ ಸಂಯಮ ಗಾಂಧಿ ಧ್ಯಾನದಿಂದಲೇ ಬಂದುದಾಗಿರಬೇಕು.

ವ್ಯಾಖ್ಯಾನಗಳು ಅನಿವಾರ್ಯ. ಏಕೆಂದರೆ ಅವು ಘಟನೆಗಳನ್ನು ಇನ್ನೊಂದು ಬೆಳಕಿನಲ್ಲಿ ನೋಡಲು ಸಾಧ್ಯವಾಗುವಂತೆ ಮಾಡುತ್ತವೆ. ನಮ್ಮ ತಪ್ಪು ನಮಗೆ ಅರಿವಾಗುವಂತೆ ಮಾಡುವುದೂ ವ್ಯಾಖ್ಯಾನಗಳೇ. ಆ ವ್ಯಾಖ್ಯಾನ ಇತರರು ಮಾಡಿದ್ದು ಆಗಿರಬಹುದು ಅಥವಾ ನಾವೇ ಮಾಡಿಕೊಳ್ಳುತ್ತಿರುವ ವ್ಯಾಖ್ಯಾನ ಆಗಿರಬಹುದು. ಆದರೆ ವ್ಯಾಖ್ಯಾನಗಳು ದಾರಿ ತಪ್ಪಿಸಲೂಬಹುದು. ಆದುದರಿಂದಲೇ ಈ ಕಥನದಲ್ಲಿ –ಘಟನೆಗಳಿಗೆ ವ್ಯಾಖ್ಯಾನಗಳನ್ನು ಆಯ್ದುಕೊಳ್ಳುವಲ್ಲಿ ಬಹು ಸೂಕ್ಷ್ಮವಾದ ಎಚ್ಚರ ಅಗತ್ಯ. ಈ ವಿಷಯದಲ್ಲಿ ಡಿ.ಎಸ್.ಎನ್. ಗೆ ಮೈಯ್ಯೆಲ್ಲ ಎಚ್ಚರ. ಈ ದೃಷ್ಟಾಂತವನ್ನು ನೋಡಿ: ಇದು ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಸೆರೆಮನೆಯಿಂದ ತಮ್ಮ ಮಗ ೧೭ವರ್ಷದ ಮಣಿಲಾಲನಿಗೆ ಬರೆದ ದೀರ್ಘ ಪತ್ರದ ಸಂದರ್ಭ. ಈ ಪತ್ರದಲ್ಲಿ ಗಾಂಧಿ – 'ಈಗ ಮನೆಯಲ್ಲಿರುವ ಹಿರಿಯ ಮಗನಾಗಿ ತಾಯಿ– ಅತ್ತಿಗೆ ಮತ್ತು ತಮ್ಮಂದಿರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ತನ್ನ ಕರ್ತವ್ಯವೆಂದು ಭಾವಿಸುವಂತೆ ಮನಸ್ಸನ್ನು ತರಬೇತುಗೊಳಿಸಿಕೊಳ್ಳುವುದೇ ನಿಜವಾದ ಶಿಕ್ಷಣವೇ ಹೊರತು ಅಕ್ಷರ ಜ್ಞಾನವಲ್ಲ. ಪ್ರತಿಯೊಬ್ಬನೂ ಹನ್ನೆರಡು ವಯಸ್ಸಿನ ನಂತರ ತನ್ನ ಕರ್ತವ್ಯವನ್ನು ಮನವರಿಕೆ ಮಾಡಿಕೊಳ್ಳುವಂತೆ ಆಲೋಚನೆ, ಮಾತು ಮತ್ತು ಕೆಲಸಗಳಲ್ಲಿ ಸಮಾಧಾನ, ಸತ್ಯವಂತಿಕೆಗಳನ್ನೂ, ಜೀವಹಾನಿ ಮಾಡದಿರುವಂತಹ ಕಲಿಕೆ ಆಚರಣೆಗಳನ್ನೂ ರೂಢಿಸಿಕೊಳ್ಳುವುದೇ ಶಿಕ್ಷಣ'– ಎನ್ನುತ್ತಾರೆ. ಇದರ ಬಗ್ಗೆ ಬರೆಯುತ್ತ– ಡಿ.ಎಸ್.ಎನ್– 'ಕುಟುಂಬದ ಲೌಕಿಕ ಯೋಗಕ್ಷೇಮದ ವಿಷಯಗಳಲ್ಲದೆ ಕುಟುಂಬದ ಆಂತರಂಗಿಕ ಯೋಗಕ್ಷೇಮದ ಬಗ್ಗೆಯೂ ಅವರು ನೀಡುವ ಸೂಚನೆಗಳ ಸ್ವರೂಪ ಗಾಂಧಿಯಲ್ಲಿದ್ದ ತಾಯ್ತನದ ಜೊತೆಗೆ ತಂದೆತನದ ಪರಿಚಯವನ್ನೂ ಮಾಡಿಕೊಡುತ್ತಾ ಈ ಪತ್ರ ಒಟ್ಟಾರೆ ಅವರ ವ್ಯಕ್ತಿತ್ವದಲ್ಲಿ ಸಿದ್ಧವಾಗುತ್ತಿದ್ದ ಹದದ ಸೂಚನೆಯನ್ನು ನೀಡುತ್ತದೆ' ಎನ್ನುತ್ತಾರೆ. ಜೊತೆಗೇ ಅಧ್ಯಾಯದ ಕೊನೆಯಲ್ಲಿ (೧೨೬ ಪುಟ) ಲೂಯಿ ಫಿಷರ್ ಮಾಡಿದ ವ್ಯಾಖ್ಯಾನದ ಸಾಲುಗಳನ್ನು ಉಲ್ಲೇಖಿಸುತ್ತಾರೆ. ಅದು ಹೀಗೆ. "ಇದೊಂದು ಹದಿಮೂರನೇ ವಯಸ್ಸಿಗೇ ಮದುವೆಯಾಗಿ, ಬಾಲ್ಯವನ್ನು ಕಳೆದುಕೊಂಡಿದ್ದ ತಂದೆಯೊಬ್ಬ ಅದರ ಫಲವಾಗಿ ತನ್ನ ಮಗನನ್ನು ತನ್ನದೇ ವ್ಯಕ್ತಿತ್ವದ ಎರಕದಲ್ಲಿ ರೂಪಿಸಿಕೊಂಡು ತನ್ನ ಬದುಕಿನ ಮಹಾನ್ ಗುರಿಯನ್ನು ತಲುಪುವುದಕ್ಕೆ ಬೇಕಾದ ಒಳ್ಳೆಯ ಸಹಾಯಕನೊಬ್ಬನನ್ನು ತಯಾರು ಮಾಡಿಕೊಳ್ಳುವ ಪ್ರಯತ್ನದಂತೆ ಕಾಣುತ್ತದೆ. ಮಣಿಲಾಲ, ವಕೀಲನೋ, ವೈದ್ಯನೋ ಆಗ ಬಯಸಿದ್ದರೆ, ಗಾಂಧಿ ಆತನನ್ನು ಒಬ್ಬ ಸಣ್ಣ ಸಂತನನ್ನಾಗಿ ಮಾಡಲು ಪ್ರಯತ್ನಿಸಿದರು. ದಿಗಂತದಲ್ಲಿ ನೆಟ್ಟಿದ್ದ ಗಾಂಧಿಯವರ ದೂರದೃಷ್ಟಿಗೆ ತನ್ನ ಹತ್ತಿರದವರ ಕಾಳಜಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗಲಿಲ್ಲವೇನೋ"–ಎಂದು ಬರೆಯುತ್ತಾರೆ. ಈ ಕಮೆಂಟ್ ಉಲ್ಲೇಖಾರ್ಹ ಎಂದು ಡಿಎಸ್ಎನ್‌ಗೆ ಕಂಡಿತಲ್ಲ, ಇದು ಅವರ ಮನಸ್ಸನ್ನು ಸೂಚಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಇಂಥ ಮನೋಸೂಚನೆಗಳು ತೇಲಿಸಿದ ಮಾತಿನಂತೆಯು ಕೇಳಿಸುವುದುಂಟು. ಜೆ. ಪಿ ಅವರ ಪತ್ನಿ ಪ್ರಭಾವತಿಯವರನ್ನು ಬ್ರಹ್ಮಚರ್ಯದ ಬದುಕಿಗೆ ಒಪ್ಪಿಸುವಲ್ಲಿ ಗಾಂಧಿ ಜೆಪಿ ಅವರೊಡನೆ ಸಮಾಲೋಚಿಸಿರಲಿಲ್ಲ ಎನ್ನುವುದು ಬೇರೆ ಮಾತು ಎಂದಷ್ಟೇ ಡಿ.ಎಸ್ಎನ್. ಹೇಳುವರು!

ಇನ್ನೂ ಕೆಲವು ಸಂದರ್ಭಗಳು ಇನ್ನಷ್ಟು ವಿವರಣೆಗಳನ್ನು ಕೊಡಲೇಬೇಕಿತ್ತು ಎನ್ನಿಸುವ ಸಂದರ್ಭಗಳು. ಆದರೆ ಅದೇಕೋ ಡಿ.ಎಸ್.ಎನ್. ಹಾಗೆ ಮಾಡ ಹೋಗುವುದಿಲ್ಲ. ಉದಾ : ಗಾಂಧಿ ಆಧುನಿಕ ನಾಗರಿಕತೆಯನ್ನು ಇನ್ನೊಂದೇ ದೃಷ್ಟಿಯಿಂದ ವಿಮರ್ಶಿಸಲು ಒಂದು ಕಾರಣವನ್ನು ಒದಗಿಸಿದ, ಜಿಕೆ ಚೆಸ್ಟರ್ಟನ್ ಬರೆದ ಅಂಕಣದ ಬಗ್ಗೆ–ಡಿ. ಎಸ್.ಎನ್. ಈಗ ಒದಗಿಸಿದ ವಿವರಗಳು ನಿಜಕ್ಕೂ ಇನ್ನಷ್ಟು ಸ್ಪಷ್ಟತೆಯನ್ನು ಬಯಸುತ್ತದೆ. ಅದಕ್ಕೆಂದೇ ರಾಮಚಂದ್ರ ಗುಹಾ ಅವರು ಒಂದು ಬಗೆಯ ವಿವರಣೆಯನ್ನು ಒದಗಿಸಿಯೂ ಇದ್ದಾರೆ. ಇಲ್ಲಿನ ವಿಚಿತ್ರವನ್ನು ಗಮನಿಸಿ, ಚೆಸ್ಟರ್ಟನ್ ಭಾರತದಲ್ಲಿ ಈಗ ಕೇಳಿಬರುತ್ತಿರುವ ರಾಷ್ಟ್ರೀಯತೆಯ ಕೂಗು ಭಾರತೀಯವು ಅಲ್ಲ, ರಾಷ್ಟ್ರೀಯವು ಅಲ್ಲ ಎಂದು ಲೇವಡಿ ಮಾಡಿದ್ದ. ಈ ಲೇವಡಿ ಹಾಗಾದರೆ ಭಾರತೀಯತೆ ಎಂದರೇನು? ರಾಷ್ಟ್ರೀಯತೆ ಎಂದರೇನು? ಎಂದು ಮೂಲಭೂತವಾಗಿ ಯೋಚಿಸುವಂತೆ ಮಾಡಿತು! ಅಂದರೆ ಅಪಹಾಸ್ಯದ ಮಾತು ಕೂಡ ಅದು ಚಿಂತನೆಯ ಸ್ವರೂಪದ್ದಾಗಿದ್ದರೆ – ಅಪಹಾಸ್ಯಕ್ಕೆ ಈಡಾದವರಲ್ಲಿ ಸ್ವತಂತ್ರ ಚಿಂತನೆಗಳನ್ನು ಸೃಜಿಸ ಬಲ್ಲದು. ಚಿಂತನೆಗಳು ಕೆಲಸ ಮಾಡುವ ಪರಿಯೇ ಬೇರೆ! ಇನ್ನೊಂದು ಸಂಸ್ಕೃತಿಯ ಜೊತೆ ಯಾವ ರೀತಿಯಲ್ಲಾದರೂ ಸಂಪರ್ಕ ಬಾರದೆ ನಮ್ಮಲ್ಲಿ ಸ್ವತಂತ್ರ ಚಿಂತನೆಗಳು ಉಂಟಾಗುವುದು ಕಷ್ಟ!– ಈ ಅಂಶಗಳನ್ನೆಲ್ಲ ಡಿ.ಎಸ್.ಎನ್ ಚೆನ್ನಾಗಿ ವಿಸ್ತರಿಸಬಲ್ಲರು ಎಂದಷ್ಟೇ ನಾನು ಹೇಳುತ್ತಿರುವುದು.

ಅದ್ಭುತವಾದ ಈ ಕಥನ ಎರಡನೆಯ ಮುದ್ರಣ ಕಾಣುವುದು ಖಚಿತ. ಕಾಣಲೇಬೇಕು. ಆಗ ಇಲ್ಲಿನ ಅನೇಕ ದೋಷಗಳು ನಿವಾರಣೆಯಾಗಬೇಕು. ಇನ್ನೊಮ್ಮೆ ಮನಮುಟ್ಟಿ ಪರಿಷ್ಕರಿಸಬೇಕಾದೀತು. ಈ ವಾಕ್ಯ ನೋಡಿ: "ಅನುಭಾವ ಮತ್ತು ಕುಶಲತೆಗಳ ಕುತೂಹಲಕಾರಿ ಕಸಿಯನ್ನು ಆಧರಿಸಿರುವಂತೆ ತೋರುವ ಆತನ ನೈತಿಕತೆ ಮತ್ತು ಬೌದ್ಧಿಕತೆಗಳು ಆಲೋಚನೆಯ ಸಾಮಾನ್ಯ ಪ್ರಕ್ರಿಯೆಗಳನ್ನು ದಿಕ್ಕುಗೆಡಿಸಿ ಬಿಡುತ್ತದೆ(ಪು ೨೧೬). ಇದು ಇಂಗ್ಲೀಷ್ ವಾಕ್ಯವೊಂದರ ಅನುವಾದ. ಕನ್ನಡದ ಓದುಗರಿಗೆ ತುಸು ಕಷ್ಟವೇ. ಪುಟ ೧೫೮ರಲ್ಲಿ ಭಗವದ್ಗೀತೆಯ ಶ್ಲೋಕ ತಪ್ಪಾಗಿ ಮುದ್ರಿತವಾಗಿದೆ. ಅದು ಅಧ್ಯಾಯತೋ ವಿಷಯಾನ್ ಅಲ್ಲ. 'ಧ್ಯಾಯತೋ ವಿಷಯಾನ್' ಆಗಬೇಕು.

ಎಷ್ಟು ಕಾವ್ಯಮಯವಾಗಿಯೂ ಡಿಎಸ್‌ಎನ್ ಬರೆಯಬಲ್ಲರು ಎಂಬುದಕ್ಕೆ ನಾನು ಉದಾಹರಿಸಬೇಕೆಂದು ಆಸೆಪಟ್ಟರೂ ಈ ಚಿಕ್ಕ ಪ್ರತಿಸ್ಪಂದನದಲ್ಲಿ ಎಡೆಇಲ್ಲದಾಗಿದೆ. ಅದಿರಲಿ ದೇವನೂರು ಮಹಾದೇವ, ಪುಸ್ತಕ ಬಿಡುಗಡೆ ಸಂದರ್ಭದಲ್ಲಿ ಹೇಳಿದಂತೆ, ತನ್ನ ತನು– ಮನ– ಧನ– ಆತ್ಮಗಳನ್ನು ಸುರಿದು (ಸುರಿಯಲು ಬೇರೆ ಇನ್ನೇನಿದೆ ಮನುಜರಲ್ಲಿ) ಡಿಎಸ್‌ಎನ್– ಈ ಕಥನವನ್ನು ಕಟ್ಟಿದ್ದಾರೆ. ನಾಡಿನ ಎಲ್ಲೆಡೆ ಇನ್ನೊಂದೆರಡು ವರ್ಷವಾದರೂ ಈ ಗ್ರಂಥದ ಕುರಿತು ಚಿಂತನೆಯ ಅಲೆಗಳು ಹರಡುವುದು ನಾಡಿನ ಕ್ಷೇಮಕ್ಕೆ ಒಳ್ಳೆಯದು .

**–ಲಕ್ಷ್ಮೀಶ ತೋಳ್ಪಾಡಿ**


## ಕುಪ್ಪಳಿಯಲ್ಲಿ ಅಧ್ಯಯನ ಶಿಬಿರ

**ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಪ್ರತಿ ವರ್ಷದಂತೆ ಈ ವರ್ಷವೂ ಈ ನವೆಂಬರ್ ೧೭ ಹಾಗೂ ೧೮ರ ಶನಿವಾರ ಮತ್ತು ಭಾನುವಾರ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಕುಪ್ಪಳಿಯ ಶತಮಾನೋತ್ಸವ ಭವನದಲ್ಲಿ 'ಪರ್ಯಾಯ ಅಭಿವೃದ್ಧಿ ಮಾದರಿ' ಕುರಿತು ಅಧ್ಯಯನ ಶಿಬಿರವನ್ನು ಆಯೋಜಿಸಿದೆ. ಈ ವಿಷಯ ಕುರಿತ ಪರಿಣತರಿಂದ ಉಪನ್ಯಾಸ, ಚರ್ಚೆ ಮತ್ತು ಚಲನಚಿತ್ರ ಪ್ರದರ್ಶನವಿರುತ್ತದೆ. ಎರಡೂ ದಿನಗಳ ಬೆಳಗಿನಿಂದ ಸಂಜೆಯವರೆಗಿನ ಶಿಬಿರದ ಕಾರ್ಯಕಲಾಪಗಳಲ್ಲಿ ಭಾಗವಹಿಸಬಲ್ಲಷ್ಟು ಬಿಡುವಿರುವ ಆಸಕ್ತರು ಶಿಬಿರಾರ್ಥಿಗಳಾಗಿ ಭಾಗವಹಿಸಲು ಈ ಕೆಳಗಿನ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು. ೧೭ರ ರಾತ್ರಿಯಿಂದ ೧೮ರ ಸಂಜೆವರೆಗಿನ ಊಟೋಪಹಾರ ಮತ್ತು ಸಾಮೂಹಿಕ ವಸತಿಗಾಗಿ ಪ್ರತಿ ಶಿಬಿರಾರ್ಥಿಗೆ ಶಿಬಿರ ಶುಲ್ಕ ರೂ.೨೫೦/– ವಿದ್ಯಾರ್ಥಿಗಳಿಗೆ ರೂ. ೧೫೦/–**

**ಸಂಪರ್ಕ ಸಂಖ್ಯೆಗಳು : 9731929731 / 9480141984 / 9845118866**

**–ಅಧ್ಯಕ್ಷರು: ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ**


ಪು: **ಲೈಂಗಿಕ ಜಾತಕ** (ಕಾದಂಬರಿ) ಲೇ: **ಕೆ. ಸತ್ಯನಾರಾಯಣ** ಪ್ರ: **ಅಭಿನವ,** ಬೆಂಗಳೂರು (೯೪೪೮೮೦೪೯೦೫) **ಪು: ೧೫೭ ಬೆಲೆ: ರೂ. ೧೫೦/–**

## ಸಲಿಂಗ ಕಾಮ ಕುರಿತ ಸ್ವಾರಸ್ಯಕರ ಜಿಜ್ಞಾಸೆ



**ಸ**ಲಿಂಗ ರತಿ ನಮ್ಮ ಪ್ರಾಚೀನ ಶಿಲ್ಪಗಳೇ ಸೂಚಿಸುವಂತೆ ನಮ್ಮ ಸಮಾಜಕ್ಕೆ ಹೊಸದೇನಲ್ಲ. ಆದರೆ ಈ ಹಿಂದೆ ಅಲ್ಲೊಂದು ಇಲ್ಲೊಂದು–ಅದೂ ಕದ್ದು ಮುಚ್ಚಿ–ನಡೆಯುತ್ತಿದ್ದ ಈ ಸಂಬಂಧ ಈಗ ಮುಕ್ತ ಮಾರುಕಟ್ಟೆ ಆರ್ಥಿಕತೆಯ ದಿನಗಳಲ್ಲಿ ರಾಜಾರೋಷವಾಗಿಯೇ ಪ್ರಕಟವಾಗುತ್ತಿದೆ. ಅದಕ್ಕೆ ಈಗ ಕಾನೂನಿನ ಮಾನ್ಯತೆಯೂ ಸಿಕ್ಕಿ ಅದರ ಸಂಘಟನೆಯನ್ನೂ ಕಟ್ಟಿಕೊಂಡು ಅದಕ್ಕೊಂದು ಸಾಮಾಜಿಕ ಮಾನ್ಯತೆಯನ್ನೂ ಒದಗಿಸಿಕೊಳ್ಳುವ ಪ್ರಯತ್ನಗಳೂ ನಡೆದಿವೆ. ಈ ಹಿನ್ನೆಲೆಯಲ್ಲಿ ಈ ಕೃತಿಯ ಕರ್ತೃ ನಮ್ಮ ಸಮಾಜದಲ್ಲಿ ಇತ್ತೀಚೆಗೆ ಏಕೆ ಶೃಂಗಾರ ರಸ ಕಡಿಮೆಯಾಗಿ ಗಂಡು–ಹೆಣ್ಣಿನ ನಡುವಣ ನೈಸರ್ಗಿಕ ಆಕರ್ಷಣೆ ಕಡಿಮೆಯಾಗುತ್ತಿದೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಸಲಿಂಗ ರತಿಯ ವಿದ್ಯಮಾನದಲ್ಲಿ ಅದಕ್ಕೊಂದು ಉತ್ತರ ಹುಡುಕಲೆಳಸುವ ಕಿರು 'ಕಾದಂಬರಿ' ಇದು.

ಸಲಿಂಗ ಕಾಮಾಚರಣೆಗೆ ಸಂಬಂಧಪಟ್ಟಂತೆ–ಸ್ತ್ರೀ ಸಲಿಂಗ ಕಾಮವೂ ಸೇರಿದಂತೆ– ಕನ್ನಡದಲ್ಲಿ ಈಗಾಗಲೇ ಎರಡು ಮೂರು ಗಮನಾರ್ಹ ಕಥೆ–ಕಾದಂಬರಿಗಳು ಬಂದಿವೆ. ಆದರೆ ಈ ಕೃತಿ ಇಂತಹ ಕಥನಗಳ ಹಿಂದಿನ ನಾಟಕೀಯತೆ ಮತ್ತು ಸ್ವಾರಸ್ಯಗಳನ್ನು ಮೀರಿ ಈ ವಿದ್ಯಮಾನ ಈಗ ಸಾಮಾಜಿಕ ಮಾನ್ಯತೆ ಗಳಿಸಿಕೊಳ್ಳಲು ನಡೆಸಿರುವ ಪ್ರಯತ್ನಗಳ ಚಲನಶೀಲತೆಯನ್ನು ಗುರುತಿಸುವ ಪ್ರಯತ್ನ ಮಾಡುತ್ತದೆ. ಇದಕ್ಕಾಗಿ ಅದು ಮಂಡ್ಯ ಎಂದು ಸ್ಪಷ್ಟವಾಗಿ ಗೊತ್ತಾಗುವ ಗ್ರಾಮೀಣ ಪ್ರದೇಶವೊಂದರ ಮುಖ್ಯ ನಗರವೊಂದರಲ್ಲಿ ಸಲಿಂಗ ಕಾಮಿಗಳ ಸಮ್ಮೇಳನವೊಂದರ ಚಿತ್ರವೊಂದನ್ನು ಕಟ್ಟಿಕೊಡುವ ಲೇಖಕ ಅದರ ಕಾರ್ಯಕಲಾಪಗಳ ವೀಕ್ಷಕನಾಗಿ ಅವುಗಳ ಮೂಲಕ ಈ ವಿದ್ಯಮಾನದ ವಿವಿಧ ಆಯಾಮಗಳ ನಿರೂಪಣೆ ಮಾಡುತ್ತಾನೆ. ಇಲ್ಲಿ ಈ ಸಮ್ಮೇಳನದ ಅಧ್ಯಕ್ಷತೆ ವಹಿಸುವ ಇದೇ ಗ್ರಾಮೀಣ ಪ್ರದೇಶದ ಶ್ರೀನಿವಾಸ ಮತ್ತು ಆತನ 'ಪತ್ನಿ' ನೀಲಂ ಬರುವಾ ಅವರೇ ಈ ಕೃತಿಯಲ್ಲಿರುವ ಜಿಜ್ಞಾಸೆ ಅಥವಾ ಪರಿಶೀಲನೆಯನ್ನು ಅವರಿಸಿರುವ ಎರಡು ಪ್ರಮುಖ ಪಾತ್ರಗಳು. ಮಿಕ್ಕವು ಉದಾ: ಗೂಡೆ ನಾಗಮ್ಮ, ಮರಿಲಿಂಗಯ್ಯ, ಅರುಳ್ ಸ್ವಾಮಿ, ಲಾರೆನ್ಸ್ ಸೋಮಶೇಖರ್, ಬಾಲರಾಜನ್, ಚಿಕ್ಕಮ್ಮ, ತನ್ಮಯಿ, ಶಿವಕಾಮಿ ಇತ್ಯಾದಿಗಳು ಈ ಜಿಜ್ಞಾಸೆಗೆ ಪೂರವಾಗಿ ಬಂದು ಹೋಗುವವಾದರೂ ಗೂಡೆ ನಾಗಮ್ಮ ಮತ್ತು ಅರುಳ್ ಸ್ವಾಮಿಗಳ ಪಾತ್ರಗಳ ಹೊರತಾಗಿ ಮಿಕ್ಕವಾವೂ ಕಥನದ ಆಳವನ್ನು ಹೆಚ್ಚಿಸದೆ ಕೃತಿಯ ಉದ್ದಗಲಗಳನ್ನು ಮಾತ್ರ ಹೆಚ್ಚಿಸುತ್ತಾ, ಕೃತಿಯನ್ನು ಅಂತಿಮವಾಗಿ ಬರಡು ಸಲಿಂಗ ಕಾಮ ಪುರಾಣವೊಂದನ್ನಾಗಿ ಮಾತ್ರ ಮಾಡುವಲ್ಲಿ ಯಶಸ್ವಿಯಾಗಿವೆ. ಏಕೆಂದರೆ ಈ ಪಾತ್ರಗಳ ನಡಾವಳಿ ಮತ್ತು ಮಾತುಗಳು ಕೃತಿಕಾರ ಕೆ.ಸತ್ಯನಾರಾಯಣರ ಬರವಣಿಗೆಯ ಛಾಪಾದ ಮಂಡ್ಯದ ಕಡೆಯ ಮಧ್ಯಮವರ್ಗದ ಬ್ರಾಹ್ಮಣರ ರುಚಿಕಟ್ಟಾದ ವಾಗ್ವೈಖರಿಯಲ್ಲಿ ಮಿಂಚುವವಾದರೂ, ಇವುಗಳು ಕೃತಿಯ ತಾತ್ವಿಕ ಕೇಂದ್ರದೊಂದಿಗೆ ಜೋಡಣೆಗೊಳ್ಳದೆ ಸುಮ್ಮನೆ ಚೆಲ್ಲಿ ಹೋಗುತ್ತವೆ.

ಇದೇ ಮಾತನ್ನು ಶ್ರೀನಿವಾಸ ಮತ್ತು ನೀಲಂ ಬರುವಾ ಅವರ ಕರಡು ಕಾದಂಬರಿಗಳೆಂದು ಇಲ್ಲಿ ನಿರೂಪಿತವಾಗಿರುವ ಒಣ ಬೌದ್ಧಿಕ ಜಿಜ್ಞಾಸೆಗಳ ಬಗ್ಗೆಯೂ ಹೇಳಬಹುದು. ಹಾಗೆ ನೋಡಿದರೆ ಮೇಲೆ ಉಲ್ಲೇಖಿಸಿದ ಎರಡು ಪಾತ್ರಗಳ ಹೊರತಾಗಿ ಮಿಕ್ಕವೆಲ್ಲವೂ ಚಪ್ಪಟೆ ಪಾತ್ರಗಳೇ. ಇದಕ್ಕೆ ಮುಖ್ಯ ಕಾರಣಗಳು ಎರಡು. ಒಂದು ಕೃತಿ ತನ್ನನ್ನು ಕಟ್ಟಿಕೊಳ್ಳಲು ರೂಪಿಸಿಕೊಂಡಿರುವ (ಸಮ್ಮೇಳನದ ಆವರಣ ಸಾಮಾಜಿಕವಾಗಿ ವಿಶ್ವಾಸಾರ್ಹವೆನಿಸದೆ, ಕಥನ ಸ್ವಾರಸ್ಯಕರ–ಕೆಲವೊಮ್ಮೆ 'ದಿಟ್ಟ'ವೆನಿಸುವ–ಪ್ರಸಂಗಗಳು ಮತ್ತು ವರ್ಣನೆಗಳ ಹೊರತಾಗಿಯೂ ಸಾರತಃ ಬೌದ್ಧಿಕವಾಗಿಯೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳಲೆಳಸುವುದು. ಇನ್ನೊಂದು ಸಲಿಂಗ ಕಾಮವನ್ನು ಮೂಲತಃ ದೈಹಿಕ ನೆಲೆಯಲ್ಲಿ ಮಾತ್ರ ಅರ್ಥ ಮಾಡಿಕೊಳ್ಳಲೆಳಸಿರುವುದು. ಹೊಸ ಆರ್ಥಿಕತೆ ಕಟ್ಟಿರುವ ಹೊಸ ರಾಜಕಾರಣಕ್ಕೂ ಇದು ಕೆರಳಿರುವುದಕ್ಕೂ ಏನಾದರೂ ಸಂಬಂಧವಿದೆಯೇ ಎಂಬುದರ ಸೂಕ್ಷ್ಮ ಅನ್ವೇಷಣೆಯ–ಅದರ ಪರೋಕ್ಷ ಸೂಚನೆಗಳ ಹೊರತಾಗಿ–ಛಾತಿಯ ('ರಿಸ್ಕ್'?) ಗೈರುಹಾಜರಿಯೇ ಕೃತಿ ಆರಂಭದಲ್ಲಿ ಹುಟ್ಟಿಸುವ ಕುತೂಹಲ ನಿರಾಶೆಯಲ್ಲಿ ಕೊನೆಗೊಳ್ಳಲು ಕಾರಣವಾಗುತ್ತದೆ.

**–ಡಿ.ಎಸ್. ನಾಗಭೂಷಣ**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು



**–ಬಿಳಿಜಗೆರೆ ಜಯಪ್ರಕಾಶ್**
ಮತ್ತು ಕುಟುಂಬ
**ಹಾರೋಹಳ್ಳಿ**
(ರಾಮನಗರ ಜಿಲ್ಲೆ)

'ಹೊಸ ಮನುಷ್ಯ' ಓದುಗರೆಲ್ಲರಿಗೂ
**ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು**




–ಸಮತಾ ಯುವರಾಜ್
ಮತ್ತು **ಕುಟುಂಬ**
**ವಿಜಯನಗರ ೪ನೇ ಹಂತ**
ಮೈಸೂರು

**'ಹೊಸ ಮನುಷ್ಯ' ಓದುಗರೆಲ್ಲರಿಗೂ**
**ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು**



**-ಡಾ. ಯು. ಅರುಣಾಚಲ**
**ಮಾನಸ ನರ್ಸಿಂಗ್ ಹೋಂ**
**ತೀರ್ಥಹಳ್ಳಿ** (ಶಿವಮೊಗ್ಗ ಜಿ.)

## ಕೊನೆಯ ಸಾಲುಗಳು



ಇಂಡಿಯಾ ನಮಗೆ ಕಾಣುವುದು ಕರ್ನಾಟಕದ ಮೂಲಕವೇ; ಕನ್ನಡದ ಮೂಲಕವೇ. ಕರ್ನಾಟಕವಿಲ್ಲದೆ ಭಾರತ ಎಂಬ ರಾಷ್ಟ್ರ ಎಲ್ಲಿ ಬಂತು? ಭಾರತ ರಾಷ್ಟ್ರ ಎಂದರೆ ಇಂತಹ ಹಲವು ರಾಜ್ಯಗಳ, ಭಾಷೆಗಳ ಒಕ್ಕೂಟವಷ್ಟೆ. ಇವಕ್ಕೆ ಬಾಧೆಯಾದರೆ ಭಾರತ ರಾಷ್ಟ್ರಕ್ಕೂ ಬಾಧೆ ಒದಗಿದಂತೆಯೇ.!

-ಮಾಸ್ತಿ ವೆಂಕಟೇಶ ಅಯ್ಯಂಗಾರ್

**ಶುಭಾಶಯಗಳೊಂದಿಗೆ**

ಸುಮನ ಸದಾನಂದ
ಮತ್ತು ಕುಟುಂಬ
ಬಸವೇಶ್ವರ ನಗರ
ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)